**ಸಂಪುಟ:** 05 **ಸಂಚಿಕೆ:** 328 **ಪುಟಗಳು:** 08 ಮಂಗಳವಾರ 10 ಫೆಬ್ರವರಿ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**
ವೃಕ್ಷಕ್ಕೆ ದುಃಖ ಬೇರು ಎನಿಸಿದರೆ ಸಂತೋಷ ಕೊಂಬೆಗಳು, ಬೇರು ಕೊಂಬೆಗಳೆರಡೂ ಮರದ ಲವಲವಿಕೆಗೆ ಅಗತ್ಯ. ಅಂತೆಯೇ ಜೀವನಕ್ಕೆ ದುಃಖ ಮತ್ತು ಸಂತೋಷಗಳು..!

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಮೆಟ್ರೋ ಪ್ರಯಾಣ ದರ ಏರಿಕೆ ತಡೆಹಿಡಿದಿದ್ದು ನಾವೇ

• ಉದಯಯವಾಹಿನಿ,ಬೆಂಗಳೂರು

ಮೆಟ್ರೋ ದರ ಏರಿಕೆಯನ್ನು ತಡೆಹಿಡಿದಿರುವುದು ನಾವೇ, ಕೇಂದ್ರ ಸರ್ಕಾರ ಅಲ್ಲ. ಜನರಿಗೆ ತೊಂದರೆ ಆಗೋದಕ್ಕೆ ಬಿಡುವುದಿಲ್ಲ ಎಂದು ಹೇಳಿದ್ದೆವು. ಅಂತೆಯೇ ನಡೆದುಕೊಳ್ಳುತ್ತಿದ್ದೇವೆ. ಎಲ್ಲಾ ಎಫರ್ಟ್ ನಮ್ಮದೇ ಕೇಂದ್ರ ಏನೂ ಮಾಡಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ದರ ಪರಿಷ್ಕರಣೆಯ ಆಧಾರವನ್ನು ವಿವರಿಸಿದ ಶಿವಕುಮಾರ್, ಬೆಂಗಳೂರು ಮೆಟ್ರೋ ರೈಲು ನಿಗಮ ಲಿಮಿಟೆಡ್ (ಬಿಎಂಆರ್‌ಸಿಎಲ್) ಕಾರ್ಯಾಚರಣೆ, ನಿರ್ವಹಣೆ ಮತ್ತು ದುರಸ್ತಿ (ಒಎಂಆರ್) ವೆಚ್ಚಗಳು, ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಹಣದುಬ್ಬರ-ಸಂಬಂಧಿತ ವೆಚ್ಚಗಳು ಮತ್ತು ಇಂಧನ ವೆಚ್ಚಗಳನ್ನು ಗಣನೆಗೆ ತೆಗೆದುಕೊಳ್ಳುವ ಸ್ಥಿರ ಸೂತ್ರವನ್ನು ಅನುಸರಿಸುತ್ತದೆ ಎಂದು ಹೇಳಿದರು. ಕಳೆದ ವರ್ಷ ಫೆಬ್ರವರಿಯಲ್ಲಿ ಮೆಟ್ರೋ ಏಕಾಏಕಿ ಹೆಚ್ಚು ದರ ಏರಿಕೆ ಮಾಡಿತ್ತು. ಜನರ ಆಕ್ರೋಶಕ್ಕೆ ಕೊಂಚ ದರ ಕಡಿಮೆ ಮಾಡಿತ್ತು. ಇದೀಗ ಮತ್ತೆ ಮೆಟ್ರೋ ದರ ಏರಿಕೆ ಬಗ್ಗೆ ಮಾತನಾಡಿದ್ದು, ಇಂದಿನಿಂದಲೇ ಹೊಸ ದರ ಜಾರಿಗೆ ಬರಲಿದೆ ಎನ್ನಲಾಗಿತ್ತು.

## ಕಳಸಾ ಬಂಡೂರಿ ವಿವಾದ!

• ಉದಯಯವಾಹಿನಿ,ಬೆಂಗಳೂರು

ಕಳಸಾ ಬಂಡೂರಿ ಯೋಜನೆ ವಿವಾದ ನ್ಯಾಯಾಲಯದಲ್ಲಿದ್ದು, ರಾಜ್ಯ ಸರ್ಕಾರ ಸೂಕ್ತ ವಾದ ಮಂಡಿಸಿ ಸಮಸ್ಯೆ ಪರಿಹರಿಸಿಕೊಳ್ಳುವುದು ಬಿಟ್ಟು, ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವಶ್ಯಕವಾಗಿ ಕೇಂದ್ರ ಸರ್ಕಾರ ಹಾಗೂ ಪ್ರಹ್ಲಾದ ಜೋಶಿ ಅವರ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಕಿಡಿಕಾರಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳಸಾ ಬಂಡೂರಿ ಯೋಜನೆ ಅನುಷ್ಠಾನಗೊಳಿಸಲು ಬಹುತೇಕ ಕೆಲಸಗಳನ್ನು ಬಿಜೆಪಿ ಮಾಡಿದೆ. ಈ ಬಗ್ಗೆ ಏನು ಮಾಡದ ಕಾಂಗ್ರೆಸ್ ಸರ್ಕಾರವೂ ವನ್ಯಜೀವಿ ಮಂಡಳಿ ಅನುಮತಿ ಕೊಡಿಸುತ್ತಿಲ್ಲ ಎಂದು ಸುಳ್ಳು ಆರೋಪ ಮಾಡಿ ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದೆ. ಸುಳ್ಳು ಘೋಷಣೆ, ಆರೋಪಗಳ ಮಾಡಿ ಅವಕಾರಕ್ಕೆ ಬರಲು ಕಾಂಗ್ರೆಸ್ ಇಂತಹ ಕೆಲಸ ಮಾಡುತ್ತದೆ ಎಂದರು.

ಕಳಸಾ ಬಂಡೂರಿ ಯೋಜನೆ ವಿವಾದ ನ್ಯಾಯಾಲಯದಲ್ಲಿ ಇತ್ತು. ಸುಪ್ರೀಂ ಕೋರ್ಟ್ ನೀರು ಬಳಸಲು ಆದೇಶಿದ್ದು, ಪರಿಸರ, ವನ್ಯಜೀವಿ ಮಂಡಳಿ ಅನುಮತಿ ಪಡೆಯಲು ಸೂಚಿಸಿತ್ತು. ಕೇಂದ್ರ ಸರ್ಕಾರ ಪರಿಸರ ಇಲಾಖೆ ಅನುಮತಿ ನೀಡಿದ್ದು, ವನ್ಯ ಮಂಡಳಿ ಅನುಮತಿ ಸಲುವಾಗಿ ಗೋವಾ ನ್ಯಾಯಾಲಯ ಮೊರೆ ಹೋಗಿದೆ.

## ಅಲ್ಪಸಂಖ್ಯಾತ ನಿಗಮ ಮಂಡಳಿ ಸಾಲದ ಬಡ್ಡಿ ಮನ್ನಾ ಇದು ಸಂವಿಧಾನ ವಿರೋಧಿ ನಡೆ

• ಉದಯಯವಾಹಿನಿ,ಬೆಂಗಳೂರು

ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ಸಾಲದ ಬಡ್ಡಿ ಮನ್ನಾ ಮಾಡಿರುವ ಸರ್ಕಾರದ ನೀತಿಯನ್ನ ಖಂಡಿಸಿರುವ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಮುಖ್ಯಮಂತ್ರಿಗಳು ಒಂದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಬೆಣ್ಣೆ ಹಚ್ಚುವ ಕೆಲಸ ಮಾಡಬಾರದು ಎಂದು ವಾಗ್ದಾಳಿ ನಡೆಸಿದ್ದಾರೆ.

ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದರು. ಈ ವೇಳೆ ಕೇವಲ ಒಂದು ಕೋಮಿನ ಜನರನ್ನು ಓಲೈಸುವ ರಾಜಕಾರಣ ಮಾಡುವುದು ಇತರ ಸಮುದಾಯಗಳಿಗೆ ಮಾಡುವ ದೊಡ್ಡ ಅನ್ಯಾಯವಾಗಿದೆ. ಕೇವಲ ಒಂದು ವರ್ಗದ ಮತಗಳನ್ನು ನೆಚ್ಚಿಕೊಂಡು ಈ ರೀತಿ ತಾರತಮ್ಯ ಮಾಡುವುದು ಸಂವಿಧಾನ ವಿರೋಧಿ ನೀತಿಯಾಗುತ್ತದೆ. ಸರ್ಕಾರಕ್ಕೆ ಬಡವರ ಮೇಲೆ ನಿಜವಾದ ಕಾಳಜಿ ಇದ್ದರೆ ಎಲ್ಲಾ ನಿಗಮಗಳ ಮೂಲಕ ಸಾಲ ಪಡೆದಿರುವ ಬಡವರ ಬಡ್ಡಿಯನ್ನೂ ತಕ್ಷಣವೇ ಮನ್ನಾ ಮಾಡಲಿ ಎಂದು ಸವಾಲು ಹಾಕಿದರು. ಇದೇ ವೇಳೆ, ಸಂಸದ ತೇಜಸ್ವಿ ಸೂರ್ಯ ಅವರನ್ನು ಪೊಲೀಸರು ವಶಕ್ಕೆ ಪಡೆದ ಬಗ್ಗೆ, ಆಕ್ರೋಶ ಹೊರಹಾಕಿದರು. ತೇಜಸ್ವಿ ಸೂರ್ಯ ಅವರು ಜನರ ಪರವಾಗಿ ಧ್ವನಿ ಎತ್ತಿದ್ದಕ್ಕೆ ಅವರನ್ನು ಬಂಧಿಸಿರುವುದು ಈ ಸರ್ಕಾರದ ಸರ್ವಾಧಿಕಾರಿ ಧೋರಣೆ ಹಾಗೂ ಜನವಿರೋಧಿ ನೀತಿಯನ್ನ ಎತ್ತಿ ತೋರಿಸುತ್ತಿದೆ. ಇಂತಹ ಜನವಿರೋಧಿ ನೀತಿಗಳು ಮತ್ತು ಸರ್ವಾಧಿಕಾರಿ ನಡವಳಿಕೆಗಳು ಪ್ರಜಾಪ್ರಭುತ್ವದಲ್ಲಿ ಬಹಳ ದಿನ ನಡೆಯುವುದಿಲ್ಲ ಎಂದು ಎಚ್ಚರಿಸಿದರು.

ರಾಜ್ಯದ ಜನತೆ ಕಾಂಗ್ರೆಸ್‌ಗೆ 136 ಸ್ಥಾನಗಳನ್ನು ನೀಡಿ ಅಧಿಕಾರಕ್ಕೆ ತಂದಿರುವುದು ಅಭಿವೃದ್ಧಿ ಮಾಡಲಿ ಎಂಬ ಆಶಯದಿಂದಲೇ ಹೊರತು, ಕೇವಲ ಭ್ರಷ್ಟಾಚಾರ ಮತ್ತು ಬೆಲೆ ಏರಿಕೆ ಮಾಡಲಿಕ್ಕಲ್ಲ. ಆದರೆ ಪ್ರಸ್ತುತ ಸರ್ಕಾರ ಜನವಿರೋಧಿ ನೀತಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಜನರ ನಂಬಿಕೆಗೆ ದ್ರೋಹ ಬಗೆಯುತ್ತಿದೆ.

**ಮಾವೋವಾದಿ ಸಂಘಟನೆಯಲ್ಲಿ ತೊಡಗಿರುವ ಮಹಿಳೆಯರು ಶಸ್ತ್ರಾಸ್ತ್ರ ತ್ಯಜಿಸಿ ಮುನ್ನೆಲೆಗೆ ಬರುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಮನವಿ ಮಾಡಿದ್ದಾರೆ. ಛತ್ತೀಸ್‌ಗಢದ ನಕ್ಸಲ್‌ಪೀಡಿತ ಪ್ರದೇಶಗಳಲ್ಲಿ ಶಾಂತಿಯನ್ನು ಮರುಸ್ಥಾಪಿಸಲು ಕರೆ ನೀಡಿದ ಅವರು, ರಾಯ್‌ಪುರದಲ್ಲಿ ನಡೆದ ಸಮಾವೇಶದಲ್ಲಿ, ಕೇಂದ್ರ ಮತ್ತು ಛತ್ತೀಸ್‌ಗಢ ಸರ್ಕಾರ ಯಾರ ಮೇಲೂ ಒಂದೇ ಒಂದು ಗುಂಡು ಹಾರಿಸಲು ಬಯಸುವುದಿಲ್ಲ.**

# ಶಾ ಖಡಕ್ ವಾರ್ನಿಂಗ್



• ನೀವು ಶಸ್ತ್ರಾಸ್ತ್ರ ತ್ಯಜಿಸಿ ಬನ್ನಿ.
• ನಾವು ರತ್ನಗಂಬಳಿ ಹಾಸಿ ಸ್ವಾಗತಿಸುತ್ತೇವೆ.
• ಮಹಿಳಾ ನಕ್ಸಲರಿಗೆ ಶಾ ಕರೆ
• ಮಾರ್ಚ್ 31ರೊಳಗೆ ಭಾರತ ನಕ್ಸಲ್ ಮುಕ್ತ ದೇಶ.
• ಹೋರಾಟದಲ್ಲಿ ಸಕರಾತ್ಮಕ ಫಲಿತಾಂಶ.

• ಉದಯವಾಹಿನಿ, ನವದೆಹಲಿ

ಸಮಾಜದ ಮುಖ್ಯವಾಹಿನಿಗೆ ಬರಲು ಶರಣಾಗುವ ಮತ್ತು ಶಸ್ತ್ರಾಸ್ತ್ರ ತ್ಯಜಿಸುವ ಮಾವೋವಾದಿಗಳಿಗೆ ಸರ್ಕಾರ ರತ್ನಗಂಬಳಿ ಹಾಸಲಿದೆ. ಅವರ ಪುನರ್ವಸತಿಗೆ ಸಾಧ್ಯವಿರುವ ಎಲ್ಲಾ ಸಹಾಯವನ್ನೂ ಒದಗಿಸುತ್ತೇವೆ ಎಂಬ ಭರವಸೆ ನೀಡಿದರು.

ಕೈಯಲ್ಲಿ ಬಂದೂಕು ಹಿಡಿದು ನಿಂತಿರುವ ಹೆಣ್ಣು ಮಕ್ಕಳಿಗೆ ನಾನು ವಿಶೇಷವಾಗಿ ಮನವಿ ಮಾಡುತ್ತೇನೆ. ದಯವಿಟ್ಟು ಈಗ ಶರಣಾಗಿ. ಹಿಂಸಾಚಾರದ ಹಾದಿಯಲ್ಲಿ ನೀವು ಏನೂ ಗಳಿಸಲು ಸಾಧ್ಯವಿಲ್ಲ. ಹೆಚ್ಚು ಉತ್ತಮ ಮತ್ತು ಹೆಚ್ಚು ಗೌರವಾನ್ವಿತ ಜೀವನ ನಿಮಗಾಗಿ ಕಾಯುತ್ತಿದೆ ಎಂದು ಅಮಿತ್ ಶಾ ಭಾವನಾತ್ಮಕವಾಗಿಯೂ ಮನವಿ ಮಾಡಿದರು. ಶರಣಾದ ಮಹಿಳಾ ಮಾವೋವಾದಿಗಳಿಗೆ ಶಿಕ್ಷಣ, ಭದ್ರತೆ ಮತ್ತು ಗೌರವದೊಂದಿಗೆ ಸಮಾಜದಲ್ಲಿ ಪುನರ್ವಸತಿ ಕಲ್ಪಿಸಲು ಸರ್ಕಾರ ಸಂಪೂರ್ಣವಾಗಿ ಬದ್ಧ ಎಂದರು. ನಾಲ್ಕೂವರೆ ದಶಕಗಳಿಂದ ಮಾವೋವಾದಿ ಸಿದ್ಧಾಂತಗಳು ಅಭಿವೃದ್ಧಿಯ ಹಾದಿಯಲ್ಲಿ ಹಾವಿನಂತೆ ತನ್ನ ವಿಷ ಹರಡುತ್ತಿವೆ. ಬಸ್ತಾರ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು ಮಾವೋವಾದಿಗಳ ಬೆದರಿಕೆಯಿಂದ ಅಭಿವೃದ್ಧಿಯಿಂದ ಹಿಂದುಳಿದಿವೆ. ಮಾವೋಗಳು ಶಾಲೆಗಳನ್ನು ಸುಟ್ಟು ಹಾಕುವ ಮೂಲಕ ಹೊಸ ಪೀಳಿಗೆ ಅನಕ್ಷರಸ್ಥರಾಗಿ ಉಳಿದಿವೆ ಎಂದು ಹೇಳಿದರು. ಪಿಎಸ್‌ಸಿಗಳು ಮತ್ತು ಆರೋಗ್ಯ ಕೇಂದ್ರಗಳನ್ನು ಮುಚ್ಚುವುದು ಮತ್ತು ಶಾಶ್ವತ ಬುಡಕಟ್ಟು ಜನಾಂಗದವರ ಹಕ್ಕುಗಳ ಉಲ್ಲಂಘನೆ. ಈಗ ಈ ಪ್ರದೇಶಗಳಲ್ಲಿ ಬ್ಯಾಂಕ್ ಖಾತೆಗಳು, ಪಡಿತರ ಚೀಟಿಗಳು ಮನೆಗಳ ನಿರ್ಮಾಣ ಕಾರ್ಯಗಳು ಯುದ್ಧೋಪಾದಿಯಲ್ಲಿ ಪ್ರಾರಂಭವಾಗಿವೆ. ಛತ್ತೀಸ್‌ಗಢ ಶ್ರೀರಾಮನ ತಾಯಿಯ ಮನೆ ಎಂದಿರುವ ಗೃಹ ಸಚಿವರು, ಪ್ರಧಾನಿ ಮೋದಿಯವರ 2047ರ ಅಭಿವೃದ್ಧಿ ಹೊಂದಿದ ಭಾರತದ ಕನಸನ್ನು ಛತ್ತೀಸ್‌ಗಢದ ಕೊಡುಗೆ ಇಲ್ಲದೆ ನನಸಾಗಿಸಲು ಸಾಧ್ಯವಿಲ್ಲ ಎಂದರು. ಸ್ವಾತಂತ್ರ್ಯಪೂರ್ವ ಮತ್ತು ನಂತರದ ಭಾರತದ ಪ್ರಯಾಣಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘ ಅಪಾರ ಕೊಡುಗೆ ನೀಡಿದೆ. ಇದನ್ನು ಯಾವುದೇ ಇತಿಹಾಸಕಾರರು ಕೂಡಾ ನಿರಾಕರಿಸಲು ಸಾಧ್ಯವಿಲ್ಲ. ರಾಷ್ಟ್ರೀಯ ಮತ್ತು ಸಾಮಾಜಿಕ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಆರ್‌ಎಸ್‌ಎಸ್ ಸ್ವಯಂಸೇವಕರ ಸಕಾರಾತ್ಮಕ ಕೊಡುಗೆ ಕಾಣುತ್ತದೆ ಎಂದು ಹೇಳಿದರು.

### ದೇಶದೆಲ್ಲೆಡೆ ಸೇವೆ ಆರಂಭ

ಭಾರತ್ ಟ್ಯಾಕ್ಸಿ ಸೇವೆಗೆ ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಚಾಲನೆ ನೀಡಿದ್ದಾರೆ.ಇದು ದೇಶದಲ್ಲಿ ಸಹಕಾರ ತತ್ತ್ವದಲ್ಲಿ ಟ್ಯಾಕ್ಸಿ ಸೇವೆಗಳನ್ನು ಒದಗಿಸುವ ಮೊದಲ ವೇದಿಕೆ ಆಗಿದೆ. ಮುಂದಿನ ಮೂರು ವರ್ಷಗಳಲ್ಲಿ ಭಾರತ್ ಟ್ಯಾಕ್ಸಿ ಸೇವೆಯನ್ನು ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಮತ್ತು ದ್ವಾರಕಾದಿಂದ ಕಾಮಾಕ್ಯದವರೆಗೆ ವಿಸ್ತರಿಸಲಾಗುವುದು ಎಂದು ವೇದಿಕೆಯನ್ನು ಉದ್ಘಾಟಿಸಿದ ಬಳಿಕ ಸಚಿವ ಶಾ ಅವರು ಹೇಳಿದ್ದಾರೆ. ಭಾರತ್ ಟ್ಯಾಕ್ಸಿ ಜೊತೆ ಸೇರಿರುವ ಚಾಲಕರೊಂದಿಗೆ ಲಾಭವನ್ನು ಹಂಚಿಕೊಳ್ಳಲಾಗುವುದು. ಚಾಲಕರು ಗಳಿಸುವ ಪ್ರತಿ 100 ಹಣದಲ್ಲಿ 80 ಚಾಲಕರ ಬ್ಯಾಂಕ್ ಖಾತೆಗೆ ಜಮಾ ಆಗಲಿದೆ. ಉಳಿದ 20 ವೇದಿಕೆಯಲ್ಲಿ ಉಳಿಯಲಿದೆ. ಆ .20ಕ್ಕೂ ಚಾಲಕರೇ ಮಾಲೀಕರಾಗಿ ಇರುತ್ತಾರೆ ಎಂದಿದ್ದಾರೆ.ಗ್ರಾಹಕರು, ಈ ವೇದಿಕೆಯ ಮೂಲಕ ಕಾರು, ತ್ರಿಚಕ್ರ ಮತ್ತು ದ್ವಿಚಕ್ರ ವಾಹನಗಳ ಸೇವೆಯನ್ನು ಪಡೆಯಬಹುದಾಗಿದೆ ಎಂದು ಹೇಳಿದ್ದಾರೆ.ಈಗ ದೇಶದಲ್ಲಿ ಟ್ಯಾಕ್ಸಿ ಸೇವೆಗಳನ್ನು ಒದಗಿಸುವ ಮಾರುಕಟ್ಟೆಯಲ್ಲಿ ಊಬರ್, ಓಲಾ ಮತ್ತು ರ್‍ಯಾಪಿಡೊ ಪ್ರಾಬಲ್ಯ ಹೊಂದಿವೆ.

**1** 2026 ಮಾರ್ಚ್ 31ರೊಳಗೆ ಭಾರತ ನಕ್ಸಲ್ ಮುಕ್ತ ದೇಶವಾಗಲಿದೆ.

**2** ನಕ್ಸಲ್ ವಿರೋಧಿ ಆಪರೇಷನ್ ಆರಂಭಿಸಿರುವ ಕೇಂದ್ರ ಸರ್ಕಾರ.

**3** ದೇಶಕ್ಕೆ ವಿನಾಶಕಾರಿ ಕಮ್ಯೂನಿಸ್ಟ್ ಸಿದ್ಧಾಂತದ ಅಗತ್ಯವಿಲ್ಲ ಎಂದ ಶಾ.

### ಬುಡಕಟ್ಟು ಸಮುದಾಯಗಳ ; ಘರ್ಷಣೆ

ಮಣಿಪುರದ ತಂಗ್ಖುಲ್ ನಾಗಾ ಮತ್ತು ಕುಕಿ ಬುಡಕಟ್ಟು ಸಮುದಾಯಗಳ ನಡುವಿನ ಘರ್ಷಣೆಯಿಂದ ಉಖ್ರುಲ್ ಜಿಲ್ಲೆಯಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆ. ಈ ಬೆನ್ನಲ್ಲೇ ಶಸ್ತ್ರಸಜ್ಜಿತ ಕುಕಿ ಉಗ್ರರು ಹಲವು ಮನೆಗಳಿಗೆ ಬೆಂಕಿ ಹಚ್ಚಿದ್ದರಿಂದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದ್ದು, ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ತಂಗ್ಖುಲ್ ನಾಗಾ ಸಮುದಾಯದ ಸದಸ್ಯರ ಮೇಲೆ ಜನರ ಗುಂಪೊಂದು ದಾಳಿ ನಡೆಸಿದ ನಂತರ ಈ ಪ್ರದೇಶದಲ್ಲಿ ಹಿಂಸಾಚಾರ ಉಂಟಾಗಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.ಜಿಲ್ಲೆಯ ಲಿಟನ್ ಗ್ರಾಮದಲ್ಲಿ ತಂಗ್ಖುಲ್ ನಾಗಾ ಮತ್ತು ಕುಕಿ ಬುಡಕಟ್ಟು ಗುಂಪುಗಳು ನಡುವೆ ಭಾರಿ ಕಲ್ಲು ತೂರಾಟ ನಡೆದಿತ್ತು.

ಈ ವೇಳೆ ಬುಡಕಟ್ಟು ಗುಂಪುಗಳನ್ನು ಚದುರಿಸಲು ಭದ್ರತಾ ಪಡೆಗಳು ಅಶ್ರುವಾಯು ಶೆಲ್‌ಗಳನ್ನು ಹಾರಿಸಿದ್ದರು ಎಂದು ಅವರು ಹೇಳಿದರು.ಬಳಿಕ ಸೋಮವಾರ ಮಧ್ಯರಾತ್ರಿಯ ವೇಳೆಗೆ, ಲಿಟನ್ ಸರೈಖಾಂಗ್‌ನಲ್ಲಿನ ತಂಗ್ಖುಲ್ ನಾಗಾ ಸಮುದಾಯದ ಸದಸ್ಯರ ಹಲವು ಮನೆಗಳಿಗೆ ಬೆಂಕಿ ಹಚ್ಚಲಾಗಿದೆ. ಕುಕಿ ಉಗ್ರರೇ ಈ ಕೃತ್ಯ ಎಸಗಿದ್ದಾರೆ ಎಂದು ಹೇಳಲಾಗಿದೆ. ಹಾಗೆಯೇ ಇಲ್ಲಿನ ಕುಕಿ ಸಮುದಾಯಕ್ಕೆ ಸೇರಿದ ಕೆಲವು ಮನೆಗಳು ಸಹ ಸುಟ್ಟು ಹೋಗಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಘಟನೆಯಿಂದ ಉಂಟಾದ ಹಾನಿಯ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದೇವೆ. ಸ್ಥಳದಲ್ಲಿ ಪರಿಸ್ಥಿತಿ ಉದ್ವಿಗ್ನವಾಗಿದ್ದು, ಕಟ್ಟೆಚ್ಚರ ವಹಿಸಲಾಗಿದೆ ಎಂದು ಜಿಲ್ಲಾ ಅಧಿಕಾರಿಯೊಬ್ಬರು ಮಾಧ್ಯಮ ಸಂಸ್ಥೆಗೆ ಪ್ರತಿಕ್ರಿಯೆ ನೀಡಿದ್ದಾರೆ.

### ವಿನಾಶಕಾರಿ ಕಮ್ಯೂನಿಸ್ಟ್ ಸಿದ್ಧಾಂತದ ಅಗತ್ಯವಿಲ್ಲ

ದೇಶಕ್ಕೆ ಇನ್ನುಂದೆ ವಿನಾಶಕಾರಿ ಕಮ್ಯೂನಿಸ್ಟ್ ಸಿದ್ಧಾಂತದ ಅಗತ್ಯವಿಲ್ಲ. ಕಮ್ಯುನಿಸ್ಟ್ ಆಡಳಿತ ಇರುವಲ್ಲಿ ಯಾವುದೇ ಅಭಿವೃದ್ಧಿ ಇಲ್ಲ. ಪ್ರಜಾಪ್ರಭುತ್ವದಲ್ಲಿ ಆ ಸಿದ್ಧಾಂತದ ಅವಧಿ ಮುಗಿದಿದೆ. ತ್ರಿಪುರ ಮತ್ತು ಪಶ್ಚಿಮ ಬಂಗಾಳದಲ್ಲಿ ಅವರ ಆಡಳಿತ ಕೊನೆಗೊಂಡಿದೆ. ಕೇರಳದಲ್ಲಿಯೂ ಸಹ ತಿರುವನಂತಪುರಂನಿಂದ ಬದಲಾವಣೆ ಪ್ರಾರಂಭವಾಗಿದೆ ಎಂದು ಪ್ರತಿಪಾದಿಸಿದ್ದಾರೆ.




ಉಗ್ರರು ಗ್ರಾಮದಲ್ಲಿ ಮನೆ, ವಾಹನಗಳಿಗೆ ಬೆಂಕಿ ಹಚ್ಚುತ್ತಿರುವುದು, ಗಾಳಿಯಲ್ಲಿ ಗುಂಡು ಹಾರಿಸುತ್ತಿರುವುದು ವಿಡಿಯೋದಲ್ಲಿ ಸೆರೆಯಾಗಿದೆ. ಆದರೆ, ಈ ವಿಡಿಯೋಗಳ ಸತ್ಯಾಸತ್ಯತೆ ಅಧಿಕಾರಿಗಳು ಇನ್ನೂ ದೃಢಪಡಿಸಿಲ್ಲ. ಕಾನೂನು ಸುವ್ಯವಸ್ಥೆ ಕಾಪಾಡಲು ಮತ್ತು ಅನುಮಾನಾಸ್ಪದ ವ್ಯಕ್ತಿಗಳ ಚಲನವಲನ ತಡೆಯಲು ಹತ್ತಿರದ ಪ್ರದೇಶಗಳಲ್ಲಿ ಹೆಚ್ಚುವರಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ತಂಗ್ಖುಲ್ ನಾಗ ಮತ್ತು ಕುಕಿ ಸಮುದಾಯಗಳ ಸದಸ್ಯರ ನಡುವಿನ ಉದ್ವಿಗ್ನತೆಯಿಂದಾಗಿ ಗ್ರಾಮದಲ್ಲಿ ಶಾಂತಿ ಮತ್ತು ನೆಮ್ಮದಿಗೆ ಭಂಗವಾಗುವ ಆತಂಕವಿದೆ. ಗುಂಪಾಗಿ ಯಾರೂ ಓಡಾಡದಂತೆ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಆಶಿಶ್ ದಾಸ್ ಆದೇಶ ಹೊರಡಿಸಿದ್ದಾರೆ.

## ನಿಗಮ ಮಂಡಳಿ ಅಧ್ಯಕ್ಷರಿಗೆ ಸಚಿವ ಸಂಪುಟ ದರ್ಜೆ ಸ್ಥಾನ ವಾಪಸ್ ಪಡೆಯಬೇಕು : ಆರ್.ಅಶೋಕ್ ಆಗ್ರಹ

• ಉದಯಯವಾಹಿನಿ,ಬೆಂಗಳೂರು



ನಿಗಮ ಮಂಡಳಿ ಅಧ್ಯಕ್ಷರಿಗೆ ಸಚಿವ ಸಂಪುಟ ದರ್ಜೆ ಸ್ಥಾನ ನೀಡಿರೋ ಸರ್ಕಾರದ ಕ್ರಮವನ್ನ ವಿಪಕ್ಷ ನಾಯಕ ಆರ್. ಅಶೋಕ್ ಖಂಡಿಸಿದ್ದಾರೆ. ಕೂಡಲೇ ಸರ್ಕಾರ ಆದೇಶ ವಾಪಸ್ ಪಡೆಯಬೇಕು ಅಂತ ಆಗ್ರಹಿಸಿದ್ದಾರೆ. ವಿಧಾನಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಈ ಸರ್ಕಾರ ಜನರ ತೆರಿಗೆ ಹಣವನ್ನ ಕಾಂಗ್ರೆಸ್ ಮೋಜು ಮಸ್ತಿಗೆ ಖರ್ಚು ಮಾಡ್ತಾ ಇದ್ದಾರೆ. ನನಗೆ ಇರೋ ಮಾಹಿತಿ ಇದನ್ನ ರಾಜ್ಯಪಾಲರು ಪ್ರಶ್ನೆ ಮಾಡಿದ್ದಾರೆ. ಯಾವ ಆಧಾರದಲ್ಲಿ ಸಂಪುಟ ದರ್ಜೆ ಕೊಟ್ಟಿದ್ದೀರಾ ಅಂತ. ರಾಜ್ಯದ ಜನರು ಪ್ರಶ್ನೆ ಮಾಡ್ತಿದ್ದಾರೆ. ಈ ಸರ್ಕಾರದ ಬಳಿಕ ಸಂಬಳ ಕೊಡೋಕೆ ಹಣ ಇಲ್ಲ. ಗೃಹಲಕ್ಷ್ಮಿಗೆ, ಅನ್ನಭಾಗ್ಯಕ್ಕೆ ಹಣ ಕೊಡೋಕೆ ಆಗಿಲ್ಲ. ಶಾಸಕರಿಗೆ ಮೋಜು ಮಸ್ತಿ ಮಾಡಲು ಮುಂದಾಗಿದ್ದಾರೆ. ಕೂಡಲೇ ಸಚಿವ ಸಂಪುಟ ದರ್ಜೆ ಸ್ಥಾನವನ್ನ ಸರ್ಕಾರ ರದ್ದು ಮಾಡಬೇಕು ಅಂತ ಆಗ್ರಹಿಸಿದರು.

**ಡಿಕೆಶಿ ಸಿಎಂ ಆಗಲಿ ಅಂತ ಶಾಸಕರು ಮಾತಾಡಲಿ:** ಇನ್ನೂ ಡಿಕೆ ಶಿವಕುಮಾರ್ ಸಿಎಂ ಆಗಲಿ ಅಂತ ಕಾಂಗ್ರೆಸ್ ಶಾಸಕರು ಶಾಸಕಾಂಗ ಸಭೆಯಲ್ಲಿ ಮಾತಾಡಲಿ. ಅದು ಬಿಟ್ಟು ಹೊರಗೆ ಬಂದು ಮಾತಾಡೋದು ಯಾಕೆ ಅಂತ ವಿಪಕ್ಷ ನಾಯಕ ಕುರ್ಚಿ ಕಿತ್ತಾಟಕ್ಕೆ ಕಿಡಿಕಾರಿದ್ದಾರೆ.

ನಾನು ಸಿಎಂ ಆಗಬೇಕು ಎಂಬುದು ಜನರ ಆಸೆ ಎಂಬ ಡಿಕೆ ಶಿವಕುಮಾರ್ ಹೇಳಿಕೆಗೆ ವಿಧಾನಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಡಿಕೆ ಶಿವಕುಮಾರ್ ಇಷ್ಟು ದೇವಸ್ಥಾನ ಸುತ್ತಿದರು. ಪಾಪ ದೇವರು ವರ ಕೊಟ್ಟಿಲ್ಲ. ಈಗ ಜನರ ಮಧ್ಯೆ ಬಂದಿದ್ದಾರೆ. ಜನ ವರ ಕೊಡ್ತಾರಾ ಗೊತ್ತಿಲ್ಲ. ಡಿಕೆಶಿ ಸಿಎಂ ಆಗಲಿ ಅಂತ AIP ಸಭೆಯಲ್ಲಿ ಮಾತಾಡಲಿ. ಹೊರಗೆ ಬಂದು ಯಾಕೆ ಮಾತಾಡಬೇಕು ಅಂತ ಸವಾಲ್ ಹಾಕಿದ್ದಾರೆ. ಕಾಂಗ್ರೆಸ್ ನಲ್ಲಿ ನಿತ್ಯ ಕುರ್ಚಿ ಕಿತ್ತಾಟ ಆಗ್ತಿದೆ. ಕಾಂಗ್ರೆಸ್ ಹೈಕಮಾಂಡ್ ಇದನ್ನ ಬಗೆಹರಿಸೋ ಶಕ್ತಿ ಇಲ್ಲ. ಇದು ವೀಕ್ ನಾಯಕತ್ವವಾಗಿದೆ. ಡಿಕೆಶಿಗೆ ನ್ಯಾಯ ಕೊಡಬೇಕು ಎಂಬ ಕಾಂಗ್ರೆಸ್ ಶಾಸಕರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಕನಕ ನಾಯಕನಿಗೆ ನ್ಯಾಯ ಸಿಕ್ಕಿ. ಸಿದ್ದರಾಮಯ್ಯ ಸಾಮಾಜಿಕ ಅಂತಾರೆ. ಸಿದ್ದರಾಮಯ್ಯ ಅವರ ಮಗ ಯತೀಂದ್ರ ಸೂಪರ್ ಸಿಎಂ ಆಗಿದ್ದಾರೆ. ನಮ್ಮಪ್ಪನೇ 5 ವರ್ಷ ಸಿಎಂ ಅಂತಿದ್ದಾರೆ. ಡಿಕೆಶಿ ಪದೇ ಪದೇ 138 ಶಾಸಕರು ನಮ್ಮ ಜೊತೆ ಇದ್ದಾರೆ ಅಂತ ಹೇಳ್ತಾರೆ. ಅದೇ ಸಿಎಲ್‌ಪಿ ಯಲ್ಲಿ 138 ಜನ ಇದ್ದಾರೆ. ಅದರಲ್ಲಿ ಸಿದ್ದರಾಮಯ್ಯ ಇಳಿಬೇಕು, ಡಿಕೆಶಿ ಆಗಬೇಕು ಅಂತ ಹೇಳೇ ಇಲ್ಲ ಅಂದಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ವೀಕ್ ಆಗಿದೆ. ಕರ್ನಾಟಕ ಕಾಂಗ್ರೆಸ್ ಗೊಂದಲದ ಗೂಡಾಗಿದೆ.

## ಸಿಎಂ ಬದಲಾವಣೆ ಗೊಂದಲ ಯಾವಾಗ ಬಗೆಹರಿಯುತ್ತದೆ ಎಂದು ನಾವು ಕಾಯುತ್ತಿದ್ದೇವೆ: ಸಚಿವ ಸತೀಶ್ ಜಾರಕಿಹೊಳಿ

• ಉದಯಯವಾಹಿನಿ,ಬೆಂಗಳೂರು



ಸಿಎಂ ಬದಲಾವಣೆ ಗೊಂದಲ ಯಾವಾಗ ಬಗೆಹರಿಯುತ್ತದೆ ಎಂದು ನಾವು ಕಾಯುತ್ತಿದ್ದೇವೆ. ಅದನ್ನು ನಿರ್ಧಾರ ಮಾಡೋದು ಹೈಕಮಾಂಡ್ ಎಂದು ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ಹರಿಹರ ತಾಲ್ಲೂಕಿನ ರಾಜನಹಳ್ಳಿ ವಾಲ್ಮೀಕಿ ಮಠದಲ್ಲಿ ಮಾಧ್ಯಮಗಳೆದುರು ಅಧಿಕಾರ ಹಂಚಿಕೆ ಗೊಂದಲದ ವಿಚಾರವಾಗಿ ಪ್ರತಿಕ್ರಿಯಿಸಿ, ಯಾವಾಗ ಬಗೆಹರಿಯುತ್ತೆ ಅಂತಾ ನಾವು ಕೂಡಾ ಕಾಯುತ್ತಿದ್ದೇವೆ. ನಿರ್ಧಾರ ಮಾಡೋದು ಪಕ್ಷದ ಹೈಕಮಾಂಡ್, ಅಲ್ಲಿಯವರೆಗೂ ಕಾಯಬೇಕು. ಯಾಕೆ ತಡವಾಗುತ್ತೆ ಎಂಬ ಕಾರಣ ಗೊತ್ತಿಲ್ಲ.

ಗೊಂದಲ ಬೇಗ ಬಗೆಹರಿಯುವ ನಿರೀಕ್ಷೆಯಲ್ಲಿದ್ದೇವೆ ಎಂದರು. ಯತೀಂದ್ರ ನಮ್ಮ ಹೈಕಮಾಂಡ್ ಎಂಬ ಡಿಕೆಶಿ ಹೇಳಿಕೆ ಬಗ್ಗೆ ಮಾತನಾಡಿ, ಈ ವ್ಯವಸ್ಥೆಯಲ್ಲಿ ಡಿ.ಕೆ. ಶಿವಕುಮಾರ್ ಅವರು ಹೇಳಿದಂತೆ ಎಲ್ಲರೂ ಹೈಕಮಾಂಡೇ, ಎಲ್ಲರೂ ದೊಡ್ಡವರೇ ಯಾರು ಸಣ್ಣವರು ಅಂತ ಹೇಳೋಕೆ ಆಗಲ್ಲ. ಎಲ್ಲಾ ಶಾಸಕರು ಒಗ್ಗಟ್ಟಿನಿಂದ ಇದ್ದೇವೆ. ಆ ನಿಟ್ಟಿನಲ್ಲಿ ಬೇಗ ಗೊಂದಲ ಬಗೆಹರಿಯಬೇಕು. ಕಾಂಗ್ರೆಸ್ ಗಟ್ಟಿಯಾಗಬೇಕು ಎಂದು ಹೇಳಿದರು. ಡಿಕೆಶಿಗೆ 80 ಶಾಸಕರ ಬೆಂಬಲ ಇದೆ ಎಂಬ ಶಾಸಕ ಇಕ್ಬಾಲ್ ಹುಸೇನ್ ಹೇಳಿಕೆ ವಿಚಾರವಾಗಿ ಮಾತನಾಡಿ, 80 ಎಂಬ ಪ್ರಶ್ನೆ ಇಲ್ಲ. ಯಾರು ಸಮರ್ಥರಿದ್ದಾರೆ ಅವರಿಗೆ ಅವಕಾಶ ಸಿಗುತ್ತೆ. ಆದರೆ ಆ ಸಂದರ್ಭ ಇನ್ನೂ ಬಂದಿಲ್ಲ , ಬಂದಾಗ ಚರ್ಚೆ ಮಾಡೋಣ ಎಂದರು. ರಾಹುಲ್ ಗಾಂಧಿ ಬುಲಾವ್ ವಿಚಾರವಾಗಿ ಪ್ರತಿಕ್ರಿಯಿಸಿ, ಕರೆದರೆ ಹೋಗಲೇಬೇಕು ಹೋಗುತ್ತಾರೆ ಎಂದರು. ಸಚಿವ ಸಂಪುಟ ಪುನಾರಚನೆ ವಿಚಾರವಾಗಿ ಮಾತನಾಡಿ, ತುಂಬಾ ಜನ ಸೀನಿಯರ್ ಇದ್ದಾರೆ. ನಾವು ಸಚಿವರಾಗಬೇಕು ಅಂತಾ ಕಾಯುತ್ತಿದ್ದಾರೆ, ವರಿಷ್ಠರು ಹೇಳೋವರೆಗೂ ಕಾಯಬೇಕು ಎಂದು ತಿಳಿಸಿದರು. **ಇದೊಂದು ಖಾಲಿ ಟ್ರಂಕ್ ಸರ್ಕಾರ - ಶಾಸಕ ಅರವಿಂದ ಬೆಲ್ಲದ್:** ಮತ್ತೊಂದೆಡೆ ವಾಲ್ಮೀಕಿ ಗುರುಪೀಠದಲ್ಲಿ ಶಾಸಕ ಅರವಿಂದ್ ಬೆಲ್ಲದ್ ಮಾತನಾಡಿ, ಇದೊಂದು ಖಾಲಿ ಟ್ರಂಕ್ ಸರ್ಕಾರ. ಸಿದ್ದರಾಮಯ್ಯ ಕುರ್ಚಿ ಉಳಿಸಿಕೊಳ್ಳುವ ಸಲುವಾಗಿ ಹೋರಾಟ ನಡೆಸುತ್ತಿದ್ದಾರೆ.

## ಭಾರತ-ಚೀನಾ ಗಡಿ ಸಂಘರ್ಷದ ವೇಳೆಯೇ ಮೋದಿ ಟೊಳ್ಳುತನ ಜಗಜ್ಜಾಹೀರಾಗಿದೆ

• ಉದಯಯವಾಹಿನಿ,ಬೆಂಗಳೂರು

ಲೋಕಸಭೆಯಲ್ಲಿ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ನೀಡದೆ ತಪ್ಪಿಸಿಕೊಂಡಿರುವುದು ಸಂಸತ್‌ಗೆ ತೋರಿಸಿರುವ ಅಗೌರವ ಮಾತ್ರವಲ್ಲ ಸತ್ಯವನ್ನು ಎದುರಿಸಲಾಗದ ಹೇಡಿತನವೂ ಆಗಿದೆ. ಭಾರತದ ಸಂಸತ್ತಿನ ಇತಿಹಾಸದಲ್ಲಿ ಮೊದಲ ಬಾರಿಗೆ ಪ್ರಧಾನ ಮಂತ್ರಿಯವರ ಉತ್ತರ ಇಲ್ಲದೆ ವಂದನಾ ನಿರ್ಣಯವನ್ನು ಅಂಗೀಕರಿಸಲಾಗಿದೆ. ಓರ್ವ ಪ್ರಧಾನಿ ಸಂಸತ್ತನ್ನು ನಿರ್ಲಕ್ಷಿಸುವುದೆಂದರೆ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ನಡೆ ಎಂದರ್ಥ ಎಂದು ಸಿಎಂ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿರುವ ಅವರು, ಅಧಿಕಾರರೂಢ ಬಿಜೆಪಿ ಪಕ್ಷ ಮೊದಲು ವಿರೋಧ ಪಕ್ಷಗಳಿಗೆ ಮಾತನಾಡಲು ಅವಕಾಶ ನೀಡದೆ ತಡೆಯಿತು, ನಂತರ ತಾನೂ ಕೂಡ ಮಾತನಾಡದೆ ಮೌನಕ್ಕೆ ಶರಣಾಯಿತು. ಇದು ಬಹಳ ಆತಂಕಕಾರಿ ಬೆಳವಣಿಗೆ. ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ತಮ್ಮ ವಂದನಾ ನಿರ್ಣಯದ ಭಾಷಣದಲ್ಲಿ ಭಾರತೀಯ ಸೇನೆಯ ಮಾಜಿ ಮುಖ್ಯಸ್ಥ ಜನರಲ್ ಎಂ. ಎಂ. ನರವಣೆ ಅವರ ಪುಸ್ತಕದಲ್ಲಿದ್ದ ದೇಶದ ಭದ್ರತೆಗೆ ಸಂಬಂಧಿಸಿದ ಗಂಭೀರ ವಿಚಾರಗಳನ್ನು ಪ್ರಸ್ತಾಪಿಸಲು ಮುಂದಾದಾಗ ಅವರ ಮಾತನ್ನು ಸಂಪೂರ್ಣವಾಗಿ ತಡೆಯಲಾಯಿತು.

ಆ ಪುಸ್ತಕದಲ್ಲಿ 2020ರ ಚೀನಾ ಗಡಿ ಸಂಘರ್ಷದ ಸಂದರ್ಭ ನಿರ್ಣಾಯಕ ನಿರ್ಧಾರವನ್ನು ತೆಗೆದುಕೊಳ್ಳುವ ಬದಲು ಪ್ರಧಾನಿ ನರೇಂದ್ರ ಮೋದಿ ಅವರು



ಸೇನಾ ಮುಖ್ಯಸ್ಥರಿಗೆ ಕೇವಲ ಜೋ ಉಚಿತ್ ಸಮಝೋ, ವೋಹ್ ಕರೋ (ನಿಮಗೆ ಯೋಗ್ಯವೆನಿಸಿದ್ದನ್ನು ಮಾಡಿ) ಎಂದು ಹೇಳಿದ್ದಾಗಿ ದಾಖಲಾಗಿದೆ. ಇದು ಪ್ರಧಾನಿ ಮೋದಿಯವರ ನಾಯಕತ್ವದ ಟೊಳ್ಳುತನವನ್ನು ಜಗಜ್ಜಾಹೀರುಗೊಳಿಸಿರುವುದು ಮಾತ್ರವಲ್ಲ, ಮೋದಿ ತಾನೇ ಕಟ್ಟಿಕೊಂಡಿರುವ 56 ಇಂಚಿನ ಎದೆಯೊಳಗಿನ ಪುಕ್ಕಲುತನವನ್ನು ಬಯಲು ಮಾಡಿದೆ.

ಪ್ರಧಾನಿಯವರ ಈ ಪಲಾಯನವಾದಿ ನಡೆಯು ಸಂಸತ್ತಿನಲ್ಲಿ ಚರ್ಚೆ ಆಗಬಾರದೆಂಬ ಕಾರಣಕ್ಕೆ ರಾಹುಲ್ ಗಾಂಧಿಯವರು ಭಾಷಣ ಮಾಡದಂತೆ ತಡೆಯಲಾಗಿದೆ.

ದೇಶದ ಬಹುಸಂಖ್ಯೆಯ ಜನರನ್ನು ಪ್ರತಿನಿಧಿಸುವ ಪ್ರತಿಪಕ್ಷಗಳ ಧ್ವನಿಯನ್ನು ಹತ್ತಿಕ್ಕುವುದು ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ. ಇಂತಹ ಗಂಭೀರ ಪ್ರಶ್ನೆಗಳನ್ನು ಎದುರಿಸುವ ಬದಲು ಪ್ರಧಾನಿ ಮೋದಿ ಅವರು ಲೋಕಸಭೆಗೆ ಗೈರಾಗಿರುವುದು ನಿಜಕ್ಕೂ ನಾಚಿಕೆಗೇಡು ಎಂದು ಟೀಕಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಸಂಪೂರ್ಣವಾಗಿ ಹೆದರಿದ್ದಾರೆ, ಹಾಗಾಗಿ ಅವರು ಸಂಸತ್ತಿಗೆ ಹಾಜರಾಗುವ ಧೈರ್ಯವನ್ನು ಮಾಡುವುದಿಲ್ಲ ಎಂದು ರಾಹುಲ್ ಗಾಂಧಿಯವರು ಮುಂಚಿತವಾಗಿಯೇ ಹೇಳಿದ್ದರು.


ಅದರಂತೆ ಮೋದಿ ಅವರು ಲೋಕಸಭೆಯಿಂದ ದೂರ ಉಳಿಯುವ ಮೂಲಕ ತಾನು ಭೀತಿಗೊಂಡಿರುವುದನ್ನು ರುಜು ಮಾಡಿದ್ದಾರೆ. ತನ್ನ ನಿರ್ಧಾರದ ಬಗ್ಗೆ ಆತ್ಮವಿಶ್ವಾಸವಿಲ್ಲದವರು, ಹೀಗೆ ಚರ್ಚೆಯಿಂದ ಯಾವಾಗಲೂ ಹಿಂದೆ ಸರಿಯುವವರು ದೇಶಕ್ಕೆ ಅದ್ಯಾವ ಸಮರ್ಥ ನಾಯಕತ್ವ ನೀಡಲು ಸಾಧ್ಯ ಎಂದು ಪ್ರಶ್ನಿಸಿದ್ದಾರೆ.

ಅದೇ ರೀತಿ, ಪ್ರಧಾನಿ ಭಾಷಣಕ್ಕೆ ಅವಕಾಶ ನೀಡದೆ ವಂದನಾ ನಿರ್ಣಯವನ್ನು ಅಂಗೀಕರಿಸಿದ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರ ಪಕ್ಷಪಾತದ ನಡವಳಿಕೆಯು ಸಂಸತ್ತಿನ ಘನತೆಗೆ ಗಂಭೀರ ಚ್ಯುತಿಯನ್ನುಂಟು ಮಾಡಿದೆ.

ಸ್ಪೀಕರ್ ಲೋಕಸಭೆಯ ಘನತೆಯನ್ನು ಎತ್ತಿ ಹಿಡಿಯುವ ಕೆಲಸವನ್ನು ಮಾಡಬೇಕೇ ವಿನಃ ಸರ್ಕಾರದ ರಕ್ಷಣಾ ಕವಚವಾಗಿ ಕಾರ್ಯನಿರ್ವಹಿಸಬಾರದು. ವಿರೋಧ ಪಕ್ಷಗಳ ಬಾಯಿಮುಚ್ಚಿಸಿ, ಪ್ರಧಾನಮಂತ್ರಿಯವರು ಓಡಿ ಹೋದರೆ ಸಂಸತ್ತು ಅರ್ಥಹೀನವಾಗುತ್ತದೆ.

ಇದು ಸಂಸತ್ತನ್ನು ದುರ್ಬಲಗೊಳಿಸುವುದು, ಸಾಂವಿಧಾನಿಕ ಹುದ್ದೆಗಳನ್ನು ದುರುಪಯೋಗ ಮಾಡುವುದು ಮತ್ತು ಭಾರತದ ಪ್ರಜಾಪ್ರಭುತ್ವ ಸಂಸ್ಥೆಗಳನ್ನು ಇಲ್ಲವಾಗಿಸುವುದು ಬಿಜೆಪಿ-ಆರೆಸ್ಸೆಸ್ ನ ಕುತಂತ್ರದ ಭಾಗವಾಗಿದೆ.

## ಸಂಗಮ ಕೆಳಭಾಗದಲ್ಲಿ ಮೇಕೆದಾಟು ಡ್ಯಾಂಗೆ ಸ್ಥಳ ನಿಗದಿ ಕೇಂದ್ರಕ್ಕೆ ವರದಿ ಸಲ್ಲಿಸಿದ ರಾಜ್ಯ ಸರ್ಕಾರ



• ಉದಯಯವಾಹಿನಿ,ಬೆಂಗಳೂರು

ಮೇಕೆದಾಟು ಅಣೆಕಟ್ಟು ನಿರ್ಮಾಣಕ್ಕೆ ಕರ್ನಾಟಕ ಸರ್ಕಾರ ಸ್ಥಳ ನಿಗದಿಪಡಿಸಿ ಕೇಂದ್ರಕ್ಕೆ ಮಾಹಿತಿ ರವಾನಿಸಿದೆ. ಕಾವೇರಿ ಮತ್ತು ಅರ್ಕಾವತಿ ನದಿಯ ಸಂಗಮದ ಕೆಳಭಾಗದಿಂದ ಸುಮಾರು 2 ಕಿ.ಮೀ ದೂರದಲ್ಲಿ ಅಣೆಕಟ್ಟು ನಿರ್ಮಾಣಕ್ಕೆ ಮುಂದಾಗಿದೆ. ಹಲವು ಅಧ್ಯಯನ ಬಳಿಕ ಸ್ಥಳ ಆಯ್ಕೆ ಮಾಡಲಾಗಿದ್ದು, 99 ಮೀಟರ್ ಎತ್ತರ ಅಣೆಕಟ್ಟು ನಿರ್ಮಿಸುವ ಅಂದಾಜಿದೆ. ಈ ಅಣೆಕಟ್ಟು ನಿರ್ಮಾಣವಾದ್ರೆ, ನೀರಿನ ಸಾಮರ್ಥ್ಯ ಸುಮಾರು 67.16 ಟಿಎಂಸಿ ಇರಲಿದೆ.

ಅಂದರೆ ಕೆಆರ್‌ಎಸ್ 49 ಟಿಎಂಸಿ ಸಾಮರ್ಥ್ಯ ಹೊಂದಿದ್ದರೆ; ಅದಕ್ಕಿಂತ 18 ಟಿಎಂಸಿಯಷ್ಟು ಹೆಚ್ಚಿನ ಸಾಮರ್ಥ್ಯವನ್ನ ಮೇಕೆದಾಟು ಹೊಂದಿರಲಿದೆ. ಈ ಅಣೆಕಟ್ಟು ನಿರ್ಮಾಣಕ್ಕೆ ಮುಂದಾದ್ರೆ, ಸುಮಾರು 5,173 ಹೆಕ್ಟೆರ್ ಭೂಮಿ ಮುಳುಗಡೆ ಆಗಲಿದೆ.

ಕಾವೇರಿ ವನ್ಯಜೀವಿ ಅಭಯಾರಣ್ಯದಲ್ಲಿ ಕಂಡುಬರುವ ಪ್ರಸ್ತುತ ಸ್ಥಳದ ಮೇಲ್ಭಾಗ ಅಥವಾ ಕೆಳಭಾಗದಲ್ಲಿ ನೀರಿನ ಸಂಗ್ರಹಕ್ಕೆ ಸ್ಥಳವಿಲ್ಲ ಅಂತ ವರದಿಯಲ್ಲಿ ಉಲ್ಲೇಖ ಮಾಡಲಾಗಿದೆ.

ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಕುಡಿಯುವ ನೀರು, ವಿದ್ಯುತ್ ಪೂರೈಕೆಗೆ ಸಹಕಾರಿ ಆಗುವುದರ ಜೊತೆಗೆ, ತಮಿಳುನಾಡಿಗೆ ನೀರು ಹರಿಸಲು ಅನುಕೂಲ ಆಗಲಿದೆ ಅಂತ ಕೇಂದ್ರಕ್ಕೆ ಸಲ್ಲಿಸಿರುವ ವರದಿಯಲ್ಲಿ ಹೇಳಲಾಗಿದೆ.

**ಈ ದಿನದ ದರ** ಪೆಟ್ರೋಲ್: 102.92 ₹/L ಡೀಸೆಲ್ : 90.99 ₹/L ಬಂಗಾರ: ₹15,791/Gram24ct ₹14,475/Gram22ct ಬೆಳ್ಳಿ: ₹300.00/Gram

# ಕೇಂದ್ರ ಬಿಜೆಪಿ ಸರ್ಕಾರ ಕರ್ನಾಟಕಕ್ಕೆ ಕೊಟ್ಟ ಖಾಲಿ ಟ್ರಂಕ್ ಹಿಡಿದಿರುವ ತೇಜಸ್ವಿ ಸೂರ್ಯ

• ಉದಯವಾಹಿನಿ, ಬೆಂಗಳೂರು

ಕಳೆದ 12 ವರ್ಷಗಳಿಂದ ಕೇಂದ್ರ ಬಿಜೆಪಿ ಸರ್ಕಾರ ಕರ್ನಾಟಕಕ್ಕೆ ಕೊಟ್ಟಿರುವ ಖಾಲಿ ಟ್ರಂಕ್ ಅನ್ನು ಸಂಸದ ತೇಜಸ್ವಿ ಸೂರ್ಯ ಅವರು ಹಿಡಿದಿದ್ದಾರೆ ಎಂದು ಬಮೂಲ್ ಅಧ್ಯಕ್ಷ ಡಿ.ಕೆ ಸುರೇಶ್ ಅವರು ತಿರುಗೇಟು ನೀಡಿದ್ದಾರೆ. ಸದಾಶಿವನಗರ ನಿವಾಸದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಸುರೇಶ್ ಅವರು ಸೋಮವಾರ ಪ್ರತಿಕ್ರಿಯೆ ನೀಡಿದರು. ಮೆಟ್ರೋ ದರ ಏರಿಕೆ ವಿಚಾರವಾಗಿ ತೇಜಸ್ವಿ ಸೂರ್ಯ ಅವರು ಮೆಟ್ರೋ ನಿಲ್ದಾಣ ಬಳಿ ಖಾಲಿ ಟ್ರಂಕ್ ಹಿಡಿದು ಪ್ರತಿಭಟನೆ ಮಾಡುತ್ತಿರುವ ಬಗ್ಗೆ ಕೇಳಿದಾಗ, ಮೆಟ್ರೋ ದರ ಏರಿಕೆ ಬಗ್ಗೆ ಅವರು ಮಾತನಾಡುವುದೇನೆ ಇದ್ದರೂ ಅದು ಪ್ರಧಾನಮಂತ್ರಿಗಳ ಮುಂದೆ ಮಾತನಾಡಲಿ. ಮೆಟ್ರೋ ನಮ್ಮ ಯೋಜನೆ ಎಂದು ಪ್ರಚಾರ ಪಡೆಯುತ್ತಿರುವವರು ಯಾರು? ತೇಜಸ್ವಿ ಸೂರ್ಯ ಅವರು ಮೆಟ್ರೋ ನಮ್ಮ ಕೊಡುಗೆ ರಾಜ್ಯ ಸರ್ಕಾರದ್ದಲ್ಲ ಎಂದು ಪ್ರಚಾರ ಪಡೆಯುತ್ತಿದ್ದಾರೆ. ಮೆಟ್ರೋ ಕೇಂದ್ರ ಸರ್ಕಾರದ ಸಮಿತಿ ಕೈಯಲ್ಲಿದೆ. ಆ ಸಮಿತಿ ತೀರ್ಮಾನದಂತೆ ಮೆಟ್ರೋ ದರ ಏರಿಕೆ ಮಾಡಲಾಗುತ್ತದೆ. ದರ ಏರಿಕೆ ಆಗಬಾರದು ಎಂಬುದು ನಮ್ಮ ಇಚ್ಛೆ. ತೇಜಸ್ವಿ ಸೂರ್ಯ ಅವರ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದು, ಅವರು ತೀರ್ಮಾನ ಮಾಡಿ ಜನರಿಗೆ ಅನುಕೂಲ ಮಾಡಿಕೊಡಲಿ ಎಂದು ಸುರೇಶ್ ಅವರು ವಾಗ್ದಾಳಿ ನಡೆಸಿದರು. ಅವರು ಖಾಲಿ ಟ್ರಂಕ್ ಹಿಡಿದಿರುವುದು, ಕರ್ನಾಟಕದ 4.5 - 5 ಲಕ್ಷ ಕೋಟಿ ತೆರಿಗೆ ಹಣವನ್ನು ಲೂಟಿ ಮಾಡಿಕೊಂಡು ಹೋಗುತ್ತಿರುವುದನ್ನು ತೋರಿಸಲು. ಕೇಂದ್ರ ಸರ್ಕಾರ ಕಳೆದ 12 ವರ್ಷಗಳಿಂದ ಕರ್ನಾಟಕಕ್ಕೆ ಕೊಟ್ಟಿರುವ ಕೊಡುಗೆ ಪಟ್ಟಿ ಹೇಳಲಿ. ಬೆಂಗಳೂರಿಗೆ ಅವರ ಕೊಡುಗೆ ಖಾಲಿ ಡಬ್ಬ ಎಂದು ತೇಜಸ್ವಿ ಸೂರ್ಯ ತೋರಿಸುತ್ತಿರುವುದನ್ನು ಮಾಧ್ಯಮಗಳು ಚೆನ್ನಾಗಿ ತೋರಿಸಿ ಎಂದು ಕಿಡಿಕಾರಿದರು.



**ದರ ಏರಿಕೆಗೆ ಕಾರಣ ಯಾರು?** ಎಂದು ಕೇಳಿದಾಗ, ರಾಜ್ಯ ಸರ್ಕಾರದ ಪಾತ್ರ ಇದೆ. ದರ ಇಳಿಕೆ ಬಗ್ಗೆ ಕೇಂದ್ರದ ಸಮಿತಿ ಮುಂದೆ ಪ್ರಸ್ತಾವನೆ ನೀಡಲಾಗಿದೆ.

> **ಬೆಂಗಳೂರಿನಲ್ಲಿ ವಾಹನ ದಟ್ಟಣೆಗೆ ಕಾರಣವಾಗಿರುವುದು ಕೇಂದ್ರ ಸರ್ಕಾರ. ನಮ್ಮ ಐಟಿ ಬಿಟಿ ತೆರಿಗೆ ಹಾಗೂ ಬೆಂಗಳೂರಿನ ಜಿಎಸ್‌ಟಿ ಸೇರಿ ವಾರ್ಷಿಕವಾಗಿ 5 ಲಕ್ಷ ಕೋಟಿ ಹಣವನ್ನು ಕೇಂದ್ರ ಸರ್ಕಾರ ಪಡೆಯುತ್ತಿದೆ. ಅದರಲ್ಲಿ ನಮಗೆ ವಾಪಸ್ ನೀಡುತ್ತಿರುವುದು ಕೇವಲ 10% ಅಂದರೆ 50 ಸಾವಿರ ಕೋಟಿ ಮಾತ್ರ. ಉಳಿದ ಹಣ ಗುಜರಾತ್, ಅಹಮದಾಬಾದ್, ಉತ್ತರ ಪ್ರದೇಶ, ಬಿಹಾರಕ್ಕೆ ಹೋಗುತ್ತಿದೆ.**
> – ಡಿ.ಕೆ. ಸುರೇಶ್, ಬಮೂಲ್ ಅಧ್ಯಕ್ಷ

ಕೇಂದ್ರ ಸಮಿತಿಯ ತಾಂತ್ರಿಕ ಸಲಹಾ ಸಮಿತಿ ನಿರ್ದೇಶನದ ಮೇರೆಗೆ ಈ ತೀರ್ಮಾನ ಮಾಡಿದ್ದಾರೆ. ತೇಜಸ್ವಿ ಸೂರ್ಯ ಅವರು ತಮ್ಮ ಬದ್ಧತೆಯನ್ನು ಕೇಂದ್ರ ಸರ್ಕಾರದ ಮುಂದೆ ಪ್ರದರ್ಶಿಸಲಿ ಎಂದು ತಿಳಿಸಿದರು. ಮೆಟ್ರೋ ಯೋಜನೆಗಳಿಗೆ ರಾಜ್ಯ ಸರ್ಕಾರ ಹಣ ನೀಡದಿರುವುದಕ್ಕೆ ದರ ಏರಿಕೆ ಎಂಬ ಆರೋಪದ ಬಗ್ಗೆ ಕೇಳಿದಾಗ, ಕೇಂದ್ರ ಸರ್ಕಾರ ನಮ್ಮ ರಾಜ್ಯದ ಮೆಟ್ರೋ ಯೋಜನೆಗಳಿಗೆ 10% ಹಣ ನೀಡುತ್ತದೆ. ರಾಜ್ಯ ಸರ್ಕಾರ 10% ಹಣದ ಜೊತೆಗೆ ಯೋಜನೆ ಜಾರಿಗೆ ಅಗತ್ಯವಿರುವ ಭೂಸ್ವಾಧೀನ ಪರಿಹಾರ ಮೊತ್ತವನ್ನು ಭರಿಸಬೇಕು. ಇದರಿಂದ ರಾಜ್ಯ ಸರ್ಕಾರದ ಪಾಲು ಸುಮಾರು 17%ರಷ್ಟು ಇರುತ್ತದೆ. ಉಳಿದ ಹಣವನ್ನು ಸಾಲದ ರೂಪದಲ್ಲಿ ಪಡೆಯಲಾಗುವುದು. ಅದರ ಹೊರೆ ಪ್ರಯಾಣಿಕರ ಮೇಲೆ ಬೀಳುತ್ತದೆ. ಸಮಯ ಸಿಕ್ಕಾಗ ಮೆಟ್ರೋ ನಮ್ಮದು ಎಂದು ಶೋ ಕೊಟ್ಟು, ಈಗ ಖಾಲಿ ಡಬ್ಬ ತೋರುತ್ತಿದ್ದಾರೆ ಎಂದು ಹರಿಹಾಯ್ದರು.

## ಶಾಸಕರ ಸಂಖ್ಯೆ 134, 149 ಮಂದಿಗೆ ಸಚಿವ ಸ್ಥಾನ : ಅಶೋಕ್ ವಾಗ್ದಾಳಿ

• ಉದಯವಾಹಿನಿ, ಬೆಂಗಳೂರು

ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಎನ್ನುವಂತೆ ಅಭಿವೃದ್ಧಿಗೆ ದುಡ್ಡಿಲ್ಲದಿದ್ದರೂ, ಸಿಕ್ಕ–ಸಿಕ್ಕವರಿಗೆಲ್ಲ ನಿಗಮ ಮಂಡಳಿಗಳಲ್ಲಿ ಸಚಿವ ಸ್ಥಾನಮಾನ ಕೊಟ್ಟಿರುವ ಕಾಂಗ್ರೆಸ್ ಸರ್ಕಾರ ರಾಜ್ಯದ ಜನರ ತೆರಿಗೆ ಹಣವನ್ನು ಪೋಲು ಮಾಡುತ್ತಿದೆ ಎಂದು ರಾಜ್ಯ ಸರ್ಕಾರದ ವಿರುದ್ಧ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ವಾಗ್ದಾಳಿ ನಡೆಸಿದ್ದಾರೆ. ತಮ್ಮ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ಕಾಂಗ್ರೆಸ್ ಪಕ್ಷದ ಹಾಲಿ ಶಾಸಕರ ಸಂಖ್ಯೆ 134ಇದೆ. ಸಚಿವ ಸ್ಥಾನಮಾನ ಹೊಂದಿರುವವರ ಸಂಖ್ಯೆ 149ಕ್ಕೂ ಅಧಿಕ. ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳಿಗೆ ಅಭಿವೃದ್ಧಿ ನಿಗಮಗಳು ಸೇರಿದಂತೆ ಅನೇಕ ನಿಗಮ ಮಂಡಳಿಗಳು ಅನುದಾನವಿಲ್ಲದೆ ಸೊರಗುತ್ತಿವೆ ಎಂದು ದೂರಿದರಲ್ಲದೇ, ಅಧ್ಯಕ್ಷರಿಗೆ ಗೂಟದ ಕಾರು, ಸಿಬ್ಬಂದಿಗೆ ಸಂಬಳ, ಸಾರಿಗೆ ಕೊಡುವುದೊಂದೇ ಸಾಧನೆಯಾಗಿದೆ ಎಂದು ವ್ಯಂಗ್ಯವಾಡಿದ್ದಾರೆ. ರಾಜ್ಯ ಕಂಡ ಅತ್ಯಂತ ದುರ್ಬಲ ಮತ್ತು ಅಸಮರ್ಥ ಸಿಎಂ ಸಿದ್ದರಾಮಯ್ಯ ಅವರು ತಮ್ಮ ಕುರ್ಚಿ ಉಳಿಸಿಕೊಳ್ಳಲು, ಬೇಕಾದವರಿಗೆಲ್ಲಾ ಸಚಿವ ಸ್ಥಾನಮಾನ ಕೊಟ್ಟು ತಮ್ಮ ಸ್ವಾರ್ಥಕ್ಕಾಗಿ ಅಧಿಕಾರ ನಡೆಸುತ್ತಿದ್ದಾರೆ ಎಂದು ಕಿಡಿಕಾರಿದರು. ಸಿದ್ದರಾಮಯ್ಯನವರೇ, ಇನ್ನೆಷ್ಟು ದಿನ ಸ್ವಾಮಿ ಈ ಭಂಡ ಬಾಳು? ರಾಜೀನಾಮೆ ಕೊಟ್ಟು ಕರ್ನಾಟಕವನ್ನು ಉಳಿಸಿ ಎಂದು ಒತ್ತಾಯಿಸಿದ್ದಾರೆ.

## ತಾಯಿ, ದೊಡ್ಡಮ್ಮನ ಖಾಸಗಿ ಫೋಟೋವನ್ನು ಪ್ರಿಯಕರನಿಗೆ ಕಳಿಸಿದ ಯುವತಿ

• ಉದಯವಾಹಿನಿ, ಬೆಂಗಳೂರು

ಬಿಬಿಎ ಪದವೀಧರೆ ತನ್ನ ತಾಯಿ, ದೊಡ್ಡಮನ ಖಾಸಗಿ ಫೋಟೋವನ್ನು ತನ್ನ ಪ್ರಿಯಕರನಿಗೆ ಕಳುಹಿಸಿರುವ ಅಘಾತಕಾರಿ ಘಟನೆಯೊಂದು ಬೆಳಕಿಗೆ ಬಂದಿದೆ. 23 ವರ್ಷದ ಪದವೀಧರೆಗೆ ಪ್ರಿಯಕರ ವರುಣ್ ಎಂಬಾತ ತಾಯಿ ಹಾಗೂ ದೊಡ್ಡಮನ ಖಾಸಗಿ ಫೋಟೋ ಕಳುಹಿಸುವಂತೆ ಹೇಳಿದ್ದಾನೆ. ಅದರಂತೆ ಆಕೆ ಅವರ ಖಾಸಗಿ ಫೋಟೋಗಳನ್ನು ತೆಗೆದು ಕಳುಹಿಸಿದ್ದಾಳೆ. ಪದೇಪದೇ ಮಗಳು ಯಾರೊಂದಿಗೋ ಮಾತನಾಡುತ್ತಿರುವ ಬಗ್ಗೆ ಪೋಷಕರು ಕೇಳಿದಾಗ ಆಕೆ ಜಾರಿಕೆ ಉತ್ತರ ನೀಡಿ ರೇಗಾಡಿದ್ದಾಳೆ. ಪಾಸ್ ವರ್ಡ್ ಪಡೆದು ಆಕೆಯ ಫೋನ್ ಪರಿಶೀಲಿಸಿದಾಗ ಅದರಲ್ಲಿ ತಾಯಿ ಮಲಗಿದ್ದಾಗ ತೆಗೆದ ಖಾಸಗಿ ಫೋಟೋ, ದೊಡ್ಡಮ ಸ್ನಾನ ಮಾಡುವ ಫೋಟೋಗಳು ಇರುವುದು ಕಂಡು ಒಂದು ಕ್ಷಣ ಆತಂಕಗೊಂಡಿದ್ದಾರೆ. ಅದನ್ನು ಯಾರಿಗೆ ಕಳುಹಿಸಿರಬಹುದೆಂದು ನೋಡಿದಾಗ ಗೆಳೆಯ ವರುಣ್ ಜೊತೆಗಿನ ಚಾಟ್ ಕಂಡುಬಂದಿದೆ. ಮಗಳ ವರ್ತನೆಯಿಂದ ಬೇಸತ್ತ ತಾಯಿ ಇದೀಗ ಬ್ಯಾಟರಾಯನಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

## ಮೋದಿ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಸುಳ್ಳು ಸುದ್ದಿ: ಯುವ ಕೈ ವಿರುದ್ಧ ಬಿಜೆಪಿ ದೂರು

• ಉದಯವಾಹಿನಿ, ಬೆಂಗಳೂರು

ಪ್ರಧಾನಿ ನರೇಂದ್ರಮೋದಿ ಅವರ ಭಾವಚಿತ್ರವನ್ನು ಬಳಸಿಕೊಂಡು ಅವರ ವ್ಯಕ್ತಿತ್ವಕ್ಕೆ ಧಕ್ಕೆ ತರುವ, ಒಳಸಂಚು ರೂಪಿಸಿ ಸುಳ್ಳು ಸುದ್ದಿ ಸೃಷ್ಟಿಸಿ ಪೋಸ್ಟರ್ ಅಂಟಿಸಿರುವ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್‌ನ ಪದಾಧಿಕಾರಿಗಳ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ಬಿಜೆಪಿ ದೂರು ನೀಡಿದೆ. ಶಾಸಕ, ಬೆಂಗಳೂರು ದಕ್ಷಿಣ ಜಿಲ್ಲಾಧ್ಯಕ್ಷ ರಾಮಮೂರ್ತಿ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್.ಹರೀಶ್ ಹಾಗೂ ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿಗೌಡ ಸೇರಿದಂತೆ ಮತ್ತಿತರರು ಯುವ ಕಾಂಗ್ರೆಸ್ ಪದಾಧಿಕಾರಿಗಳು ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿದರು. ಬೆಂಗಳೂರು ಸೆಂಟ್ರಲ್ ಡಿಸಿಪಿ ಅವರಿಗೆ ದೂರು ನೀಡಿದ ಬಿಜೆಪಿ ಮುಖಂಡರು, ಪ್ರಧಾನಿ ಮೋದಿಯವರ ಘನತೆಗೆ ಧಕ್ಕೆ ಉಂಟು ಮಾಡಿರುವ ಯುವ ಕಾಂಗ್ರೆಸ್ ಸದಸ್ಯರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕೆಂದು ದೂರಿನಲ್ಲಿ ಮನವಿ ಮಾಡಿದ್ದಾರೆ. ಕರ್ನಾಟಕ ಪ್ರದೇಶ ಯುತ್ ಕಾಂಗ್ರೆಸ್ ಸಮಿತಿ ಪದಾಧಿಕಾರಿಗಳು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಧಕ್ಕೆ ತರುವ ದುರುದ್ದೇಶದಿಂದ ಪ್ರಧಾನಮಂತ್ರಿಗಳ ಭಾವಚಿತ್ರ ಬಳಸಿಕೊಂಡು ಸುಳ್ಳು ಸುದ್ದಿಯ ಪೋಸ್ಟರ್ ಹಾಕಿ ರಾಜಕೀಯ ದಂಗೆಗೆ ಪ್ರಚೋದಿಸುತ್ತಿದ್ದಾರೆ ಎಂದು ದೂರಿದರು.

ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಧಾನಮಂತ್ರಿಗಳಾದ ಮೋದಿಜೀಯವರ ಭಾವಚಿತ್ರವನ್ನು ಬಳಸಿ, ದೇಶದ ಸಂಸತ್ತಿಗೆ ಬರಲು ಧೈರ್ಯವಿಲ್ಲದ ಪುಕ್ಕಲ ಪ್ರಧಾನಿ ದೇಶವನ್ನು ಹೇಗೆ ರಕ್ಷಿಸುತ್ತಾರೆ? ಎಂಬ ಬರಹವಿರುವ ಬ್ಯಾನರ್ ನ್ನು ವಿಧಾನಸೌದದ ಮುಂದೆ ಹಾಕುವ ಮೂಲಕ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ತಂದಿದ್ದಾರೆ. ಪ್ರಧಾನಮಂತ್ರಿಗಳಿಗೆ ಅವಮಾನ ಮಾಡಿ ಸುಳ್ಳು ಸುದ್ದಿಯ ಬ್ಯಾನರ್ ಮೂಲಕ ತೇಜೋವಧೆ ಮಾಡಿ, ರಾಜ್ಯದಲ್ಲಿ ಅಶಾಂತಿ ಮತ್ತು ರಾಜಕೀಯ ದಂಗೆಗಳನ್ನು ಪ್ರಚೋದಿಸುತ್ತಿರುವ ಕರ್ನಾಟಕ ಪ್ರದೇಶ ಯುತ್ ಕಾಂಗ್ರೆಸ್ ಪಧಾದಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿ ಕೂಡಲೇ ಬಂಧಿಸಬೇಕಾಕೆಂದು ಒತ್ತಾಯಿಸಿದ್ದಾರೆ.

## ಕಸ ವಿಲೇವಾರಿ ಟೆಂಡರ್‌ನಲ್ಲಿ ಮತ್ತೆ ಭಾರಿ ಗೋಲ್‌ಮಾಲ್

• ಉದಯವಾಹಿನಿ, ಬೆಂಗಳೂರು

ಜಿಬಿಎ ವ್ಯಾಪ್ತಿಯ ಕಸ ವಿಲೇವಾರಿ ಟೆಂಡರ್ ಹಂಚಿಕೆಯಲ್ಲಿ ಮತ್ತೆ ಭಾರಿ ಗೋಲ್‌ಮಾಲ್ ನಡೆದಿರುವ ಸಾಧ್ಯತೆಗಳು ಕಂಡು ಬರುತ್ತಿವೆ. ನಗರದಲ್ಲಿ ಕಸ ವಿಲೇವಾರಿ ಮಾಡುವ ಗುತ್ತಿಗೆಯಲ್ಲಿ ಆಂಧ್ರ ಮೂಲದ ಒಂದೇ ಕುಟುಂಬಕ್ಕೆ 8 ಪ್ಯಾಕೇಜ್ ನೀಡಿರುವುದು ಅನುಮಾನಗಳಿಗೆ ಎಡೆ ಮಾಡಿ ಕೊಡುತ್ತಿದೆ. ಸಾವಿರಾರು ಕೋಟಿ ರೂಪಾಯಿಗಳ ಬೆಂಗಳೂರು ನಗರದ ಕಸ ವಿಲೇವಾರಿಗೆ ಸಂಬಂಧಿಸಿದಂತೆ ಕಳೆದ ಎರಡು ವರ್ಷಗಳಿಂದ ಗುತ್ತಿಗೆ ನೀಡುವ ಸಂಬಂಧ ರಾಜ್ಯ ಸರ್ಕಾರ ಹಲವು ಬಾರಿ ಟೆಂಡರ್ ಕರೆದಿತ್ತು. ಅದರೆ ಕೆಲ ನಿಯಮಗಳು ಹಾಗೂ ಮಾನದಂಡ ಇಲ್ಲದ ಕೆಲ ಕಂಪನಿಗಳು ಟೆಂಡರ್‌ನಲ್ಲಿ ಭಾಗವಹಿಸಿದ್ದ ಪರಿಣಾಮ ಟೆಂಡರ್ ಪ್ರಕ್ರಿಯೆ ಹಳ್ಳ ಹಿಡಿದಿತ್ತು. ಅದರೆ ಕಳೆದ ತಿಂಗಳು ಹೊಸ ಟೆಂಡರ್ ಕರೆಯಲಾಗಿದ್ದು, ರಾಜ್ಯ ಸರ್ಕಾರ ಟೆಂಡರನ್ನು ಅಂತಿಮಗೊಳಿಸಿದೆ. ನಗರದ ತ್ಯಾಜ್ಯ ವಿಲೇವಾರಿ ಮಾಡೋದಕ್ಕೆ ಅಂತ ಸುಮಾರು 33 ಪ್ಯಾಕೇಜ್ ಗಳಿಗೆ ಟೆಂಡರ್ ಕರೆಯಲಾಗಿತ್ತು.ಅದರೆ ಈ ಟೆಂಡರ್ ನಲ್ಲಿ ಒಂದೇ ಕುಟುಂಬದ ಸುಮಾರು 8 ಜನರಿಗೆ ಈ ಬಹುಕೋಟಿ ಟೆಂಡರ್ ಸಿಕ್ಕಿರೋದು ಕೆಲ ಅನುಮಾನಗಳು ಹುಟ್ಟುಹಾಕಿದೆ. ಅಂಧ್ರ ಮೂಲದ ಪನ್ನತಿ ರೆಡ್ಡಿ ಕುಟುಂಬಕ್ಕೆ ಟೆಕ್ನಿಕಲ್ ಅನುಮೋದನೆ ನೀಡಿ ಗುತ್ತಿಗೆ ನೀಡಲಾಗಿದೆ. ಇನ್ನೂ ಗುತ್ತಿಗೆ ಹಿಂದೆ ಕಾಣದ ಕೈಗಳು ಕೆಲಸ ಮಾಡಿದೆ ಅಂತ ಬಿಜೆಪಿ ನಾಯಕರು ಆರೋಪ ಮಾಡಿದ್ದಾರೆ.

# ನೀರಿನ ಮರುಬಳಕೆಗೆ ಕ್ರಮ

## ಪೀಣ್ಯ ಕೈಗಾರಿಕೆಗಳಿಗೆ ಶೀಘ್ರ ಸಂಸ್ಕರಿಸಿದ ನೀರು ಪೂರ್ಯೈಕೆಗೆ ಜಲಮಂಡಳಿ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ಏಷ್ಯಾದ ಎರಡನೇ ಅತಿದೊಡ್ಡ ಕೈಗಾರಿಕಾ ಪ್ರದೇಶವಾಗಿರುವ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಸಂಸ್ಕರಿಸಿದ ನೀರು ಪೂರೈಸಲು ಜಲಮಂಡಳಿ ಸಿದ್ಧತೆ ನಡೆಸಿದೆ. ಈ ಮೂಲಕ ನೀರಿನ ಉಳಿತಾಯ ಹಾಗೂ ಸಂಸ್ಕರಿಸಿದ ನೀರಿನ ಸಮರ್ಪಕ ಮರುಬಳಕೆಗೆ ಆದ್ಯತೆ ನೀಡಲು ಮುಂದಾಗಿದೆ. ರಾಜಧಾನಿಯಲ್ಲಿ 2024ರ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಿತ್ತು. ಆಗ ನಗರದ ಕೈಗಾರಿಕಾ ಪ್ರದೇಶಗಳಿಗೆ ಸಂಸ್ಕರಿಸಿದ ನೀರು ಸರಬರಾಜು ಮಾಡುವ ಕುರಿತು ಚಿಂತನೆ ನಡೆಸಲಾಗಿತ್ತು. ಅದರಂತೆ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ 4 ಎಂಎಲ್‌ಡಿಯಷ್ಟು ಸಂಸ್ಕರಿಸಿದ ನೀರನ್ನು ಪೂರೈಸಲು ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಸಂಸ್ಕರಿಸಿದ ನೀರು ಪೂರೈಕೆಗೆ ಸರ್ಕಾರ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಜಲಮಂಡಳಿಯು ಕಾಮಗಾರಿ ಕೈಗೊಂಡಿದೆ. ಏಪ್ರಿಲ್ ವೇಳೆಗೆ ಸಂಸ್ಕರಿಸಿದ ನೀರು ಪೂರೈಸಲು ಉದ್ದೇಶಿಸಿದೆ. ಪೀಣ್ಯ ಕೈಗಾರಿಕೆಗಳಿಗೆ ಜಲಬಾಧೆ ತಪ್ಪಿಸುವ ಉದ್ದೇಶವನ್ನೂ ಇದು ಹೊಂದಿದೆ. ಜಲಮಂಡಳಿಯು 34 ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು (ಎಸ್‌ಟಿಪಿ) ಹೊಂದಿದ್ದು, ನಿತ್ಯ 1348.5 ಎಂಎಲ್‌ಡಿ ಕೊಳಚೆ ನೀರನ್ನು ಸಂಸ್ಕರಣೆ ಮಾಡುತ್ತಿದೆ. ಇದರಲ್ಲಿ 1,000 ದಶಲಕ್ಷ ಲೀಟರ್ ನೀರನ್ನು ಮರುಬಳಕೆ ಮಾಡಲಾಗುತ್ತಿದೆ.

ಈ ನೀರನ್ನು ಜಕ್ಕೂರು, ಯಲಹಂಕ, ಅಗರ, ಹುಳಿಮಾವು ಸೇರಿದಂತೆ ಹಲವು ಕೆರೆಗಳಿಗೆ ತುಂಬಿಸಲಾಗುತ್ತಿದೆ. ಈ ನೀರಿನ ಮರುಬಳಕೆಯನ್ನು ಮತ್ತಷ್ಟು ಹೆಚ್ಚಿಸಲು ಕೈಗಾರಿಕಾ ಪ್ರದೇಶಗಳಿಗೆ ಅನ್ಯ ಉದ್ದೇಶಕ್ಕೆ ಕೊಳವೆ ಮೂಲಕ ಪೂರೈಸಲು ತಿರ್ಮಾನಿಸಿದೆ. ಮೊದಲ ಹಂತದಲ್ಲಿ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಸಂಸ್ಕರಿಸಿದ ನೀರನ್ನು ಏಪ್ರಿಲ್‌ನಿಂದ ಪೂರೈಸಲು ತೀರ್ಮಾನಿಸಲಾಗಿದೆ.

**4 ಎಂಎಲ್‌ಡಿ ಸಂಸ್ಕರಿಸಿದ ನೀರು:** ನಾಗಸಂದ್ರದಲ್ಲಿನ 40 ಎಂಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕದಿಂದ 4 ಎಂಎಲ್‌ಡಿಯಷ್ಟು ಸಂಸ್ಕರಿಸಿದ ನೀರು ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಸರಬರಾಜು ಆಗಲಿದೆ. ಈ ಪ್ರದೇಶದಲ್ಲಿ ಸುಮಾರು ,2500 ಕೈಗಾರಿಕೆಗಳು ಜಲಮಂಡಳಿಯ ಸಂಪರ್ಕ ಪಡೆದಿವೆ. ಇದರಲ್ಲಿ 500 ಕೈಗಾರಿಕೆಗಳು ಈ ಸಂಸ್ಕರಿಸಿದ ನೀರು ಪಡೆಯಲು ಒಪ್ಪಿಕೊಂಡಿವೆ.

ಕೈಗಾರಿಕಾ ಪ್ರದೇಶದಲ್ಲಿರುವ ಲಕ್ಷಾಂತರ ಕಾರ್ಮಿಕರು ದಿನನಿತ್ಯ ಫ್ಲಶಿಂಗ್ ಮತ್ತು ಇತರೆ ಸ್ವಚ್ಛತಾ ಕಾರ್ಯಗಳಿಗೆ ನೀರು ಬಳಸುತ್ತಿದ್ದು, ಸಂಸ್ಕರಿಸಿದ ನೀರನ್ನು ಉಪಯೋಗಿಸುವುದರಿಂದ ಕುಡಿಯುವ ನೀರು ಉಳಿತಾಯ ಆಗಲಿದೆ. ಉತ್ಪಾದನಾ ಕಾರ್ಯಗಳಿಗೆ ಹೊರತು ಪಡಿಸಿ, ಇತರೆ ಉದ್ದೇಶಗಳಿಗೆ ಉನ್ನತ ಗುಣಮಟ್ಟದ ಸಂಸ್ಕರಿಸಿದ ನೀರನ್ನು ಬಳಸುವ ಮೂಲಕ ನೀರಿನ ವೆಚ್ಚವನ್ನೂ ಕಡಿಮೆ ಮಾಡಬಹುದು. ಸಂಸ್ಕರಿಸಿದ ನೀರು ಕಡಿಮೆ ದರದಲ್ಲಿ ಸಿಗಲಿದೆ. ಸಂಸ್ಕರಿಸಿದ ನೀರು ಕಲುಷಿತಗೊಳ್ಳದಂತೆ ಗುಣಮಟ್ಟ ಕಾಯ್ದುಕೊಳ್ಳಲು ಜಲಮಂಡಳಿಯು ಪ್ರತ್ಯೇಕ ಮೂಲಸೌಕರ್ಯ ನಿರ್ಮಿಸಲು ತೀರ್ಮಾನಿಸಿದೆ. ಸುಮಾರು 20 ಕೋಟಿ ರೂ. ವೆಚ್ಚದಲ್ಲಿ ಸಂಸ್ಕರಿಸಿದ ನೀರಿನ ಪೂರೈಕೆ ಯೋಜನೆ ಕೈಗೊಳ್ಳಲಾಗಿದೆ.

**ಯೋಜನೆ ಹೇಗೆ?:** ಸುಮಾರು 20 ಕೋಟಿ ರೂ. ವೆಚ್ಚದಲ್ಲಿ ಪೀಣ್ಯ ಕೈಗಾರಿಕಾ ಪ್ರದೇಶದ ಎನ್‌ಟಿಟಿಎಫ್ ಬಳಿ ಸಂಪ್ ಮತ್ತು ಪಂಪ್‌ಹೌಸ್ ನಿರ್ಮಾಣ, ಡಿಐ ರೈಸಿಂಗ್ ಮೇನ್ ಸೇರಿದಂತೆ ಸುಮಾರು 5 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲ ಸಂಗ್ರಹಾಗಾರ ನಿರ್ಮಿಸಲಾಗುವುದು. ಈ ಸಂಗ್ರಹಾಗಾರಕ್ಕೆ ಸುಮಾರು 4.5 ಕಿ.ಮೀ ದೂರದಲ್ಲಿರುವ ನಾಗಸಂದ್ರ ಎಸ್ ಟಿಪಿಯಿಂದ ಸಂಸ್ಕರಿಸಿದ ನೀರನ್ನು ಕೊಳವೆ ಮಾರ್ಗದ ಮೂಲಕ ತರಲಾಗುವುದು. ಇಲ್ಲಿಂದ ಹೆಚ್ಚಿನ ಸಾಂದ್ರತೆಯ ಪ್ರತ್ಯೇಕ ಕೊಳವೆಗಳ ಅಳವಡಿಕೆಯೊಂದಿಗೆ ಒಟ್ಟು ಸುಮಾರು 27 ಕಿ.ಮೀ. ಪ್ರತ್ಯೇಕ ವಿತರಣಾ ಜಾಲದ ವ್ಯವಸ್ಥೆ ಮಾಡಲಾಗುವುದು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಉದಯವಾಹಿನಿ ಚಿತ್ರ




- ಬೇಸಿಗೆಯಲ್ಲಿ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯ ಆಗದಿರಲು ಮುನ್ನೆಚ್ಚರಿಕೆ ಕ್ರಮ.
- ಪೀಣ್ಯದಲ್ಲಿರುವ ಕೈಗಾರಿಕೆಗಳಿಗೆ 4 ಎಂಎಲ್‌ಡಿಯಷ್ಟು ಸಂಸ್ಕರಿಸಿದ ನೀರು ಪೂರೈಕೆ.

**ನೀರು ಪೂರೈಸುವ ಉದ್ದೇಶ**

### ರಾಜ್ಯ ಸರ್ಕಾರ ಅನುಮತಿ

**ನೀರು ಮರುಬಳಕೆ ಮತ್ತು ನೀರಿನ ಉಳಿತಾಯ ದೃಷ್ಟಿಯಿಂದ ರಾಜಧಾನಿ ಬೆಂಗಳೂರಿನ ಪೀಣ್ಯದಲ್ಲಿರುವ ಕೈಗಾರಿಕೆಗಳಿಗೆ, ಸಂಸ್ಕರಿಸಿದ ನೀರು ಸರಬರಾಜು ಮಾಡುವ ಯೋಜನೆಯನ್ನು ಬೆಂಗಳೂರು ಜಲಮಂಡಳಿ ಪ್ರಕಟಿಸಿದೆ. ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗದಿರಲಿ ಎಂಬ ಕಾರಣಕ್ಕೆ, ಜಲಮಂಡಳಿ ಈ ನಿರ್ಧಾರವನ್ನು ಪ್ರಕಟಿಸಿದೆ ಎಂದು ಹೇಳಲಾಗಿದೆ. ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ 4 ಎಂಎಲ್‌ಡಿಯಷ್ಟು ಸಂಸ್ಕರಿಸಿದ ನೀರನ್ನು ಪೂರೈಸಲು, ರಾಜ್ಯ ಸರ್ಕಾರ ಅನುಮತಿ ನೀಡಿದೆ ಎಂದು ಹೇಳಲಾಗಿದೆ.**

## ಏರುತ್ತಲೇ ಇದೆ ಚಿನ್ನ, ಬೆಳ್ಳಿ ಧಾರಣೆ

• ಉದಯವಾಹಿನಿ, ಬೆಂಗಳೂರು

ಇಳಿಕೆಯಾಗಿದ್ದ ಚಿನ್ನ ಮತ್ತು ಬೆಳ್ಳಿ ದರಗಳಲ್ಲಿ ಮತ್ತೆ ಏರಿಕೆಯಾಗಿದೆ. ಸೋಮವಾರ 24 ಕ್ಯಾರೆಟ್‌ನ ಚಿನ್ನ ಒಂದು ಗ್ರಾಂ ಗೆ 224 ರೂ. ಹಾಗೂ ಬೆಳ್ಳಿ ಒಂದು ಕೆಜಿಗೆ 15 ಸಾವಿರ ರೂ. ಹೆಚ್ಚಳವಾಗಿದೆ. ನಾಗಾಲೋಟದಲ್ಲಿ ಏರಿಕೆಯಾಗುತ್ತಿದ್ದ ದರಕ್ಕೆ ತಡೆಯೊಡ್ಡಿದ ರೀತಿಯಲ್ಲಿ ಇಳಿಕೆಯಾಗಿ ಆಭರಣ ಪ್ರಿಯರು ಸಮಾಧಾನ ಪಡುವಂತಾಗಿತ್ತು.

ಈಗಾಗಲೇ ದುಬಾರಿ ದರದಲ್ಲಿ ಮಾರಾಟವಾಗುತ್ತಿರುವ ಚಿನ್ನ ಮತ್ತು ಬೆಳ್ಳಿಯ ಬೆಲೆಗಳಲ್ಲಿ ಕಳೆದ ವಾರ ಏರಿಳಿತವಾಗಿ ಇಳಿಮುಖವಾಗುವ ಲಕ್ಷಣಗಳು ಗೋಚರಿಸಿದ್ದವು. ಆದರೆ, ಕಳೆದ ಶನಿವಾರದಿಂದ ಮತ್ತೆ ಏರುಗತಿಯಲ್ಲಿ ಸಾಗುತ್ತಿರುವುದರಿಂದ ಆಭರಣ ಪ್ರಿಯರಿಗೆ ನಿರಾಶೆ ಉಂಟಾಗಿದೆ. ಚಿನ್ನದ ಮಾರಾಟ ದರವು ಗರಿಷ್ಠ ಪ್ರಮಾಣದಲ್ಲಿ ದಾಖಲೆ ನಿರ್ಮಿಸಿದೆ. ಶ್ರೀಸಾಮನ್ಯರ ಕೈಗೆಟುಕದ ರೀತಿಯಲ್ಲಿ ಏರಿಕೆಯಾಗುತ್ತಿರುವುದರಿಂದ ಮದುವೆ ಹಾಗೂ ಶುಭ ಕಾರ್ಯಗಳನ್ನು ಮಾಡುವವರ ಆತಂಕ ಹೆಚ್ಚಾಗಿದೆ.ದರ ಏರಿಕೆಯಿಂದಾಗಿ 24 ಕ್ಯಾರೆಟ್‌ನ ಚಿನ್ನ ಒಂದು ಗ್ರಾಂ ಗೆ 15,884 ರೂ.ಗೆ ತಲುಪಿದೆ. 22 ಕ್ಯಾರೆಟ್‌ನ ಚಿನ್ನ ಒಂದು ಗ್ರಾಂಗೆ 205 ರೂ. ಹೆಚ್ಚಳವಾಗಿ 14,560 ರೂ. ನಷ್ಟಿದ್ದರೆ, 18 ಕ್ಯಾರೆಟ್‌ನ ಚಿನ್ನ ಒಂದು ಗ್ರಾಂ ಗೆ 168 ರೂ. ಏರಿಕೆಯಾಗಿ 11,913 ರೂ.ವನ್ನು ತಲುಪಿದೆ. 24 ಕ್ಯಾರೆಟ್‌ನ ಚಿನ್ನ ಒಂದು ಗ್ರಾಂಗೆ 16 ಸಾವಿರ ರೂ. ಗಡಿ ದಾಟಿ ಗ್ರಾಹಕರಲ್ಲಿ ಗಾಬರಿ ಹುಟ್ಟಿಸಿತ್ತು. ಅದೇ ರೀತಿ ಬೆಳ್ಳಿಯು ಒಂದು ಕೆ.ಜಿ.ಗೆ 4.10 ಲಕ್ಷ ರೂ.ಗೆ ತಲುಪಿ ನಾಗಲೋಟ ಏರಿಕೆಯನ್ನು ಸಾಬೀತು ಪಡಿಸಿತ್ತು. ಫೆ.7ರಂದು ಏರಿಕೆಯಾಗಿದ್ದ ಚಿನ್ನ ಮತ್ತು ಬೆಳ್ಳಿ ದರಗಳು ನಿನ್ನೆ ಸ್ಥಿರವಾಗಿದ್ದವು. ಸೋಮವಾರ ಮತ್ತೆ ಏರುಗತಿಯಲ್ಲಿ ಸಾಗುತ್ತಿವೆ. ಆಭರಣ ಖರೀದಿಸುವವರಿಗಿಂತ ಚಿನ್ನ, ಬೆಳ್ಳಿಯ ಮೇಲೆ ಹೂಡಿಕೆ ಮಾಡುವವರ ಸಂಖ್ಯೆ ಹೆಚ್ಚಾಗಿರುವುದರಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಏರಿಕೆ ಆಗುತ್ತಿದೆ. ಇದರ ಪರಿಣಾಮ ಸ್ಥಳೀಯ ಮಾರುಕಟ್ಟೆಯ ಮೇಲೂ ಆಗುತ್ತಿದೆ. ಸುರಕ್ಷತೆಯ ದೃಷ್ಟಿಯಿಂದ ಹೆಚ್ಚು ಬಂಡವಾಳವನ್ನು ಚಿನ್ನ, ಬೆಳ್ಳಿಯ ಮೇಲೆ ಹೂಡಿಕೆ ಮಾಡಲಾಗುತ್ತಿದೆ ಎಂಬ ವ್ಯಾಖ್ಯಾನ ಮಾಡಲಾಗುತ್ತಿದೆ.



ಉದಯವಾಹಿನಿ ಚಿತ್ರ

## ಹೆಚ್ಚಿದ ಆನ್‌ಲೈನ್ ಬೆಟ್ಟಿಂಗ್ ಹಾವಳಿ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಆನ್‌ಲೈನ್ ಬೆಟ್ಟಿಂಗ್ ಹಾವಳಿ ತೀವ್ರಗೊಂಡಿದೆ. ಕಳೆದ 4 ವರ್ಷದಲ್ಲಿ 35 ಮಂದಿ ಆನ್‌ಲೈನ್ ಬೆಟ್ಟಿಂಗ್ ದಂಧೆಗೆ ಬಲಿಯಾಗಿದ್ದಾರೆ. ಆತಂಕಕಾರಿ ವಿಚಾರವೆಂದರೆ ಮಕ್ಕಳು, ವಿದ್ಯಾರ್ಥಿಗಳು ಕೂಡ ಆನ್‌ಲೈನ್ ಬೆಟ್ಟಿಂಗ್‌ನಿಂದ ಪ್ರಾಣ ಕಳೆದುಕೊಳ್ಳುವಂತಾಗಿದೆ. ಕ್ರಿಕೆಟ್, ಫುಟ್‌ಬಾಲ್, ಟೆನ್ನಿಸ್, ಕುದುರೆ ರೇಸಿಂಗ್, ಇ- ಸ್ಪೋರ್ಟ್ಸ್‌ಗಳಲ್ಲಿ ಹಣ ಹೂಡಲಾಗುತ್ತಿದೆ. ಅಲ್ಲದೆ ಕ್ಯಾಸಿನೊ ಆಟಗಳಾದ ಸ್ಲಾಟ್ ಮಷೀನ್‌ಗಳು, ಬ್ಲ್ಯಾಕ್ ಜಾಕ್, ಲೈವ್ ಕ್ಯಾಸಿನೋಗಳು ಇವೆ.

ಇಷ್ಟೇ ಅಲ್ಲದೆ ಫ್ಯಾಂಟಸಿ ಗೇಮ್ಸ್ ಡ್ರೀಮ್ 11, ಎಂಪಿಎಲ್ ನಂತಹ ಪ್ಲಾಟ್‌ಫಾರ್ಮ್‌ಗಳಿವೆ. ಜೊತೆಗೆ ಆನ್‌ಲೈನ್ ಪೋಕರ್, ರಮ್ಮಿ, ಲಾಟರಿ ಆಟಗಳು ಇವೆ.ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು 468 ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದೆ. 4 ವಿದ್ಯಾರ್ಥಿಗಳು ಮತ್ತು ಮಕ್ಕಳು ಆನ್‌ಲೈನ್ ಬೆಟ್ಟಿಂಗ್ ಗೆ ಬಲಿಯಾದರೆ, 31 ಇತರರು ಪ್ರಾಣಕಳೆದುಕೊಂಡಿದ್ದಾರೆ. ರಾಜ್ಯದಲ್ಲಿ ಆನ್‌ಲೈನ್ ಗೇಮ್‌ನಿಂದ ವಿದ್ಯಾರ್ಥಿಗಳು ಯುವಕರು, ಮಕ್ಕಳು, ಸಾರ್ವಜನಿಕರನ್ನು ರಕ್ಷಿಸಲು ಕಠಿಣ ಕ್ರಮಗಳನ್ನು ಅನುಸರಿಸಲಾಗುತ್ತಿದೆ ಎಂದು ಗೃಹ ಇಲಾಖೆ ತಿಳಿಸಿದೆ.

ಪೊಲೀಸ್ ಅಧಿಕಾರಿ, ಸಿಬ್ಬಂದಿಗಳು ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ಅರಿವು ಮೂಡಿಸುವ ಪ್ರೋಗ್ರಾಮ್ ಅನ್ನು ನಡೆಸಲಾಗುತ್ತಿದೆ. ಆನ್‌ಲೈನ್ ಗೇಮ್ಸ್‌ನಿಂದ ಆಗುವ ದುಷ್ಪರಿಣಾಮದ ಬಗ್ಗೆ ಉಪನ್ಯಾಸ, ದೃಶ್ಯರೂಪಕಗಳ ಮೂಲಕ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಇಲಾಖೆ ತಿಳಿಸಿದೆ. ಬೀಟ್‌ಗಳಲ್ಲಿ ಯುವಕರು, ಸಾರ್ವಜನಿಕರೊಂದಿಗೆ ಸಭೆ ನಡೆಸಿ ಯಾವುದೇ ತರಹದ ಆನ್‌ಲೈನ್ ಗೇಮ್ಸ್ ಮತ್ತು ಆನ್‌ಲೈನ್ ಜೂಜುಗಳ ಚಟಕ್ಕೆ ಒಳಗಾಗದಂತೆ ಎಚ್ಚರಿಕೆ ನೀಡಲಾಗುತ್ತಿದೆ. ಅಲ್ಲದೆ ಆನ್‌ಲೈನ್ ಗೇಮ್ಸ್, ಜೂಜಿನಲ್ಲಿ ತೊಡಗಿಸಿಕೊಂಡವರ ಮೇಲೆ ದಾಳಿ ನಡೆಸಿ ಪ್ರಕರಣಗಳನ್ನು ದಾಖಲು ಮಾಡಲಾಗುತ್ತಿದೆ.

**ಬೆಟ್ಟಿಂಗ್ ನಿಯಂತ್ರಣ ಆಗುತ್ತಿಲ್ಲವೇಕೆ?:** ಆನ್‌ಲೈನ್ ಬೆಟ್ಟಿಂಗ್ ನಿಯಂತ್ರಣದ ಸಲುವಾಗಿ ಕರ್ನಾಟಕ ಪೊಲೀಸ್ ಕಾಯ್ದೆ-(ತಿದ್ದುಪಡಿ) 2021ರಲ್ಲಿ ಸೆಕ್ಷನ್ 2ಕ್ಕೆ ತಿದ್ದುಪಡಿ ಮಾಡಿ ಕಾಯ್ದೆಯಲ್ಲಿ ಆನ್ ಲೈನ್ ಆಟಗಳು ಮತ್ತು ಕೌಶಲ್ಯದ ಆನ್‌ಲೈನ್ ಆಟಗಳನ್ನು ಸೇರ್ಪಡೆ ಮಾಡಲಾಗಿದೆ. ಈ ಆದೇಶ ಹೊರಡಿಸಿದ ನಂತರ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳನ್ನು ದಾಖಲಿಸುತ್ತಿರುವ ಕುರಿತಂತೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಲಾಗಿದೆ. ಈ ರಿಟ್ ಅರ್ಜಿಗೆ ಸಂಬಂಧಿಸಿದಂತೆ, ಉಚ್ಚನ್ಯಾಯಾಲಯವು ಆದೇಶವನ್ನು ಹೊರಡಿಸಿದೆ.

ಆದೇಶದಲ್ಲಿ ಕರ್ನಾಟಕ ಪೊಲೀಸ್ ಕಾಯ್ದೆಗೆ ಮಾಡಿರುವ ತಿದ್ದುಪಡಿಯನ್ನು ತಡೆಹಿಡಿಯಲಾಗಿರುತ್ತದೆ. ನಂತರದಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಈ ತೀರ್ಪಿನ ವಿರುದ್ಧ ಮೇಲನವಿ ಸಲ್ಲಿಸಲು ನಿರ್ದೇಶಿಸಿದ ಮೇರೆಗೆ, ಸರ್ಕಾರದ ಪರವಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಗಿರುತ್ತದೆ. ಸರ್ವೋಚ್ಚ ನ್ಯಾಯಾಲಯವು ಎಸ್. ಎಲ್.ಪಿ ಅರ್ಜಿಯನ್ನು ಪುರಸ್ಕರಿಸಿದೆ ಹಾಗೂ ಪ್ರಕರಣ ವಿಚಾರಣಾ ಹಂತದಲ್ಲಿದೆ.

ಉದಯವಾಹಿನಿ ಚಿತ್ರ




## ಜಿಬಿಎ ವ್ಯಾಪ್ತಿಯಲ್ಲಿ ಜಾರಿಗೆ ಬಂತು ಹೊಸ ಜಾಹೀರಾತು ನೀತಿ

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಹೊಸ ಜಾಹೀರಾತು ನೀತಿ ಜಾರಿಗೆ ಬಂದಿದೆ. ಹೊಸ ಜಾಹೀರಾತು ಬೈಲಾಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದ್ದು, ನಗರದಲ್ಲಿ ಮತ್ತೆ ಹೊರಾಂಗಣ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ನೀಡುವ ನಿಟ್ಟಿನಲ್ಲಿ ಜಾಹೀರಾತು ಉಪ ವಿಧಿ-2024ರ ಕರಡು ಅಧಿಸೂಚನೆಗೆ ಅನುಮತಿ ನೀಡಲಾಗಿದೆ. ಮಾರ್ಗಸೂಚಿ ದರದ ಮೇಲೆ ಜಾಹಿರಾತು ಶುಲ್ಕ ನಿಗದಿ, ರಸ್ತೆ, ಸರ್ಕಲ್ ಮತ್ತು ವಲಯವಾರು ಟೆಂಡರ್ ಮೂಲಕ ಜಾಹಿರಾತು ಪ್ರದರ್ಶನಕ್ಕೆ ಅವಕಾಶ ನೀಡಿ ಟೆಂಡರ್‌ನಲ್ಲಿ ಭಾಗವಹಿಸಲು ಕಡ್ಡಾಯ 5 ಲಕ್ಷ ರೂ. ಶುಲ್ಕ ಪಾವತಿಸಿ ನೋಂದಣಿ ಸೇರಿದಂತೆ ಹಲವು ಅಂಶಗಳನ್ನು ಒಳಗೊಂಡ ಬಿಬಿಎಂಪಿಯು ಕರಡು ಜಾಹೀರಾತು ಉಪ ವಿಧಿಯನ್ನು ರೂಪಿಸಲಾಗಿದೆ. ಕಳೆದ ಜುಲೈನಲ್ಲಿ ಪ್ರಕಟಿಸಿ ಆಕ್ಷೇಪಣೆ ಸಲ್ಲಿಸುವುದಕ್ಕೆ 30 ದಿನ ಕಾಲಾವಕಾಶ ನೀಡಿತ್ತು. ಆ ಬಳಿಕ ಸಲ್ಲಿಕೆಯಾದ ಆಕ್ಷೇಪಣೆಗಳನ್ನು ಪರಿಶೀಲನೆ ಮಾಡಿ ಅಗತ್ಯ ತಿದ್ದುಪಡಿ ಮಾಡಿ ಇದೀಗ ಬೈಲಾವನ್ನು ಅಂತಿಮಗೊಳಿಸಲಾಗಿದೆ.

ಈ ನಡುವೆ ಹೈಕೋರ್ಟ್ ಜಾಹೀರಾತು ಉಪ ವಿಧಿಯ ಬಗ್ಗೆ ತೆಗೆದುಕೊಂಡ ತೀರ್ಮಾನಗಳನ್ನು ಕೋರ್ಟ್‌ಗೆ ಸಲ್ಲಿಸಿ ಅನುಮೋದನೆ ಪಡೆದು ರಾಜ್ಯಪತ್ರ ಪ್ರಕಟಿಸಬೇಕೆಂದು ನಿರ್ದೇಶನ ನೀಡಿತ್ತು. ಅದರಂತೆ ಕಳೆದ ತಿಂಗಳು ಕೋರ್ಟ್‌ಗೆ ಸಲ್ಲಿಕೆ ಮಾಡಲಾಗಿದೆ. ಕೋರ್ಟ್ ಅನುಮೋದನೆ ನೀಡಿದೆ.

ಉದಯವಾಹಿನಿ ಚಿತ್ರ




ಪ್ರತಿ ಜಾಹೀರಾತು ಫಲಕದಿಂದ ಮತ್ತೊಂದು ಜಾಹೀರಾತು ಫಲಕಕ್ಕೆ 100 ಮೀಟರ್ ಅಂತರ ಇರಬೇಕು. ಆಟೋ, ಬಸ್‌ಗಳ ಮೇಲೆ ಪ್ರದರ್ಶಿಸುವ ಜಾಹೀರಾತುಗಳಿಗೆ ದರ ನಿಗದಿಪಡಿಸಲಾಗಿದೆ. ವಿಧಾನಸೌಧ- ಹೈಕೋರ್ಟ್ ಸೇರಿದಂತೆ ಎ ಝೋನ್ ಗಳ ಪ್ರದೇಶದಲ್ಲಿ ಜಾಹೀರಾತು ಪ್ರದರ್ಶನ ನಿಷೇಧ ಹೇರಿಕೆ ಸೇರಿದಂತೆ ಮೊದಲಾದ ವಿಚಾರಗಳು ಜಾಹೀರಾತು ಬೈಲಾದಲ್ಲಿ ಉಲ್ಲೇಖಿಸಲಾಗಿದೆ.

ಇನ್ನೂ ಹೊಸ ನೀತಿಯಲ್ಲಿ ರಸ್ತೆ, ಸರ್ಕಲ್ ಹಾಗೂ ವಲಯವಾರು ಮಾದರಿಯಲ್ಲಿ ಟೆಂಡರ್ ನಡೆಸುವುದಕ್ಕೆ ಅವಕಾಶ ಕೊಡಲಾಗಿದೆ.ರಸ್ತೆಯ ಅಗಲ, ಸರ್ಕಲ್ ಗಾತ್ರಕ್ಕೆ ಅನುಗುಣ ಜಾಹೀರಾತು ಫಲಕ ಅಳವಡಿಕೆಗೆ ತೀರ್ಮಾನಿಸಲಾಗಿದೆ.

ಇನ್ನೂ ಜಾಹೀರಾತು ಪ್ರದರ್ಶನಕ್ಕೆ ಶುಲ್ಕ ನಿಗದಿ ಪಡಿಸುವುದಕ್ಕೆ ಮಾರ್ಗಸೂಚಿ ದರ ಆಧರಿಸಲಾಗುತ್ತದೆ. ಇದರಿಂದ ಹೆಚ್ಚಿನ ಮಾರ್ಗಸೂಚಿದ ದರ ಇರುವ ಪ್ರದೇಶದಲ್ಲಿ ಜಾಹೀರಾತು ಪ್ರದರ್ಶನದ ಶುಲ್ಕ ಪ್ರಮಾಣ ಹೆಚ್ಚಾಗಲಿದೆ. ಕಡಿಮೆ ಇರುವ ಕಡೆ ದರ ಕಡಿಮೆ ಆಗಲಿದೆ. ಹೆಚ್ಚಿನ ಮೊತ್ತ ಬಿಡ್ ಮಾಡಿದವರಿಗೆ ಗುತ್ತಿಗೆ ದೊರೆಯಲಿದೆ.

ನೂತನ ಜಾಹೀರಾತು ನೀತಿಯಲ್ಲಿ ಕಡ್ಡಾಯವಾಗಿ ಪರಿಸರ ಸ್ನೇಹಿ ಇರುವ ವಸ್ತುಗಳನ್ನು ಬಳಕೆ ಮಾಡಿಕೊಳ್ಳಬೇಕು. ಇಲ್ಲವಾದರೆ, ಟೆಂಡರ್ ರದ್ದು ಪಡಿಸುವ ಅಧಿಕಾರವನ್ನು ನಗರಪಾಲಿಕೆ ಹೊಂದಿರಲಿದೆ. ಸರ್ಕಾರಿ ಮತ್ತು ಖಾಸಗಿ ಕಟ್ಟಡಗಳ ಮೇಲೆ ಜಾಹಿರಾತು ನೀಡಲು ಅವಕಾಶ ನೀಡಲಾಗುವುದು. ನಗರಪಾಲಿಕೆಗೆ ತೆರಿಗೆ ನೀಡಿ ಖಾಸಗಿ ಕಟ್ಟಡಗಳು ಜಾಹಿರಾತು ಅಳವಡಿಕೆಗೆ ಬಾಡಿಗೆ ನೀಡಬಹುದಾಗಿದೆ.

ಹೊಸ ಜಾಹೀರಾತು ನೀತಿ ಜಾರಿಯಿಂದ ಜಿಬಿಎಗೆ ವಾರ್ಷಿಕವಾಗಿ ಒಂದು ಸಾವಿರ ಕೋಟಿ ರೂ.ಗಳ ಆದಾಯ ನಿರೀಕ್ಷೆ ಮಾಡಲಾಗಿದೆ. ಇದೀಗ ಜಿಬಿಎ ವ್ಯಾಪ್ತಿ ದೊಡ್ಡಾಗಿದೆ. ವಾಣಿಜ್ಯ ವಹಿವಾಟು ಸಹ ಹೆಚ್ಚಾಗಿದೆ. ಹಾಗಾಗಿ, ಒಂದು ಸಾವಿರ ಕೋಟಿ ರೂ.ಗೂ ಅಧಿಕ ಮೊತ್ತ ಸಂಗ್ರಹ ಆಗಲಿದೆ ಎಂದು ಜಿಬಿಎ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

**ಜಾಹೀರಾತು ದರ;** 3,000 ಚದುರ ಅಡಿಗಿಂತ ಕಡಿಮೆ ಇರುವ ಪ್ರದೇಶದಲ್ಲಿ ಅಡಿಗೆ 45 ರೂ. ದರ ನಿಗದಿ ಮಾಡಲಾಗಿದೆ. 3,000 ದಿಂದ 5,000 ಚದುರಡಿಗಿಂತ ಕಡಿಮೆ ಇದ್ದರೆ ಅಡಿಗೆ 55 ರೂ. 5,000 ದಿಂದ 10,000 ಚದುರಡಿಗಿಂತ ಕಡಿಮೆ ಇದ್ದರೆ, 65 ರೂ., 10,000 ದಿಂದ 20,000 ಅಡಿ ಜಾಗಕ್ಕೆ 70 ರೂ, 20,000ದಿಂದ 50,000 ಚದುರಡಿಗಿಂತ ಕಡಿಮೆ ಇದ್ದರೆ ಅಡಿಗೆ 80 ರೂ. ನಿಗದಿಪಡಿಸಲಾಗಿದೆ.

### ವೆಂಕಟೇಶ್ ಪ್ರಸಾದ್ ಜತೆ ಪರಮೇಶ್ವರ್ ಅವರನ್ನು ಭೇಟಿ ಮಾಡಿದ ಆರ್‌ಸಿಬಿ ನಿಯೋಗ: ಮುಂದಿಟ್ಟ ಮನವಿ ಏನು?

# ವರದಿಯ ಶಿಫಾರಸುಗಳನ್ನು ಪಾಲನೆ ಮಾಡಬೇಕು

• ಉದಯವಾಹಿನಿ, ಬೆಂಗಳೂರು

ಐಪಿಎಲ್ ಹಾಗೂ ಅಂತಾರಾಷ್ಟ್ರೀಯ ಕ್ರಿಕೆಟ್ ಆರಂಭಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕೆಎಸ್‌ಸಿಎ ಅಧ್ಯಕ್ಷರಾದ ವೆಂಕಟೇಶ್ ಪ್ರಸಾದ್ ಅವರ ಜೊತೆಗೆ ಆರ್‌ಸಿಬಿ ನಿಯೋಗ ಗೃಹ ಸಚಿವ ಡಾ. ಜಿ ಪರಮೇಶ್ವರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಕ್ರಿಕೆಟ್ ಪಂದ್ಯ ನಡೆಸುವ ವಿಚಾರವಾಗಿ ಕೆಎಸ್‌ಸಿಎ, ಆರ್ ಸಿಬಿ ಪದಾಧಿಕಾರಿಗಳ ನಿಯೋಗವು ಸೋಮವಾರ ಸದಾಶಿವನಗರದ ಗೃಹಕಚೇರಿಯಲ್ಲಿ ಪರಮೇಶ್ವರ್ ಅವರನ್ನು ಭೇಟಿ ಮಾಡಿದೆ. ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಅಗತ್ಯ ಸುರಕ್ಷತೆ ಕೈಗೊಳ್ಳುವ ಕುರಿತಂತೆ ನ್ಯಾಯಮೂರ್ತಿ ಮೈಕೆಲ್ ಡಿ.ಕುನ್ಹಾ ಅವರ ವರದಿಯ ಶಿಫಾರಸುಗಳು ಹಾಗೂ ಜಿಬಿಎ ಮತ್ತು ಬೆಂಗಳೂರು ನಗರ ಪೊಲೀಸ್ ಆಯುಕ್ತರ ನೇತೃತ್ವದ ಸಮಿತಿಯ ಶಿಫಾರಸುಗಳನ್ನು ಪೂರ್ಣಗೊಳಿಸುವುದು ಸೇರಿದಂತೆ ವಿವಿಧ ವಿಚಾರಗಳ ಕುರಿತು ಸಮಾಲೋಚನೆ ನಡೆಸಲಾಯಿತು. ಫೆಬ್ರವರಿ 12ರಂದು ಸಭೆ ನಡೆಸಿ, ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಲಾಗುವುದು ಎಂದು ನಿಯೋಗಕ್ಕೆ ಪರಮೇಶ್ವರ್ ಅವರು ತಿಳಿಸಿದ್ದಾರೆ. ನಿಯೋಗದಲ್ಲಿ ಪದಾಧಿಕಾರಿ ವಿನಯ್ ಮೃತ್ಯುಂಜಯ, ಆರ್‌ಸಿಬಿ ರಾಜೇಶ್ ಮೆನನ್ ಹಾಗೂ ಕೆಎಸ್‌ಸಿಎ ಹಾಗೂ ಆರ್‌ಸಿಬಿ ಪದಾಧಿಕಾರಿಗಳು ಇದ್ದರು.

ಭೇಟಿ ಕುರಿತಾಗಿ ಮಾತನಾಡಿದ ಪರಮೇಶ್ವರ್, ವೆಂಕಟೇಶ್ ಪ್ರಸಾದ್, ಆರ್‌ಸಿಬಿ ನಿಯೋಗ ಭೇಟಿ ಮಾಡಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ದುರ್ಘಟನೆ ಹಿನ್ನೆಲೆಯಲ್ಲಿ ಜಸ್ಟೀಸ್ ಮೈಕೆಲ್ ಡಿ.ಕುನ್ಹಾ ಆಯೋಗ ವರದಿ ನೀಡಿದೆ. ಈ ವರದಿ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಮತ್ತು ಆರ್‌ಸಿಬಿ ಗೆ ಮಾಹಿತಿಯನ್ನು ನೀಡಲಾಗಿದೆ ಎಂದು ತಿಳಿಸಿದರು. ವರದಿಯ ಶಿಫಾರಸುಗಳನ್ನು ಪಾಲನೆ ಮಾಡಬೇಕು ಎಂದು ಪತ್ರದ ಮೂಲಕ ತಿಳಿಸಲಾಗಿದೆ. ಈ ನಡುವೆ ಸರ್ಕಾರದ ಹಂತದಲ್ಲಿ ಸಮಿತಿಯನ್ನು ರಚನೆ ಮಾಡಲಾಗಿತ್ತು. ಜಿಬಿಎ ಆಯುಕ್ತ ಮಹೇಶ್ವರ್ ರಾವ್ ಹಾಗೂ ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ನೇತೃತ್ವದ ಸಮಿತಿ ರಚನೆ ಮಾಡಲಾಗಿತ್ತು. ಈ ಸಮಿತಿ ಕ್ರೀಡಾಂಗಣಕ್ಕೆ ಭೇಟಿ ನೀಡಿ ಏನೆಲ್ಲಾ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಪರಿಶೀಲನೆ ನಡೆಸಿದೆ. ಅಲ್ಲದೆ ಕೆಲವೊಂದು ಸಲಹೆ, ಸೂಚನೆ ನೀಡಿದೆ ಎಂದು ಮಾಹಿತಿ ನೀಡಿದರು. ಐಪಿಎಲ್ ಹಾಗೂ ಅಂತರಾಷ್ಟ್ರೀಯ ಕ್ರಿಕೆಟ್ ಆರಂಭವಾಗಲಿದೆ. ಹೀಗಾಗಿ ಶೆಡ್ಯೂಲ್ಡ್ ಮಾಡುತ್ತಿದ್ದಾರೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಾಟ ಆಯೋಜನೆ ಮಾಡಲು ಸರ್ಕಾರದ ಅನುಮತಿ ಸಿಕ್ಕಿದರೆ ಬೆಂಗಳೂರಿನಲ್ಲಿ ಪಂದ್ಯಾಟ ನಡೆಸಲು ಶೆಡ್ಯೂಲ್ ಮಾಡಲಾಗುವುದು ಎಂದು ತಿಳಿಸಿದ್ದಾರೆ ಎಂಬ ಮಾಹಿತಿಯನ್ನು ನೀಡಿದರು.

ಉದಯವಾಹಿನಿ ಚಿತ್ರ



> **ಬೆಂಗಳೂರಿನಲ್ಲಿ ಕ್ರಿಕೆಟ್ ಆಯೋಜನೆ ಆಗಬೇಕು ಎಂಬುವುದು ಯುವಕರ ಬಯಕೆಯಾಗಿದೆ. ಆದರೆ, ಸುರಕ್ಷತೆಯೂ ಬಹಳ ಮುಖ್ಯವಾಗಿದೆ. ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ನಡೆದ ದುರ್ಘಟನೆಯಲ್ಲಿ 11 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಅಂತಹ ಘಟನೆ ಮರುಕಳಿಸಬಾರದು ಎಂಬ ನಿಟ್ಟಿನಲ್ಲಿ ಎಚ್ಚರಿಕೆಯ ಹೆಜ್ಜೆ ಇಡಲಾಗುವುದು.**
> – ಡಾ. ಜಿ ಪರಮೇಶ್ವರ್, ಗೃಹ ಸಚಿವ

### ಬುಧವಾರ ಮಹತ್ವದ ಸಭೆ

**ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಾಟಕ್ಕೆ ಅನುಮತಿ ನೀಡುವ ವಿಚಾರವಾಗಿ ಬುಧವಾರ ಮಹತ್ವದ ಸಭೆ ನಡೆಯಲಿದೆ. ಪಂದ್ಯಾಟಕ್ಕೆ ಅನುಮತಿ ನೀಡಬಹುದೇ ಇಲ್ಲವೇ ಎಂಬ ಕುರಿತಾಗಿ ಈ ಸಭೆಯಲ್ಲಿ ಚರ್ಚೆ ನಡೆಯಲಿದೆ. ಬಳಿಕ ಮುಂದಿನ ತೀರ್ಮಾನವನ್ನು ಕೈಗೊಳ್ಳಲು ನಿರ್ಧಾರ ಮಾಡಲಾಗಿದೆ. ಆಯೋಗದ ಶಿಫಾರಸುಗಳನ್ನು ಎಷ್ಟರ ಮಟ್ಟಿಗೆ ಪಾಲನೆ ಮಾಡಿದ್ದಾರೆ ಎಂಬುವುದ್ನು ಪರಶೀಲನೆ ನಡೆಸಿ ಮುಂದಿನ ಹೆಜ್ಜೆ ಇಡಲಿದ್ದೇವೆ ಎಂದು ಪರಮೇಶ್ವರ್ ತಿಳಿಸಿದರು.**

# ಜಾನಪದ ಕಲೆಗಳನ್ನು ಉಳಿಸಲು ಸರ್ಕಾರದಿಂದ ಸಹಕಾರ: ಸಚಿವ

• ಉದಯವಾಹಿನಿ, ರಾಮನಗರ

ನಾಡಿನ ಜನಪದ, ಕಲೆ, ಸಂಸ್ಕೃತಿಯನ್ನು ಉಳಿಸಲು ಸರ್ಕಾರ ಅಗತ್ಯ ಪ್ರೋತ್ಸಾಹ ನೀಡುತ್ತಿದೆ ಎಂದು ಸಾರಿಗೆ, ಮುಜರಾಯಿ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗರೆಡ್ಡಿ ಅವರು ತಿಳಿಸಿದರು. ರಾಮನಗರದ ಜಾನಪದ ಲೋಕದಲ್ಲಿ ಆಯೋಜಿಸಲಾಗಿದ್ದ ವಿದ್ಯಾರ್ಥಿ ಜಾನಪದ ಲೋಕೋತ್ಸವ ಕಾರ್ಯಕ್ರಮದ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಮಾತನಾಡಿದರು. ಜಾನಪದ ಕಲೆಗಳು ಈಗಾಗಲೇ ಬೆಳೆದಿದೆ ಅದನ್ನು ಉಳಿಸುವ ಕೆಲಸಗಳಾಗಬೇಕು, ಇದನ್ನು ಮನಗಂಡು ಎಚ್. ಎಲ್. ನಾಗೇಗೌಡರು ಜಾನಪದ ಲೋಕವನ್ನು ಕಟ್ಟಿದ್ದಾರೆ. ಇದನ್ನು ಉಳಿಸಿ, ಬೆಳೆಸುವಂತಹದ್ದು ಎಲ್ಲರ ಜವಾಬ್ದಾರಿಯಾಗಿದೆ ಎಂದರು. ಪ್ರತಿ ವರ್ಷ ಬಜೆಟ್ ಮಂಡಿಸುವ ಮುನ್ನ ಎಲ್ಲಾ ಸಚಿವರುಗಳನ್ನು ರಾಜ್ಯದ ಮುಖ್ಯಮಂತ್ರಿಗಳು ಕರೆದು ಖರ್ಚು ವೆಚ್ಚಗಳ ಬಗ್ಗೆ ಅಗತ್ಯವಿರುವ ಅನುದಾನಗಳ ಬಗ್ಗೆ ಆಲಿಸುತ್ತಾರೆ. ಜಾನಪದ ಲೋಕದವರು ಈ ರೀತಿಯ ಕಾರ್ಯಕ್ರಮಗಳಿಗೆ ಅನುದಾನ ಬೇಕಾಗಿದೆ ಎಂದು ನನ್ನ ಗಮನಕ್ಕೆ ತಂದಿದ್ದಾರೆ. ಈ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗುವುದು. ಜನಪದ ಎಂಬುದು ಅತ್ಯಂತ ಗ್ರಾಮೀಣ ಕಲೆಯಾಗಿದ್ದು. ಕಾಡಲ್ಲಿ ವಾಸಿಸುವ ಜನರ ಕಲೆ, ಸೋಲಿಗರ ಕಲೆ ಸೇರಿದಂತೆ ಇತರೆ ಕಲೆಗಳನ್ನು ಉಳಿಸುವಂತಹ ಕೆಲಸಗಳಾಗಬೇಕಾಗಿದೆ, ಇಂತಹ ಕಲೆಗಳ ಕುರಿತು ವಿದ್ಯಾರ್ಥಿಗಳಿಗೆ ತರಬೇತಿ ನೀಡುವಂತೆ ಜಾನಪದ ಪರಿಷತ್ತಿನ ಅಧ್ಯಕ್ಷರಿಗೆ ಸಲಹೆ ನೀಡಿದರು. ಜನಪದ ಲೋಕವು ಇನ್ನು ಹೆಚ್ಚಾಗಿ ಬೆಳೆಯಬೇಕು. ಜಾನಪದ ಕಲೆಗಳು ಉಳಿಯಲಿ ಹಾಗೂ ಪ್ರಶಸ್ತಿಗೆ ಆಯ್ಕೆಯಾಗಿರುವ ಎಲ್ಲಾ ಕಲಾವಿದರುಗಳಿಗೆ ಅಭಿನಂದನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜಾನಪದ ಕ್ಷೇತ್ರದಲ್ಲಿ ಜೀವಮಾನ ಸಾಧನೆ ಮಾಡಿದ ಕಲಾವಿದರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಹಿ. ಚಿ. ಬೋರಲಿಂಗಯ್ಯ, ಕರ್ನಾಟಕ ಜಾನಪದ ಪರಿಷತ್ತಿನ ಆಡಳಿತ ಮಂಡಳಿ ಸದಸ್ಯರಾದ ವೇಮಗಲ್ ನಾರಾಯಣಸ್ವಾಮಿ, ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

# ಜಂತುಹುಳ ರಹಿತ ಮಕ್ಕಳು, ಆರೋಗ್ಯವಂತ ಮಕ್ಕಳು

## ಜಂತು ಹುಳು ರಹಿತ ಮಾತ್ರೆಗಳಿಂದ ಅಪೌಷ್ಠಿಕತೆ, ರಕ್ತ ಹೀನತೆಯನ್ನು ತಡೆಗಟ್ಟಬಹುದು

• ಉದಯವಾಹಿನಿ, ರಾಮನಗರ



ಉದಯವಾಹಿನಿ ಚಿತ್ರ

ಜಂತು ಹುಳು ರಹಿತ ಮಾತ್ರೆಗಳಿಂದ ಅಪೌಷ್ಠಿಕತೆ ಮತ್ತು ರಕ್ತ ಹೀನತೆಯನ್ನು ತಡೆಗಟ್ಟಬಹುದು ಹಾಗೂ ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗುವ ಮಾತ್ರೆಗಳನ್ನು ತಪ್ಪದೇ ಜಿಲ್ಲೆಯಾದ್ಯಂತ 01 ರಿಂದ 19 ವರ್ಷದೊಳಗಿನ ಮಕ್ಕಳಿಗೆ ನೀಡುವ ಮೂಲಕ ಜಂತು ಹುಳು ರಹಿತ ಮಕ್ಕಳು, ಆರೋಗ್ಯವಂತ ಮಕ್ಕಳನ್ನಾಗಿಸಲು ಕ್ರಮ ಕೈಗೊಳ್ಳುವಂತೆ ಬೆಂಗಳೂರು ದಕ್ಷಿಣ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಅನ್ಮೋಲ್ ಜೈನ್ ಅವರು ತಿಳಿಸಿದರು.

ಸೋಮವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳ ಕಚೇರಿ, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ, ವಿವಿಧ ಅಭಿವೃದ್ಧಿ ಇಲಾಖೆಗಳು ಹಾಗೂ ಸ್ವಯಂ ಸೇವ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನದ ಸಮನ್ವಯ ಸಮಿತಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅಂಗನವಾಡಿ ಕೇಂದ್ರ ಮತ್ತು ಶಾಲಾಕೇಂದ್ರಗಳಲ್ಲಿ

### ಆರೋಗ್ಯವಂತ ಮಕ್ಕಳನ್ನಾಗಿ ಮಾಡಲು ಎಲ್ಲರೂ ಸಹಕರಿಸಿ

**ಫೆ.10ರಂದು ಮಾತ್ರೆಯಿಂದ ವಂಚಿತರಾದ ಮಕ್ಕಳಿಗೆ ಮಾಪ್ ಅಫ್ ದಿನ ಫೆ. 16 ರಂದು ಮಾತ್ರೆ ವಿತರಿಸಲಾಗುವುದು. ಆದ್ದರಿಂದ ಜಂತುಹುಳ ರಹಿತ ಮಕ್ಕಳು – ಆರೋಗ್ಯವಂತ ಮಕ್ಕಳನ್ನಾಗಿ ಮಾಡಲು ಎಲ್ಲರೂ ಸಹಕರಿಸಬೇಕೆಂದು ಸಲಹೆ ನೀಡಿದರು.**

ಶಿಕ್ಷಕರ ನೇರ ನಿಗಾವಣೆಯಲ್ಲಿ ಮಾತ್ರೆಗಳನ್ನು ನೀಡಬೇಕು ಎಂದು ತಿಳಿಸಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಿರಂಜನ್ ಬಿ.ಎಸ್. ಅವರು ಮಾತನಾಡಿ, ಫೆ.10 ಅನ್ನು ರಾಷ್ಟ್ರೀಯ ಜಂತು ಹುಳು ನಿವಾರಣಾ ದಿನವನ್ನಾಗಿ ಜಿಲ್ಲೆಯಾದ್ಯಂತ ಆಚರಿಸಲಾಗುತ್ತಿದ್ದು, ಇದರ ಅಂಗವಾಗಿ 1 ರಿಂದ 19 ವರ್ಷದ ಎಲ್ಲಾ ಮಕ್ಕಳಿಗೂ ಜಂತುಹುಳು ನಾಶಕ ಆಲ್ ಬೆಂಡಜೋಲ್ ಮಾತ್ರೆಗಳನ್ನು ವಿತರಿಸಲಾಗುತ್ತಿದ್ದು, ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಜಂತುಹುಳು ಭಾದೆಯಿಂದ ಅಪೌಷ್ಟಿಕತೆ, ರಕ್ತ ಹೀನತೆ, ಮಾನಸಿಕ ಮತ್ತು ದೈಹಿಕ ಬೆಳವಣಿಗೆಯಲ್ಲಿ ಕುಂಠಿತವಾಗುವುದು, ಅನಾರೋಗ್ಯದಿಂದ ಮಕ್ಕಳು ಬಳಲುತ್ತಾರೆ, ಇದನ್ನು ನಿವಾರಣೆ ಮಾಡಲು ಇಲಾಖಾ ವತಿಯಿಂದ ಜಂತುಹುಳು ನಾಶಕ ಮಾತ್ರೆಯನ್ನು ವಿತರಿಸಲಾಗುತ್ತಿದೆ ಎಂದರು.

ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಆರೋಗ್ಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರಿಂದ ಮನೆಗಳಿಗೆ ಭೇಟಿನೀಡಿ ಮಾತ್ರೆ ನೀಡಲಾಗುವುದು. ಇದರ ಪ್ರಯೋಜನವನ್ನು ಪಡೆದುಕೊಳ್ಳುವಂತೆ ಸಲಹೆ ನೀಡಿದರು. ಈ ಸಂದರ್ಭದಲ್ಲಿ ರಾಷ್ಟ್ರೀಯ ಜಂತುಹುಳು ನಿವಾರಣ ದಿನದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಸಭೆಯಲ್ಲಿ ಡಿ.ಎಲ್.ಒ ಡಾ. ಕುಮಾರ್, ಡಿ.ಟಿ.ಒ ಡಾ. ಶಶಿಕಿರಣ್ ಎಂ.ಟಿ, ಡಿ.ಎಸ್.ಒ ಡಾ. ಕಿರಣ್‌ಶಂಕರ್. ಎಸ್, ಡಿ.ಎಂ.ಒ ಡಾ. ಪದ್ಮಾವತಿ ಎಂ, ತಾಲ್ಲೂಕು ಆರೋಗ್ಯಾಧಿಕಾರಿಗಳು, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಅರ್ಪಿತ, ಮಹಿಳಾ, ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು, ಶಾಲಾ, ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಹಾಜರಿದ್ದರು.

**ರಾಷ್ಟ್ರೀಯ ಜಂತು ಹುಳು ನಿವಾರಣಾ ದಿನ**

**ಚನ್ನಪಟ್ಟಣ 50,123, ಕನಕಪುರ 68,587, ಮಾಗಡಿ 39,843, ರಾಮನಗರ 86,959 ರಂತೆ ಒಟ್ಟು ಜಿಲ್ಲೆಯಲ್ಲಿ 1 ರಿಂದ 19 ವರ್ಷದ 2,45,512 ಮಕ್ಕಳಿದ್ದು, ಇವರಿಗೆ 1,585 ಅಂಗನವಾಡಿ ಕೇಂದ್ರಗಳು, 1735 ಶಾಲಾ – ಕಾಲೇಜುಗಳಲ್ಲಿ ಜಂತುಹುಳು ನಿವಾರಣಾ ಮಾತ್ರೆ ನೀಡಲಾಗುತ್ತಿದೆ. 1 ರಿಂದ 2 ವರ್ಷದ ಮಕ್ಕಳಿಗೆ ಅರ್ಧ ಆಲ್‌ಬೆಂಡಜೋಲ್ (200 ಮಿ.ಗ್ರಾ) ಮಾತ್ರೆ, 2 ರಿಂದ 19 ವರ್ಷದ ಮಕ್ಕಳಿಗೆ ಆಲ್‌ಬೆಂಡಜೋಲ್ (400 ಮಿ.ಗ್ರಾ) ಮಾತ್ರೆ ನೀಡಲಾಗುವುದು.**

**–ಡಾ. ರಾಜು ವಿ., ಜಿಲ್ಲಾ ಆರ್‌ಸಿಎಚ್ ಅಧಿಕಾರಿ**

## ಮಿನಿ ನ್ಯೂಸ್

### ಕಳ್ಳತನಕ್ಕೆ ಬಂದವ ಮನೆಯಲ್ಲಿಯೇ ಮಲಗಿ ಪೊಲೀಸರ ಕೈಗೆ ಸಿಕ್ಕಿಬಿದ್ದ

• ಉದಯವಾಹಿನಿ, ಗೌರಿಬಿದನೂರು

ಕಳ್ಳತನಕ್ಕೆ ಬಂದ ಕಳ್ಳ ಮದ್ಯದ ಅಮಲಿನಲ್ಲಿ ಮನೆಯೊಳಗೆ ಮಲಗಿ ಪೊಲೀಸರ ಕೈಗೆ ಸಿಕ್ಕಿಬಿದ್ದ ಪ್ರಸಂಗ ಇಲ್ಲಿ ನಡೆದಿದೆ. ನಗರ ಹೊರವಲಯದ ಹಳೇ ಆರ್ ಟಿಒ ಕಚೇರಿ ಬಳಿಯ ಪ್ರೇಮನಾಥ್ ಅವರ ಮನೆಗೆ ಬಣ್ಣ ಬಳಿಯುವ ಕೆಲಸಕ್ಕೆ ದೇವರಾಜು (40) ಆಗಾಗ್ಗೆ ಬರುತ್ತಿದ್ದ. ಪ್ರೇಮನಾಥ್ ಕೆಲಸದ ನಿಮಿತ್ತ ಹೈದರಾಬಾದ್‌ಗೆ ಹೋಗಿದ್ದರು. ಈ ವಿಚಾರ ದೇವರಾಜ್‌ಗೆ ತಿಳಿದಿತ್ತು. ಮಧ್ಯರಾತ್ರಿ ದೇವರಾಜ್ ಮತ್ತು ಆತನ ಸ್ನೇಹಿತ ಪ್ರೇಮನಾಥ್ ಮನೆಯಲ್ಲಿ ಕಳ್ಳತನಕ್ಕೆ ಬಂದಿದ್ದಾರೆ. ಬೈಕ್ ನಂಬರ್ ಪ್ಲೇಟ್‌ಗೆ ಕಪ್ಪು ಕವರ್ ಸುತ್ತಿ ಸಮೀಪದ ಲೇಔಟ್‌ನಲ್ಲಿ ನಿಲ್ಲಿಸಿದ್ದಾರೆ.

ಪ್ರೇಮನಾಥ್ ಮನೆ ಚಾವಣಿ ತಗಡು ಕತ್ತರಿಸಿ ಒಳ ನುಗ್ಗಿದ್ದಾರೆ. ಬೀರುವಿನಲ್ಲಿದ್ದ 45 ಸಾವಿರ ಮತ್ತು ಚಿನ್ನದ ಆಭರಣ ದೋಚಿದ್ದಾರೆ. ದೇವರಾಜ್ ಜೊತೆ ಬಂದಿದ್ದ ಆತನ ಸ್ನೇಹಿತ ಹಣ ಮತ್ತು ಆಭರಣದೊಂದಿಗೆ ಸ್ಥಳದಿಂದ ಕಾಲ್ಕಿತ್ತಿದ್ದಾನೆ. ಹೆಚ್ಚು ಮದ್ಯ ಸೇವಿಸಿದ್ದ ದೇವರಾಜು ಮನೆಯಿಂದ ಹೊರಗೆ ಹೋಗಲಾಗದೆ ಸೋಫಾ ಮೇಲೆಯೇ ಮಲಗಿದ್ದಾನೆ. ರಾತ್ರಿಯೇ ಇದನ್ನು ಗಮನಿಸಿದ ನೆರೆ ಮನೆಯವರು ಕಳ್ಳತನಕ್ಕೆ ಕತ್ತರಿಸಿದ್ದ ತಗಡಿಗೆ ಸಿಮೆಂಟ್ ಇಟ್ಟಿಗೆಗಳನ್ನು ಅಡ್ಡವಾಗಿ ಇಟ್ಟು ಕಾವಲು ಕಾದಿದ್ದಾರೆ. ಬೆಳಿಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ದೇವರಾಜು ಜೇಬಿನಲ್ಲಿ 5 ಸಾವಿರ ಸಿಕ್ಕಿದೆ, ಉಳಿದ ಹಣವನ್ನು ಸ್ನೇಹಿತ ತೆಗೆದುಕೊಂಡು ಹೋಗಿದ್ದಾನೆ. 45 ಸಾವಿರ ಮತ್ತು ಬಂಗಾರದ ಆಭರಣಗಳು ಕಳ್ಳತನವಾಗಿದೆ ಎಂದು ಮನೆ ಮಾಲೀಕ ಪ್ರೇಮನಾಥ್ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ.

### ದೇಗುಲ ಧರ್ಮ, ಸಂಸ್ಕೃತಿ ಪ್ರತೀಕ: ಮಲ್ಲಿಕಾರ್ಜುನ

• ಉದಯವಾಹಿನಿ, ಕಿಕ್ಕೇರಿ

ಧರ್ಮ, ಸಂಸ್ಕೃತಿ ಪ್ರತೀಕವಾದ ದೇಗುಲಗಳು ಗ್ರಾಮದ ನೆಮ್ಮದಿಗೆ ಸಹಕಾರಿಯಾಗಿವೆ ಎಂದು ಆರ್‌ಟಿಒ ಅಧಿಕಾರಿಗಳ ಸಂಘದ ರಾಜ್ಯ ಅಧ್ಯಕ್ಷ ಮಲ್ಲಿಕಾರ್ಜುನ ಹೇಳಿದರು. ಹೋಬಳಿಯ ಶಟ್ಟಹಳ್ಳಿ ಗ್ರಾಮದಲ್ಲಿ ಇತ್ತೀಚೆಗೆ ಜರುಗಿದ ನೂತನ ಹುರುಚಲಮ್ಮ ದೇಗುಲ ಉದ್ಘಾಟನೆ ಸಮಾರಂಭದಲ್ಲಿ ದೇಗುಲ ಅಭಿವೃದ್ಧಿಗಾಗಿ 50 ಸಾವಿರ ದೇಣಿಗೆ ನೀಡಿ ಅವರು ಮಾತನಾಡಿದರು. ಗ್ರಾಮಗಳಲ್ಲಿ ಸಕರಾತ್ಮಕ ಶಕ್ತಿ ವೃದ್ಧಿಸಿ, ಶಾಂತಿ, ನೆಮ್ಮದಿ ಲಭಿಸಲು ದೇಗುಲಗಳ ಶಕ್ತಿ ಕಾರಣವಿದೆ. ಅಧ್ಯಾತ್ಮ, ಧಾರ್ಮಿಕ ಭಾವನೆಯಿಂದ ತಾಮಸಗುಣ ನಿಗ್ರಹಿಸಲಿದೆ. ದಿನದ ಒಂದಿಷ್ಟು ವೇಳೆ ಭಗವಂತನ ಆರಾಧನೆಯಿಂದ ಗ್ರಾಮ, ಕುಟುಂಬಗಳಿಗೆ ಒಳಿತಾಗಲಿದೆ ಎಂದರು.

ಬೆಡದಹಳ್ಳಿ ಪಂಚಭೂತೇಶ್ವರ ಪೀಠದ ಪೀಠಾಧ್ಯಕ್ಷ ರುದ್ರಮುನಿ ಸ್ವಾಮೀಜಿ ಆಶೀರ್ವಚನ ನೀಡಿ, ದೇಗುಲಗಳು ಲೋಕಕಲ್ಯಾಣಕ್ಕೆ ಶಕ್ತಿ ಪೀಠವಾಗಿವೆ. ಗ್ರಾಮಗಳಲ್ಲಿ ಒಗ್ಗಟ್ಟು, ಏಕತೆ ಮೂಡಲು ದೇಗುಲಗಳಂತಹ ಶ್ರದ್ಧಾಕೇಂದ್ರ ಅವಶ್ಯವಿದೆ. ನಮ್ಮ ಬದುಕು ನಡೆ ನುಡಿಯನ್ನು ತಿದ್ದಿ ತೀಡಲು ಸಂಸ್ಕಾರ ಕಲಿಸಲು ಭಗವಂತನ ಆರಾಧನೆ ಕಾರಣವಾಗಿದೆ ಎಂದು ತಿಳಿಸಿದರು.

# ಮೈಸೂರಲ್ಲಿ ನಿಮ್ಹಾನ್ಸ್ ಆಸ್ಪತ್ರೆ ಕಾಮಗಾರಿಗೆ ಶೀಘ್ರ ಚಾಲನೆ

## ಸದಾ ರೋಗಿಗಳಿಂದಲೇ ತುಂಬಿ ತುಳುಕುವ ಬೆಂಗಳೂರಿನ ನರರೋಗದ ಆಸ್ಪತ್ರೆ ಮೇಲೆ ಹೆಚ್ಚಿನ ಒತ್ತಡ

• ಉದಯವಾಹಿನಿ, ಮೈಸೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿನಿಧಿಸುವ ವರುಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಗುಡುಮಾದನಹಳ್ಳಿ ಬಳಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಆರಂಭಿಸಲು ಜಿಲ್ಲಾಡಳಿತ 20 ಎಕರೆ ಜಾಗ ಗುರುತಿಸಿದೆ. ಟೆಂಡರ್ ಪ್ರಕ್ರಿಯೆ ಮುಕ್ತಾಯ ಗೊಂಡಿದ್ದು, ಶೀಘ್ರದಲ್ಲೇ ಕಾಮಗಾರಿಗೆ ಚಾಲನೆ ಸಿಗಲಿದೆ. ರಾಜಧಾನಿ ಬೆಂಗಳೂರಿನಲ್ಲಿ ಕರ್ನಾಟಕದ ಏಕೈಕ ಸರಕಾರಿ ಸ್ವಾಮ್ಯದ ನಿಮ್ಹಾನ್ಸ್ ಸಂಸ್ಥೆ ಇದೆ. ಇಲ್ಲಿಗೆ ಕೇವಲ ರಾಜ್ಯವಷ್ಟೇ ಅಲ್ಲದೆ ಹೊರ ರಾಜ್ಯಗಳಿಂದಲೂ ರೋಗಿಗಳು ಚಿಕಿತ್ಸೆಗೆ ಬರುತ್ತಾರೆ. ಸದಾ ರೋಗಿಗಳಿಂದಲೇ ತುಂಬಿ ತುಳುಕುವ ನರರೋಗದ ಆಸ್ಪತ್ರೆ ಮೇಲೆ ಹೆಚ್ಚಿನ ಒತ್ತಡವಿದೆ. ಹೊರ ಜಿಲ್ಲೆಯವರು ಆಪ್ತ ಸಮಾಲೋಚನೆಗೂ ತಿಂಗಳುಗಟ್ಟಲೆ ಕಾಯಬೇಕು. ತುರ್ತು ಚಿಕಿತ್ಸೆ ಬಿಟ್ಟರೆ ಸಾಮಾನ್ಯ ತಪಾಸಣೆಗೂ ವಾರಗಟ್ಟಲೆ ಅಲೆಯಬೇಕು. ಹೀಗಾಗಿ ಮೈಸೂರಿಗೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ ಬೇಕೆಂಬ ಕೂಗು ದಶಕಗಳಿಂದಲೂ ಕೇಳಿಬರುತ್ತಲೇ ಇತ್ತು. ಹಾಗಾಗಿ ಕಳೆದ ಮಾರ್ಚ್ ಬಜೆಟ್‌ನಲ್ಲಿ ಸರಕಾರ 100 ಕೋಟಿ ರೂ. ವೆಚ್ಚದಲ್ಲಿ ಮೈಸೂರು ವೈದ್ಯಕೀಯ ಕಾಲೇಜು ವ್ಯಾಪ್ತಿಯಲ್ಲಿ ನಿಮ್ಹಾನ್ಸ್ ಸ್ಥಾಪನೆಗೆ ಅಸ್ತು ಎಂದಿತ್ತು.




- **ಕಳೆದ ಮಾರ್ಚ್ ಬಜೆಟ್‌ನಲ್ಲಿ ಸರಕಾರ 100 ಕೋಟಿ ರೂ. ವೆಚ್ಚದಲ್ಲಿ ಮೈಸೂರು ವೈದ್ಯಕೀಯ ಕಾಲೇಜು ವ್ಯಾಪ್ತಿಯಲ್ಲಿ ನಿಮ್ಹಾನ್ಸ್ ಸ್ಥಾಪನೆಗೆ ಅಸ್ತು ಎಂದಿತ್ತು.**
- **ದೊಡ್ಡ ಅಪಘಾತವಾದಾಗ, ಯಾವುದೇ ವ್ಯಕ್ತಿಗೆ ಸ್ಟ್ರೋಕ್ (ಲಕ್ವ) ಹೊಡೆದಾಗ ತಕ್ಷಣ ಚಿಕಿತ್ಸೆ ಲಭಿಸಲಿದೆ. ತಲೆಗೆ ಸಂಬಂಧಪಟ್ಟ ಸಮಗ್ರ ಚಿಕಿತ್ಸಾ ವಿಧಾನವನ್ನು ಇಲ್ಲಿ ಕಾಣಬಹುದು.**

### ತುರ್ತು ಚಿಕಿತ್ಸೆಗಾಗಿ ಅನುಕೂಲ

**ಕಳೆದ ವರ್ಷದ ಬಜೆಟ್‌ನಲ್ಲಿ ಘೋಷಣೆಯಾದ ನಿಮ್ಹಾನ್ಸ್ ಆಸ್ಪತ್ರೆಗೆ ಈಗಾಗಲೇ ಜಾಗ ಗುರುತಿಸಿದ್ದು ಶೀಘ್ರ ಕಾರ್ಯಾರಂಭ ಆಗಲಿದೆ. 100 ಕೋಟಿ ವೆಚ್ಚದಲ್ಲಿ ನಿರ್ಮಾಣ ಆಗಲಿರುವ ಆಸ್ಪತ್ರೆಯಿಂದ ಅಪಘಾತ ಸಂದರ್ಭದಲ್ಲಿ ತಲೆಗೆ ಸಂಬಂಧಿಸಿದ ತುರ್ತು ಚಿಕಿತ್ಸೆಗಾಗಿ ಅನುಕೂಲ ಆಗಲಿದೆ. ಇದರಿಂದ ಬೆಂಗಳೂರು ನಿಮ್ಹಾನ್ಸ್ ಆಸ್ಪತ್ರೆ ಮೇಲಿನ ಒತ್ತಡವೂ ಕಡಿಮೆ ಆಗಲಿದೆ.**

ಬಜೆಟ್‌ನಲ್ಲಿ ಘೋಷಣೆಯಾದ 11 ತಿಂಗಳ ಬಳಿಕ ನರರೋಗ ಆಸ್ಪತ್ರೆ ಸ್ಥಾಪನೆಗೆ ಜಿಲ್ಲಾಡಳಿತ ಸ್ಥಳ ನಿಗದಿ ಮಾಡಿ ಮೈಸೂರು ಮೆಡಿಕಲ್ ಕಾಲೇಜಿಗೆ ಹಸ್ತಾಂತರಿಸಿದೆ. ಅಷ್ಟೇ ಅಲ್ಲದೆ, ಟೆಂಡರ್ ಪ್ರಕ್ರಿಯೆ ಕೂಡ ಪೂರ್ಣಗೊಂಡಿದ್ದು, ಕಾರ್ಯಾದೇಶ ನೀಡುವುದು ಬಾಕಿ ಇದೆ. ಅದಾದ ಬಳಿಕ ಶಂಕುಸ್ಥಾಪನೆ ನೆರವೇರಲಿದೆ. ವೈದ್ಯಕೀಯ ಶಿಕ್ಷಣ ಇಲಾಖೆಯ ಅನುದಾನದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಯಿಂದ ಅನುಷ್ಠಾನ ಗೊಳಿಸಲಾಗುತ್ತಿದೆ.

**ಏನಿದು ಯೋಜನೆ?:** ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ ಮೇಲಿನ ಒತ್ತಡ ತಪ್ಪಿಸಲು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ನಿಮಾನ್ಸ್ ಆರಂಭಿಸಲು ಸರಕಾರ ಮುಂದಾಗಿದೆ. ಅದರ ಮೊದಲ ಹಂತವಾಗಿ ಇದೀಗ ಮೈಸೂರು ಮತ್ತು ಕಲಬುರಗಿಯಲ್ಲಿ ನಿಮ್ಹಾನ್ಸ್ ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದರಿಂದ ದೊಡ್ಡ ಅಪಘಾತವಾದಾಗ, ಯಾವುದೇ ವ್ಯಕ್ತಿಗೆ ಸ್ಟ್ರೋಕ್ (ಲಕ್ವ) ಹೊಡೆದಾಗ ತಕ್ಷಣ ಚಿಕಿತ್ಸೆ ಲಭಿಸಲಿದೆ.

ತಲೆಗೆ ಸಂಬಂಧಪಟ್ಟ ಸಮಗ್ರ ಚಿಕಿತ್ಸಾ ವಿಧಾನವನ್ನು ಇಲ್ಲಿ ಕಾಣಬಹುದು. ನಿಮ್ಹಾನ್ಸ್‌ನಲ್ಲಿ ನರರೋಗಶಾಸ್ತ್ರ ನರವಿಜ್ಞಾನ, ನರಶಸ್ತ್ರ ಚಿಕಿತ್ಸೆ, ನ್ಯೂರೋ ಸರ್ಜರಿ, ಎಪಿಡೆಮಿ ಯಾಲಜಿ , ಇತರೆ ಪ್ರಮುಖ ಶಸ್ತ್ರಚಿಕಿತ್ಸೆಗಳು ಸಿಗುತ್ತದೆ. ಅತ್ಯುತ್ತಮ ಔಷಧೋಪಚಾರ, ಸಂಶೋಧನೆ ಹಾಗೂ ತರಬೇತಿ ನೀಡಲು ಸಹಕಾರಿಯಾಗುತ್ತದೆ. ಆಧುನಿಕ, ಪಾರಂಪರಿಕ ಪದ್ಧತಿಯಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಮಕ್ಕಳು ಮತ್ತು ಹದಿಹರೆಯದವರಿಗೆ ಮನೋ ವೈದ್ಯಕೀಯ ಸೇವೆಯೂ ಇಲ್ಲಿ ಲಭಿಸಲಿದೆ. ಮೈಸೂರಿನಲ್ಲಿ ನರರೋಗ ಆಸ್ಪತ್ರೆ ಸ್ಥಾಪನೆಯಾದರೆ ಮಂಡ್ಯ, ಚಾಮರಾಜ ನಗರ, ಹಾಸನ ಹಾಗೂ ಕೊಡಗು ಜಿಲ್ಲೆಗಳ ಜನರಿಗೂ ಅನುಕೂಲವಾಗಲಿದೆ.

# ಮೃತ ವ್ಯಕ್ತಿ ಹೆಸರಿನಲ್ಲಿ ದಾಖಲೆ ಸೃಷ್ಟಿಸಿ 2 ಎಕರೆ ಜಮೀನು ಮಾರಾಟ

• ಉದಯವಾಹಿನಿ, ಶಿಡ್ಲಘಟ್ಟ

ಮೃತಪಟ್ಟ ವ್ಯಕ್ತಿಯ ಹೆಸರು ಮತ್ತು ವಿಳಾಸವಿರುವ ಆಧಾರ್ ಕಾರ್ಡ್ ಹಾಗೂ ಇನ್ನಿತರೆ ದಾಖಲೆ ಸೃಷ್ಟಿಸಿ ತಾನೇ ಆ ವ್ಯಕ್ತಿ ಎಂದು ನಂಬಿಸಿ ಮೃತ ವ್ಯಕ್ತಿಯ ಹೆಸರಲ್ಲಿದ್ದ ಎರಡು ಎಕರೆ ಜಮೀನನ್ನು ಅಕ್ರಮವಾಗಿ ಮಾರಾಟ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ. ತಾಲ್ಲೂಕಿನ ಬಸವಾಪಟ್ಟಣ ಗ್ರಾಮದ ಚನ್ನಕೇಶವ, ತಾನು ನಾರಾಯಣಪ್ಪ ಎಂದು ಆಧಾರ್ ಕಾರ್ಡ್ ಸೇರಿದಂತೆ ಇತರೆ ದಾಖಲೆಗಳನ್ನು ಸೃಷ್ಟಿಸಿ ಅದೇ ಗ್ರಾಮದ 26 ವರ್ಷಗಳ ಹಿಂದೆಯೇ ಮೃತಪಟ್ಟಿರುವ ನಾರಾಯಣಪ್ಪ ಎಂಬುವವರ ಹೆಸರಲ್ಲಿದ್ದ 2 ಎಕರೆ ಜಮೀನನ್ನು ಅಕ್ರಮವಾಗಿ ಮಾರಾಟ ಮಾಡಿದ್ದಾನೆ. ಚಿಂತಾಮಣಿ ತಾಲ್ಲೂಕು ಉಪ ನೋಂದಣಿ ಕಚೇರಿಯಲ್ಲಿ ಈ ಅಕ್ರಮ ನೋಂದಣಿ ನಡೆದಿದೆ. ಅಕ್ರಮವಾಗಿ ದಾಖಲೆ ಸೃಷ್ಟಿಸಿ ಜಮೀನು ಮಾರಾಟ ಮಾಡಿದ ಚನ್ನಕೇಶವ, ಆತನ ಪತ್ನಿ, ಪುತ್ರಿ, ಪುತ್ರ ಮತ್ತು ನೋಂದಣಿ ಸಮಯದಲ್ಲಿ ಸಾಕ್ಷಿಗಳಾಗಿ ಸಹಿ ಹಾಕಿದ ಇಬ್ಬರ ಮೇಲೆ ಚಿಂತಾಮಣಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೆಐಎಡಿಬಿ ವ್ಯಾಪ್ತಿಗೆ ಒಳಪಡುವ ಈ ಜಮೀನು ಮಾರಾಟ ಮಾಡುವುದಾಗಲಿ, ಕೊಳ್ಳುವುದಾಗಲಿ ಮಾಡಬಾರದೆಂಬ ಸೂಚನೆಯಿದ್ದರೂ ಅಕ್ರಮವಾಗಿ ಈ ಜಮೀನಿನ ಮಾರಾಟ ನಡೆದಿದೆ.


ಉದಯವಾಹಿನಿ ಚಿತ್ರ

**ನಡೆದಿದ್ದೇನು:** ಬಸವಾಪಟ್ಟಣ ಗ್ರಾಮದ ನಾರಾಯಣಪ್ಪ 26 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ಅವರ ಹೆಸರಲ್ಲಿ 2 ಎಕರೆ ಜಮೀನು ಇತ್ತು. ಇದೇ ಗ್ರಾಮದ ಚನ್ನಕೇಶವ ನಾರಾಯಣಪ್ಪ ಎಂಬುದಾಗಿ ಆಧಾರ್ ಕಾರ್ಡ್ ಮತ್ತಿತರೆ ದಾಖಲೆಗಳನ್ನು ಸೃಷ್ಟಿಸಿ, ಬೆಂಗಳೂರಿನ ನಿವಾಸಿಯೊಬ್ಬರಿಗೆ ಮಾರಾಟ ಮಾಡಿದ್ದಾನೆ. ಅಕ್ರಮ ಜಮೀನು ಮಾರಾಟದ ಕುರಿತು ನಾರಾಯಣಪ್ಪ ಅವರ ಕುಟುಂಬದವರಿಗೆ ವಿಷಯ ತಿಳಿದು ಬಂದಿದ್ದು, ಕೂಡಲೇ ಚನ್ನಕೇಶವ ಅವರ ಮೂಲ ದಾಖಲೆಗಳನ್ನು ಸಂಗ್ರಹಿಸಿ ನೋಂದಣಿ ಕಚೇರಿ, ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

# 9.25 ಕೋಟಿ ವೆಚ್ಚದಲ್ಲಿ ಸಿಂಥೆಟಿಕ್ ಟ್ರ್ಯಾಕ್

• ಉದಯವಾಹಿನಿ, ಚಿಂತಾಮಣಿ

ನಗರದ ಝಾನ್ಸಿ ರಾಣಿ ಲಕ್ಷ್ಮಿಬಾಯಿ ಕ್ರೀಡಾಂಗಣದಲ್ಲಿ 9.25 ಕೋಟಿ ರೂ ವೆಚ್ಚದಲ್ಲಿ ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣ, ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಕ್ರೀಡಾಪಟುಗಳು ವಾಯುವಿಹಾರಿಗಳಿಗೆ ಕ್ರೀಡಾಂಗಣ ಪ್ರವೇಶವನ್ನು ನಿಷೇಧಿಸಲಾಗಿದೆ.



ಕ್ಷೇತ್ರದ ಶಾಸಕ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಸಿ. ಸುಧಾಕರ್ ಅವರ ದೂರದೃಷ್ಟಿ, ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಇದು ಒಂದಾಗಿದ್ದು, ಅಂತರರಾಷ್ಟ್ರೀಯ ಮಟ್ಟದ ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣ ಕಾಮಗಾರಿ ಆರಂಭಿಸಲಾಗಿದೆ. ಈ ಯೋಜನೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ 9 ಕೋಟಿ, ಕ್ರೀಡಾಂಗಣ ಸಮಿತಿಯಿಂದ 25 ಲಕ್ಷ ಭರಿಸಲಿವೆ. ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣ, ಬಾಸ್ಕೆಟ್ ಬಾಲ್, ಹ್ಯಾಂಡ್ ಬಾಲ್, ಸ್ಕೈಟಿಂಗ್ ಅಂಕಣ, ವೀಕ್ಷಕರಿಗೆ ಕುಳಿತುಕೊಳ್ಳಲು ಸುತ್ತಲೂ ಆಸನಗಳ ವ್ಯವಸ್ಥೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಝಾನ್ಸಿ ಮೈದಾನದಲ್ಲಿ ನಡೆಯುತ್ತಿವೆ. ಅಂತರರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸುವ ತಾಲ್ಲೂಕಿನ ಕ್ರೀಡಾಪಟುಗಳ ಸಿಂಥೆಟಿಕ್ ಟ್ರ್ಯಾಕ್ ಇಲ್ಲ ಎಂಬ ಕೊರಗು ನಿವಾರಣೆ ಆಗಲಿದೆ. ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ಸರಿಸಮವಾಗಿ ತಾಲ್ಲೂಕಿನ ಕ್ರೀಡಾಪಟುಗಳು ಸಿಂಥೆಟಿಕ್ ಟ್ರ್ಯಾಕ್‌ನಲ್ಲಿ ಕ್ರೀಡಾ ತರಬೇತಿ ಪಡೆಯಬಹುದು.

# ವನ್ಯಜೀವಿ ಸಂರಕ್ಷಣೆ ಕುರಿತು ಕಾರ್ಯಾಗಾರ

• ಉದಯವಾಹಿನಿ, ಗುಂಡ್ಲುಪೇಟೆ

ಪ್ರತಿಷ್ಠಿತ ಹುಲಿ ಸಂರಕ್ಷಿತಾ ಪ್ರದೇಶ ಬಂಡೀಪುರದ ಮೇಲುಕಾಮನಹಳ್ಳಿ ಸಫಾರಿ ಕ್ಯಾಂಪಸ್ ಬಳಿ ಭಾರತ ಸರ್ಕಾರ ತಾಂತ್ರಿಕ ಯೋಜನೆಯಡಿ ವನ್ಯಜೀವಿ ಸಂರಕ್ಷಣೆ ಮತ್ತು ನಿರ್ವಹಣೆ ಕುರಿತು ಅಂತಾರಾಷ್ಟ್ರೀಯ ಬಿಗ್ ಕ್ಯಾಟ್ ಅಲೆಯನ್ಸ್ ಶೃಂಗಸಭೆ ನಡೆಯಿತು.

23 ದೇಶಗಳ ಪ್ರತಿನಿಧಿಗಳು, ನಿವೃತ್ತ ಪ್ರಮುಖ ಅರಣ್ಯಾಧಿಕಾರಿಗಳು, ವನ್ಯಜೀವಿ ತಜ್ಞರ ಉಪಸ್ಥಿತಿಯಲ್ಲಿ ಆರಂಭವಾದ ಕಾರ್ಯಾಗಾರ ಮೂರು ದಿನಗಳ ಕಾಲ ನಡೆಯಲಿದೆ. ಫೆ 9 ರಿಂದ 11 ರವರೆಗೆ ನಡೆಯಲಿರುವ ಕಾರ್ಯಾಗಾರದಲ್ಲಿ ಏಳು ದೊಡ್ಡ ಬೆಕ್ಕುಗಳ ಜಾತಿಯ ಪ್ರಾಣಿಗಳ ಸಂರಕ್ಷಣೆ ಮತ್ತು ನಿರ್ವಹಣೆ ಕುರಿತು ಚರ್ಚೆ ನಡೆಯಲಿದೆ. ಹುಲಿ ಚಿರತೆ ಸಿಂಹಗಳ ರಕ್ಷಣೆಗಾಗಿ ಆಧುನಿಕ ತಂತ್ರಜ್ಞಾನ ಬಳಕೆ ಅಂತಾರಾಷ್ಟ್ರೀಯ ಸಹಕಾರ ಹಾಗೂ ಗಿರಿಜನರ ಪುನರ್ವಸತಿ ಕುರಿತು ತಜ್ಞರಿಂದ ವಿಷಯ ಮಂಡನೆ ಮಾಡಲಾಗುತ್ತದೆ ಎಂದು ಸಿಎಫ್ ಪ್ರಭಾಕರನ್ ಮಾಹಿತಿ ನೀಡಿದರು. ಎನ್ಟಿಸಿಎ ಐಜಿಎಫ್ ಎಸ್ಪಿ ಯಾದವ್ ಮಾತನಾಡಿ ಭಾರತ ಸರ್ಕಾರವು ಮಂಚೂಣಿಯಲ್ಲಿ ನಿಂತು ಬಿಗ್ ಕ್ಯಾಟ್ ಅಲಯನ್ಸ್ ನಡೆಸುತ್ತಿದೆ, ಏಳು ದೊಡ್ಡಜಾತಿಯ ಬೆಕ್ಕುಗಳ ಸಂರಕ್ಷಣೆ ಈ ಕಾರ್ಯಾಗಾರದ ಪ್ರಮುಖ ಗುರಿಯಾಗಿದೆ , ಜಗತ್ತಿನಾದ್ಯಂತ 95 ದೇಶಗಳಲ್ಲಿ ಈ ಜಾತಿಯ ಪ್ರಾಣಿಗಳಿವೆ ಹಾಗೆಯೇ ಭಾರತದಲ್ಲಿಯೂ ಸಹ ಐದು ರೀತಿಯ ದೊಡ್ಡ ಬೆಕ್ಕುಗಳ ಜಾತಿಯ ಪ್ರಾಣಿಗಳಿವೆ ಎಂದು ತಿಳಿಸಿದರು. ಭಾರತದಲ್ಲಿ ಅತಿ ಹೆಚ್ಚು ಹುಲಿ, ಚಿರತೆ ಸಂರಕ್ಷಣೆ ಮಾಡಲಾಗುತ್ತಿದೆ , ಗುಜರಾತಿನಲ್ಲೂ ಸಹ ಸಿಂಹದ ಸಂಖ್ಯೆ ಗಣನೀಯವಾಗಿ ಏರಿಕೆ ಕಂಡಿದೆ, ಕಾರ್ಯಾಗಾರದಲ್ಲಿ 23 ದೇಶಗಳ 39 ಮಂದಿ ಪ್ರತಿನಿಧಿಗಳು ಭಾಗಿಯಾಗಿದ್ದಾರೆ ಎಂದರು. ವನ್ಯಜೀವಿಗಳ ರಕ್ಷಣೆ ಎಷ್ಟು ಮಹತ್ವ ಪಡೆದುಕೊಂಡಿದೆ ಎಂಬುದಕ್ಕೆ ಬಂಡೀಪುರ ಹಾಗೂ ನಾಗರಹೊಳೆಯಲ್ಲಿ ಆಯೋಜಿಸಿರುವ ಕಾರ್ಯಾಗಾರವೇ ಸಾಕ್ಷಿಯಾಗಿದೆ ಹಾಗೆಯೇ ಸಂರಕ್ಷಣಾ ಜ್ಞಾನವು ವೃದ್ಧಿಯಾಗಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಇದೆ ವೇಳೆ ವನ್ಯಜೀವಿಗಳ ಸಂರಕ್ಷಣೆ ಸೆರೆ ಕಾರ್ಯಾಚರಣೆಯಲ್ಲಿ ಬಳಸಲಾಗುವ ಅರವಳಿಕೆ ಚುಚ್ಚುಮದ್ದು, ಪಿಸ್ತೂಲು, ಅರಣ್ಯ ಕಾವಲಿಗೆ ಉಪಯೋಗಿಸುವ ಕ್ಯಾಮರಾ, ರಾತ್ರಿ ವೇಳೆ ಪತ್ತೆ ಕಾರ್ಯಕ್ಕೆ ಬಳಸುವ ಥರ್ಮಲ್ ಡ್ರೋನ್ ಕ್ಯಾಮರಗಳನ್ನ ಪ್ರದರ್ಶನಕ್ಕಿಡಲಾಗಿತ್ತು.


ಉದಯವಾಹಿನಿ ಚಿತ್ರ

**ಬಿಗ್ ಕ್ಯಾಟ್ ಅಲೆಯನ್ಸ್ ಶೃಂಗಸಭೆ**

ಕಾರ್ಯಾಗಾರದಲ್ಲಿ ಎಪಿಸಿಸಿಎಫ್ ವಿಶ್ವಜಿತ್ ಮಿಶ್ರಾ, ಎನ್ ಟಿಸಿಎಡಿಐಜಿ ವೈಭವ್ ಮಾಥುರ್, ಐಬಿಸಿಎ ನಿವೃತ್ತ ಪಿಸಿಸಿಎಫ್ ಸುಭಾಷ್ ಮಾಲ್ಕಡೆ, ಸಿಎಫ್ ರಮೇಶ್ ಕುಮಾರ್, ಪ್ರಭಾಕರನ್, ಮಾಲತಿ ರಮೇಶ್ ಕುಮಾರ್, ಎಸಿಎಫ್ ನವೀನ್ ಕುಮಾರ್, ಆರ್ ಎಫ್ ಮಹದೇವ್, ಮಲ್ಲೇಶ್, ಸೇರಿದಂತೆ ಇಲಾಖೆ ಸಿಬ್ಬಂದಿಗಳು ಹಾಜರಿದ್ದರು. ಕಾರ್ಯಾಗಾರದಲ್ಲಿ ದಕ್ಷಿಣ ಆಫ್ರಿಕಾ, ಕೀನ್ಯಾ, ಶ್ರೀಲಂಕಾ, ಆಸ್ಟ್ರೇಲಿಯಾ, ಪೆರು, ರಷ್ಯಾ, ನೇಪಾಳ, ಕೀನ್ಯಾ, ಮಲೇಷ್ಯಾ, ಪೆರು, ನಮೀಬಿಯಾ, ಕಜಕಿಸ್ತಾನ್ ಸೇರಿದಂತೆ 23 ದೇಶಗಳಿಂದ 39 ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಭಾಗಿಯಾಗಿದ್ದಾರೆ.

### ಅಕ್ರಮವಾಗಿ ಜಾನುವಾರು ಸಾಗಾಟ

• ಉದಯವಾಹಿನಿ, ಮಧುಗಿರಿ

ಅಕ್ರಮವಾಗಿ ಲಾರಿಯಲ್ಲಿ ಸಾಗಾಟ ಮಾಡುತ್ತಿದ್ದ 27 ಹಸುಗಳನ್ನು ಮಿಡಿಗೇಶಿ ಪೊಲೀಸರು, ವಶಕ್ಕೆ ಪಡೆದಿದ್ದಾರೆ. ಮಿಡಿಗೇಶಿ ಹೋಬಳಿಯ ಆಂಧ್ರದ ಗಡಿ ಭಾಗದ ಚಂದ್ರಬಾವಿ ಚೆಕ್‌ಪೋಸ್ಟ್ ಬಳಿ ಬಳ್ಳಾರಿಯಿಂದ ಮಧುಗಿರಿ ಕಡೆಗೆ ಬರುತ್ತಿದ್ದ ಲಾರಿಯನ್ನು ಪೊಲೀಸರು ತಡೆದು ಪರಿಶೀಲಿಸಿದಾಗ ಅವರ ಬಳಿ ದಾಖಲೆ, ಅನುಮತಿಯಿಲ್ಲದೆ ಎಮ್ಮೆ, ಕೋಣ, ಹೋರಿ, ಹಸುಗಳನ್ನು ಸಾಗಾಟ ಮಾಡುತ್ತಿರುವುದು ಪತ್ತೆಯಾಗಿದೆ. ವಶಕ್ಕೆ ಪಡೆದ ಹಸುಗಳನ್ನು ಕ್ಯಾತ್ಸಂದ್ರದ ಗೋಶಾಲೆಗೆ ಕಳುಹಿಸಿಕೊಡಲಾಗಿದೆ ಎಂದು ಪಿಎಸ್‌ಐ ರವೀಂದ್ರ ತಿಳಿಸಿದ್ದಾರೆ. ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಬಂಧಿತರು ದಾವಣಗೆರೆ, ಬಳ್ಳಾರಿ ಹಾಗೂ ಚಿತ್ರದುರ್ಗದ ಭಾಗಗಳಿಂದ ಬರುತ್ತಿದ್ದೇವೆಂದು ಪ್ರಾಥಮಿಕ ವಿಚಾರಣೆಯಲ್ಲಿ ಮಾಹಿತಿ ನೀಡಿದ್ದಾರೆ. ಲಾರಿ ಚಾಲಕ ಚೇತನ್, ಕ್ಲೀನರ್ ರಘು, ತಬರೀಸ್ ವಿರುದ್ಧ ಮಿಡಿಗೇಶಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.




# ಶಿವರಾತ್ರಿಗೆ ಮಹದೇಶ್ವರ ಬೆಟ್ಟ ಸಜ್ಜು ; ಪ್ಲಾಸ್ಟಿಕ್‌ಗೆ ಕಡಿವಾಣ

## ಜಾತ್ರಾ, ಮಹೋತ್ಸವಕ್ಕೆ 10 ಲಕ್ಷಕ್ಕೂ ಹೆಚ್ಚು ಭಕ್ತರು ಆಗಮಿಸುವ ನಿರೀಕ್ಷೆ, ಪಾದಯಾತ್ರಿಗಳ ಭದ್ರತೆಗೆ 50 ಗೃಹರಕ್ಷಕ ದಳ ಸಿಬ್ಬಂದಿ ನಿಯೋಜನೆ

• ಉದಯವಾಹಿನಿ, ಹನೂರು

ತಾಲ್ಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ಫೆ.14 ರಿಂದ 18 ರವರೆಗೆ ನಡೆಯಲಿರುವ ಐದು ದಿನಗಳ ಮಹಾಶಿವರಾತ್ರಿ, ಜಾತ್ರಾ ಮಹೋತ್ಸವಕ್ಕಾಗಿ ಶ್ರೀ ಕ್ಷೇತ್ರದಲ್ಲಿ ಸಿದ್ಧತಾ ಕಾರ್ಯಗಳು ಭರದಿಂದ ಸಾಗಿವೆ. ಜಾತ್ರಾ ಮಹೋತ್ಸವಕ್ಕೆ10 ಲಕ್ಷಕ್ಕೂ ಹೆಚ್ಚು ಭಕ್ತರು ಆಗಮಿಸುವ ನಿರೀಕ್ಷೆ ಇರುವುದರಿಂದ ಮೂಲ ಸೌಲಭ್ಯ ಕಲ್ಪಿಸಲಾಗುತ್ತಿದೆ. ಈಗಾಗಲೇ ಬಿಸಿಲ ಝಳ ಹೆಚ್ಚಾಗಿರುವುದರಿಂದ ನೆರಳಿನ ವ್ಯವಸ್ಥೆ, ಕುಡಿಯುವ ನೀರು, ಶೌಚಾಲಯ, ವಿಶೇಷ ದಾಸೋಹ ಸೇರಿದಂತೆ ಎಲ್ಲಾ ರೀತಿಯ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ. ಕಳೆದ ತಿಂಗಳು ಪಾದಯಾತ್ರಿಕನ ಮೇಲೆ ಚಿರತೆ ದಾಳಿ ನಡೆಸಿ ಕೊಂದು ಹಾಕಿದ ಘಟನೆ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಈ ಬಾರಿ ಮಹಾಶಿವರಾತ್ರಿ, ಜಾತ್ರಾ, ಮಹೋತ್ಸವದ ವೇಳೆ ಪಾದಯಾತ್ರೆ ಮೂಲಕ ಬರುವ ಭಕ್ತರ ಸುರಕ್ಷತೆಗಾಗಿ ತಾಳುಬೆಟ್ಟದಿಂದ ಮಲೆ ಮಹದೇಶ್ವರ ಬೆಟ್ಟದವರೆಗೆ ಅರಣ್ಯ ಇಲಾಖೆ ಸಿಬ್ಬಂದಿಯೊಂದಿಗೆ 50 ಗೃಹರಕ್ಷಕ ದಳದ ಸಿಬ್ಬಂದಿಯನ್ನು ನಿಯೋಜಿಸಿ ಎಚ್ಚರಿಕೆ ವಹಿಸಲಾಗಿದೆ.



### ಕುಡಿಯುವ ನೀರು, ಶೌಚಾಲಯ

**ತಾಳುಬೆಟ್ಟದಿಂದ ಮಲೆ ಮಹದೇಶ್ವರ ಬೆಟ್ಟದವರೆಗೆ 15 ಸ್ಥಳಗಳಲ್ಲಿ ಕುಡಿಯುವ ನೀರಿನ ಟ್ಯಾಂಕ್‌ಗಳನ್ನು ಸ್ಥಾಪಿಸಿ ನೀರು ಪೂರೈಸಲಾಗುತ್ತಿದೆ. ಮೊಬೈಲ್ ಶೌಚಾಲಯಗಳ ನಿರ್ಮಾಣಕ್ಕಾಗಿ ಅರಣ್ಯ ಇಲಾಖೆಗೆ ಅನುಮತಿ ಕೋರಿ ಪತ್ರ ಸಲ್ಲಿಸಲಾಗಿದ್ದು, ಅನುಮತಿ ದೊರೆತ ನಂತರ ಆನೆತಲೆದಿಂಬ, ರಂಗಸ್ವಾಮಿ ಒಡ್ಡು ಹಾಗೂ ತಾಳುಬೆಟ್ಟ ತಿರುವಿನಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಆರು ಮೊಬೈಲ್ ಶೌಚಾಲಯಗಳನ್ನು ಸ್ಥಾಪಿಸಲಾಗುವುದು.**

**-ಎ.ಇ.ರಘು , ಪ್ರಾಧಿಕಾರದ ಕಾರ್ಯದರ್ಶಿ**

### ರಿಕ್ಷಾ, ಬೈಕ್, ಗೂಡ್ಸ್ ವಾಹನ ನಿಷೇಧ


**ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ಹನೂರು ತಾಲ್ಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ಖಾಸಗಿ ವಾಹನಗಳ ಪ್ರವೇಶ ನಿಷೇಧಿಸಲಾಗಿದೆ. ಬೆಟ್ಟದಲ್ಲಿನ ಜಾತ್ರೆಗೆ ಲಕ್ಷಾಂತರ ಭಕ್ತರು ಆಗಮಿಸುವುದರಿಂದ ಸಹಜವಾಗಿ ವಾಹನ ದಟ್ಟಣೆ ಹೆಚ್ಚಾಗುತ್ತದೆ. ಹೀಗಾಗಿ, ಫೆಬ್ರವರಿ 14 ರಿಂದ 18 ರವರೆಗೆ ಮಹದೇಶ್ವರಬೆಟ್ಟಕ್ಕೆ ದ್ವಿಚಕ್ರ, ಆಟೋ ರಿಕ್ಷಾ, ಗೂಡ್ಸ್ ವಾಹನ ಪ್ರವೇಶ ನಿಷೇಧಿಸಲಾಗಿದ್ದು, ಕೌದಳ್ಳಿ ಬಳಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ.**

**ಸಿದ್ಧತಾ ಕಾರ್ಯ ಪರಿಶೀಲನೆ:** ಕೈಗೊಳ್ಳಲಾಗಿರುವ ಸಿದ್ಧತಾ ಕಾರ್ಯಗಳನ್ನು ಮಲೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಇ.ರಘು ಪರಿಶೀಲಿಸಿದರು. ರಾಜ್ಯದ ನಾನಾ ಜಿಲ್ಲೆಗಳು , ನೆರೆಯ ತಮಿಳುನಾಡಿನಿಂದ ಪಾದಯಾತ್ರೆ ಹಾಗೂ ವಾಹನಗಳ ಮೂಲಕ 10 ಲಕ್ಷಕ್ಕೂ ಅಧಿಕ ಭಕ್ತರು ಜಾತ್ರೆಗೆ ಆಗಮಿಸುವ ನಿರೀಕ್ಷೆ ಇರುವುದರಿಂದ, ಜಾತ್ರೆಗೆ ಹತ್ತು ದಿನಗಳ ಮುಂಚಿತವಾಗಿಯೇ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ತಾಳು ಬೆಟ್ಟದಲ್ಲಿ ತೆರೆಯಲಾದ ಚೆಕ್‌ಪೋಸ್ಟ್ ನಲ್ಲಿ ಪ್ಲಾಸ್ಟಿಕ್ ನೀರಿನ ಬಾಟಲಿಗಳನ್ನು ತರುವ ವಾಹನಗಳನ್ನು ತಡೆಯಲು ಹೆಚ್ಚುವರಿ ಸಿಬ್ಬಂದಿ ನಿಯೋಜಿಸಲಾಗಿದೆ. ಭಕ್ತರು ಪ್ಲಾಸ್ಟಿಕ್‌ಮುಕ್ತ ಮಲೆ ಮಹದೇಶ್ವರ ಬೆಟ್ಟಕ್ಕೆ ಸಹಕರಿಸಬೇಕು, ಎಂದು ಮನವಿ ಮಾಡಿದರು. ಲಕ್ಷಾಂತರ ಭಕ್ತರು ಪಾದಯಾತ್ರೆ ಮೂಲಕ ಆಗಮಿಸುವ ಹಿನ್ನೆಲೆ ಪ್ರಾಧಿಕಾರದ ಕಚೇರಿ ಸಮೀಪದ ಅರಳಿ ಮರದ ಮುಂಭಾಗದಿಂದ ಪ್ರತ್ಯೇಕ ಸರತಿ ಸಾಲಿನ ವ್ಯವಸ್ಥೆ ಮಾಡಲಾಗಿದ್ದು, ರಾಜಗೋಪುರ, ಮುಖ್ಯ ದ್ವಾರ ಹಾಗೂ 250 ಟಿಕೆಟ್ ಕೌಂಟರ್ ಮೂಲಕ ಉಚಿತ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಪಾದಯಾತ್ರೆಯ ಮೂಲಕ ಶ್ರೀ ಕ್ಷೇತ್ರಕ್ಕೆ ಬರುವ ಭಕ್ತರು ವಿಶ್ರಾಂತಿ ಪಡೆಯಲು ರಾಜಗೋಪುರದ ಬಲ ಭಾಗದಲ್ಲಿ ನೆರಳಿನ ವ್ಯವಸ್ಥೆ ಕಲ್ಪಿಸಲಾಗಿದೆ, ಎಂದು ಮಾಹಿತಿ ನೀಡಿದರು.

ಅಂತರಾಳದಿಂದ...
EDITORIAL

# ಸದನದ ಘನತೆ ಪುನರುಜ್ಜೀವನಗೊಳ್ಳಲಿ

ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರು ಕಾಂಗ್ರೆಸ್ ಸದಸ್ಯ ನಸೀರ್ ಅಹ್ಮದ್ ಅವರ ರಾಷ್ಟ್ರೀಯತೆಯನ್ನು ಪರೋಕ್ಷವಾಗಿ ಪ್ರಶ್ನಿಸಿದ ಹೇಳಿಕೆಗೆ ಕ್ಷಮೆ ಕೋರಲು ನಿರಾಕರಿಸಿರುವ ಕಾರಣದಿಂದಾಗಿ ಸದನದಿಂದ ಒಂದು ದಿನದ ಅವಧಿಗೆ ಅಮಾನತುಗೊಂಡಿದ್ದಾರೆ. ಈ ಘಟನೆ, ರಾಜ್ಯದ ವಿಧಾನಮಂಡಲದಲ್ಲಿನ ಚರ್ಚೆಗಳು ತಲಪಿರುವ ಅಧೋಗತಿಗೆ ಸಂಕೇತದಂತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಕುರಿತ ತಮ್ಮ ಹೇಳಿಕೆಗಳಿಗೆ ನಸೀರ್ ಅಹ್ಮದ್ ವಿಷಾದ ವ್ಯಕ್ತಪಡಿಸಿದ ನಂತರವೂ, ಸಭಾಧ್ಯಕ್ಷರ ಆದೇಶವನ್ನು ಮತ್ತೆ ಮತ್ತೆ ಉಲ್ಲಂಘಿಸುವುದನ್ನೇ ರವಿ ತಮ್ಮ ಆಯ್ಕೆಯನ್ನಾಗಿಸಿಕೊಂಡರು. ಈ ನಡವಳಿಕೆ ಆಕಸ್ಮಿಕ ಅಥವಾ ಅನುದ್ದೇಶಿತ ಎಂದು ಭಾವಿಸಲಾಗದು. ಒಂದು ವರ್ಷದ ಹಿಂದೆ, ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರನ್ನು ಉದ್ದೇಶಿಸಿ ಸದನದಲ್ಲಿ ಅಶ್ಲೀಲ ಹಾಗೂ ಅಸಭ್ಯವಾಗಿ ಮಾತನಾಡಿದ್ದಾರೆ ಎನ್ನುವ ಗಂಭೀರ ಆರೋಪಕ್ಕೆ ಸಿ.ಟಿ. ರವಿ ಗುರಿಯಾಗಿದ್ದರು. ಆದರೆ, ಇಂಥ ನೈತಿಕ ಅಧಃಪತನ ನಿರ್ದಿಷ್ಟ ವ್ಯಕ್ತಿ ಅಥವಾ ಪಕ್ಷಕ್ಕೆ ಸೀಮಿತವಾದುದಲ್ಲ. ವಿಧಾನಸಭೆಯಲ್ಲಿ ಕಾಂಗ್ರೆಸ್ ಶಾಸಕ ಶಿವಲಿಂಗೇಗೌಡ ಅವರು ವಿರೋಧ ಪಕ್ಷದ ಸದಸ್ಯರನ್ನುದ್ದೇಶಿಸಿ ಬಳಸಿದ ಅವಹೇಳನಕಾರಿ ಶಬ್ದಗಳು ಹಾಗೂ ಏಕವಚನ ಪ್ರಯೋಗವು ಸದನದ ಗೌರವ ಎತ್ತಿಹಿಡಿಯುವಂತಹದ್ದೇನಾಗಿರಲಿಲ್ಲ. ಶಾಸಕರ ಕುಟುಂಬದ ಸದಸ್ಯರನ್ನು ಪ್ರಸ್ತಾಪಿಸಿ ಅವರು ನಡೆಸಿದ ದಾಳಿ ಅಗ್ಗದ ಅಭಿರುಚಿಯಿಂದ ಕೂಡಿತ್ತು. ಅವರ ಬೀದಿರಂಪದ ಆಕ್ರೋಶ ಹಾಗೂ ಕೀಳು ಮಾತುಗಳು ಸದನದ ಚರ್ಚೆಗಳು ಮುಟ್ಟಿರುವ ಅಧಃಪತನದ ಸಂಕೇತದಂತಿದ್ದವು. ಉಮಾಶ್ರೀ ಅವರನ್ನು ಕುರಿತಂತೆ ವಿಧಾನ ಪರಿಷತ್ ಸಭಾಧ್ಯಕ್ಷರು ಆಡಿದ ಮಾತುಗಳೂ ಸದಭಿರುಚಿಯಿಂದ ಕೂಡಿರಲಿಲ್ಲ ಹಾಗೂ ಲಿಂಗಸೂಕ್ಷ್ಮತೆ ಒಳಗೊಂಡಿರಲಿಲ್ಲ. ದ್ವೇಷಭಾಷಣ ಕಾಯ್ದೆಯನ್ನು ಜಾರಿಗೆ ತರಲು ರಾಜ್ಯ ಸರ್ಕಾರ ಉತ್ಸುಕವಾಗಿರುವ ಸಂದರ್ಭದಲ್ಲಿ, ಪ್ರಜಾಪ್ರತಿನಿಧಿಗಳ ಕಲಾಪಗಳೇ ದ್ವೇಷಭಾಷಣಗಳ ಕಮ್ಮಟಗಳಾಗಿ ರೂಪುಗೊಂಡಿರುವುದು ವಿಷಾದಕರ ಬೆಳವಣಿಗೆ. ವಾದಕ್ಕೆ ಪ್ರತಿವಾದ ಮಂಡಿಸುವ ಬದಲು ಪ್ರಚೋದನೆ ಹಾಗೂ ಬೈಗುಳವೇ ಸಂವಾದಕ್ಕೆ ಸರಿಯಾದ ನೀತಿ ಎನ್ನುವಂತಾಗಿರುವುದು



ದುರದೃಷ್ಟಕರ. ಇದು, ಕರ್ನಾಟಕ ವಿಧಾನಮಂಡಲ ಕಂಡಿದ್ದ ಅತ್ಯುನ್ನತ ಮಟ್ಟದ ಬೌದ್ಧಿಕ, ವಾಗ್ವಾದ ಪರಂಪರೆಯು ಅವನತಿಯತ್ತ ಸಾಗುತ್ತಿರುವುದನ್ನು ಸೂಚಿಸುವಂತಿದೆ. ವಿಧಾನಸಭೆ ಹಾಗೂ ವಿಧಾನ ಪರಿಷತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ದೇಗುಲಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ಅಲ್ಲಿ ಗಂಟಲಿನ ಶಕ್ತಿಗಿಂತಲೂ ಕಾನೂನು ಸಂಹಿತೆ, ಅಂಕಿಅಂಶಗಳು, ಅಧಿಕೃತ ದಾಖಲೆಗಳೇ ಮುಖ್ಯವಾಗಿದ್ದವು. ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳ ನಾಯಕರು ಪೂರ್ವಸಿದ್ಧತೆಯೊಂದಿಗೆ ಆಗಮಿಸಿ, ಗಂಟೆಗಟ್ಟಲೆ ವಿದ್ವತ್ಪೂರ್ಣವಾಗಿ ತಮ್ಮ ವಿಚಾರಗಳನ್ನು ಮಂಡಿಸುತ್ತಿದ್ದರು. ವ್ಯಂಗ್ಯ, ವಿಡಂಬನೆ ಚರ್ಚೆಯ ಭಾಗವಾಗಿದ್ದರೂ, ಅದು ಯಾರನ್ನೂ ನೋಯಿಸುವಂತಿರಲಿಲ್ಲ; ಆಯುಧದಂತೆ ಬಳಕೆಯಾಗುತ್ತಿರಲಿಲ್ಲ; ವೈಯಕ್ತಿಕ ತೇಜೋವಧೆಯ ಉದ್ದೇಶ ಹೊಂದಿರುತ್ತಿರಲಿಲ್ಲ. ಗೌರವಪೂರ್ಣ ಸಂಬೋಧನೆ ಹಾಗೂ ಹದ್ದುಮೀರದ ಭಾಷೆ ಸದನದ ಘನತೆಯ ದ್ಯೋತಕವಾಗಿದ್ದವು. ನ್ಯಾಯಾಲಯದ ಕಲಾಪ ಮತ್ತು ವಿಶ್ವವಿದ್ಯಾಲಯಗಳಲ್ಲಿನ ಸೆಮಿನಾರ್‌ಗಳಂತೆ ಸದನದಲ್ಲಿನ ಮಾತುಕತೆಗಳೂ ಗಂಭೀರವಾಗಿ ನಡೆಯುತ್ತಿದ್ದವು. ಆ ಸಂಸ್ಕೃತಿ ಈಗ ಮರೆಯಾಗಿದ್ದು, ಸದನಗಳಲ್ಲಿನ ಚರ್ಚೆಗಳು ದ್ವೇಷಭಾಷಣದ ಸ್ವರೂಪ ಪಡೆದುಕೊಂಡಿರುವುದು ದುರದೃಷ್ಟಕರ.

ಈ ಬೆಳವಣಿಗೆ ಸಾಂಸ್ಥಿಕ ಮೌಲ್ಯಗಳಲ್ಲಿ ಆಗಿರುವ ಆಳವಾದ ಸವಕಳಿಯ ಫಲಶ್ರುತಿಯಾಗಿದೆ. ಉನ್ನತ ಮಟ್ಟದ ಚರ್ಚೆಯ ಮಾನದಂಡಗಳನ್ನು ಗುರುತಾಗಿ ಹೊಂದಿದ್ದ ಕರ್ನಾಟಕ ವಿಧಾನಮಂಡಲವು ತನ್ನ ಘನತೆಯನ್ನು ಮರುಸ್ಥಾಪಿಸಿಕೊಳ್ಳಬೇಕಾದ ತುರ್ತನ್ನು ಎದುರಿಸುತ್ತಿದೆ. ಸದನದ ಭಾಷೆ ಹಾಗೂ ನಡವಳಿಕೆಯಲ್ಲಿ ಆಗಿರುವ ಬದಲಾವಣೆಯು ಶಿಷ್ಟಾಚಾರಕ್ಕೆ ಸಂಬಂಧಿಸಿದ ಪ್ರಶ್ನೆ ಮಾತ್ರವಾಗಿರದೆ, ಪ್ರಜಾಪ್ರಭುತ್ವದ ವಿಶ್ವಾಸಾರ್ಹತೆಗೆ ಸಂಬಂಧಿಸಿದ್ದೂ ಆಗಿದೆ. ಕೋಮು ಪ್ರಚೋದನೆ, ಅಸಭ್ಯ ಭಾಷೆ ಹಾಗೂ ವೈಯಕ್ತಿಕ ದ್ವೇಷಕ್ಕೆ ಸದನ ಅವಕಾಶ ಮಾಡಿಕೊಟ್ಟಾಗ, ಸಾರ್ವಜನಿಕ ಸಂವಾದದ ಬದಲು ಅದೊಂದು ಪ್ರಹಸನದಂತೆ ಕಾಣಿಸತೊಡಗುತ್ತದೆ. ಸದನದಲ್ಲಿನ ಚರ್ಚೆಗಳನ್ನು ಬೀದಿಜಗಳದ ಮಟ್ಟಕ್ಕೆ ಇಳಿಸುವುದು ಪ್ರಜಾಪ್ರತಿನಿಧಿಗಳು ತಮ್ಮ ಮತದಾರರಿಗೆ ಮಾಡುವ ವಿಶ್ವಾಸದ್ರೋಹವಾಗಿದೆ ಹಾಗೂ ಸದನದ ಪರಂಪರೆಗೆ ಎಸಗುವ ಅವಮಾನವಾಗಿದೆ. ಸರ್ಕಾರದ ನೀತಿ, ಆಡಳಿತ ಮತ್ತು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ಚರ್ಚೆಗಳಿಗೆ ಸದನ ವೇದಿಕೆಯಾಗಬೇಕೆಂದು ಅಪೇಕ್ಷಿಸುವ ಎಲ್ಲಾ ಹಕ್ಕು ನಾಗರಿಕರಿಗಿದೆ. ಸದನದಲ್ಲಿ ಶಿಸ್ತು ಮತ್ತು ಘನತೆಯನ್ನು ಮರುಸ್ಥಾಪಿಸುವುದು ಶಿಷ್ಟಾಚಾರಕ್ಕೆ ಸಂಬಂಧಿಸಿದ ಸಂಗತಿಯಷ್ಟೇ ಆಗಿರದೆ, ಈಗಾಗಲೇ ಸಾರ್ವಜನಿಕರ ದೃಷ್ಟಿಯಲ್ಲಿ ತನ್ನ ಘನತೆಯನ್ನು ಕಳೆದುಕೊಳ್ಳುವ ದಾರಿಯಲ್ಲಿರುವ ಶಾಸಕಾಂಗದ ವಿಶ್ವಾಸಾರ್ಹತೆಯನ್ನು ಮರು ಸ್ಥಾಪಿಸುವ ಕ್ರಮವೂ ಆಗಿದೆ. ಜನರ ತೆರಿಗೆ ಹಣದಲ್ಲಿ ನಡೆಯುವ ಸದನ ಸಾರ್ವಜನಿಕರ ಹಿತಾಸಕ್ತಿಗೆ ಸಂಬಂಧಿಸಿದ ಚರ್ಚೆಗೆ ವೇದಿಕೆ ಆಗಬೇಕೇ ಹೊರತು, ರಾಜಕೀಯ ಪ್ರಹಸನಗಳಿಗಲ್ಲ.

# ರಾಮಾಯಣ



## ಅಂಗದನು ವಾಲಿಗೆ ಅಗ್ನಿಸಂಸ್ಕಾರ ಮಾಡಿದ್ದು

• ಹಿಂದಿನ ಸಂಚಿಕೆಯಿಂದ **120ನೆಯ ಅಧ್ಯಾಯ**

ಆತನು ಮೊದಲೇ ತನ್ನ ಜಾತಿಧರ್ಮದಲ್ಲಿ ನಡೆದು ಸ್ವರ್ಗಸಾಧನವಾದ ಸತ್ಕರ್ಮವನ್ನು ಮಾಡಿದ್ದನು. ಈಗ ರಣರಂಗದಲ್ಲಿ ಹಿಮ್ಮೆಟ್ಟದೆ ಶರೀರವನ್ನು ಬಿಟ್ಟು ವೀರಸ್ವರ್ಗ ವನ್ನು ಪಡೆದನು. ಆತನಿಗೆ ಈ ಅವಸ್ಥೆಯು ಬಂದದ್ದು ಕಾಲಗತಿಯಿಂದಲೇ ಸರಿ. ಆದಕಾರಣ ನೀವಿನ್ನು ಶೋಕವನ್ನು ಸಾಕುಮಾಡಿ ಮುಂದಿನ ಕಾಲೋಚಿತವಾದ ಕಾರ್ಯವನ್ನು ಮಾಡಿ ಎಂದು ನುಡಿದನು.

ಆಗ ಅಸಹಾಯಶೂರನಾದ ಲಕ್ಷ್ಮಣನು ಸುಗ್ರೀವನನ್ನು ಕುರಿತು ವಿನಯದಿಂದ '' ಸುಗ್ರೀವ, ನೀನು ಪರಾಕ್ರಮಿಯಾದ ವಾಲಿಗೆ ಅಂತ್ಯಕರ್ಮವನ್ನು ಮಾಡಲು ಪ್ರಯತ್ನಿಸು. ತಾರೆಯನ್ನೂ ಅಂಗದನನ್ನೂ ಮುಂದಿಟ್ಟುಕೊಂಡು ಒಣಗಿದ ಶ್ರೀಗಂಧದ ಮರದ ಕೊರಡುಗಳನ್ನು ಕತ್ತರಿಸಿ ವಾಲಿಗೆ ಅಗ್ನಿಸಂಸ್ಕಾರವನ್ನು ಮಾಡು. ಕಂಗೆಟ್ಟಿರುವ ಅಂಗದನನ್ನು ಸಂತವಿಡು. ಈ ಮಕ್ಕಳಾಟದ ಬುದ್ಧಿಯನ್ನು ಬಿಡು. ಕಿಷ್ಕಿಂಧಾಪಟ್ಟಣವು ನಿನ್ನ ಅಧೀನವಾದದ್ದು. ಅಂಗದನು ಕಿಷ್ಕಿಂಧಾಪಟ್ಟಣಕ್ಕೆ ಹೋಗಿ ವಾಲಿಯ ಸಂಸ್ಕಾರಕ್ಕೆ ತಕ್ಕ ಎಣ್ಣೆ, ತುಪ್ಪ, ಗಂಧಮಾಲ್ಯಾದಿ ವಸ್ತುಗಳನ್ನು ತರಿಸಲಿ.... ಎಲ್ಲೆ ತಾರ, ಕಪಿಪ್ರೇಷ್ಠ, ನೀನು ಶೀಘ್ರವಾಗಿ ಹೋಗಿ ವಾಲಿಯ ಪಲ್ಲಕ್ಕಿಯನ್ನು ತೆಗೆಸಿಕೊಂಡು ಬಾ'' ಎಂದು ನುಡಿದು ಶ್ರೀರಾಮನ ಸಮೀಪದಲ್ಲಿ ನಿಂತುಕೊಂಡನು.

ತಾರನು ಶೀಘ್ರವಾಗಿ ಕಿಷ್ಕಿಂಧಾಪಟ್ಟಣಕ್ಕೆ ಹೋಗಿ ಮೃತನಾದ ವಾಲಿಗೆ ತಕ್ಕದ್ದೂ ದಿವ್ಯವಾದ ಸಿಂಹಪೀಠವುಳ್ಳದ್ದೂ ದೇವೇಂದ್ರನ ವಿಮಾನಕ್ಕೆ ಸಮಾನವಾದದ್ದೂ ಚಿನ್ನದ ಮುಲಾವಿನಿಂದ ವಿಚಿತ್ರವಾಗಿ ನಿರ್ಮಿಸಲ್ಪಟ್ಟದ್ದೂ ಸಂವರ್ಣಪ್ರತಿಮೆಗಳುಳ್ಳದ್ದೂ ಸಿದ್ಧರ ವಿಮಾನದೋಪಾದಿಯಲ್ಲಿ ಜಾಲಾಂತರಗಳುಳ್ಳದ್ದೂ ದಿವ್ಯವಾದ ಪುಷ್ಪಮಾಲಿಕೆಗಳಿಂದ ಅಲಂಕರಿಸಲ್ಪಟ್ಟದ್ದೂ ಸಮವೂ ಚತುರಶ್ರವೂ ಆದ ಚೌಮೂಲೆಗಳುಳ್ಳದ್ದೂ! ಕಮಲಗಳಿಂದ ಮನೋಹರವಾದದ್ದೂ ಆದ ಒಂದು ಪಲ್ಲಕ್ಕಿ ಯನ್ನು ಹೊರಿಸಿಕೊಂಡು ಬಂದನು. ಅದನ್ನು ನೋಡಿ ಶ್ರೀರಾಮನು ಲಕ್ಷ್ಮಣನನ್ನು ಕುರಿತು '' ಈ ವಾಲಿಯ ಶರೀರವನ್ನು ಬೇಗನೆ ತೆಗೆದುಕೊಂಡು ಹೋಗಿ ಅಗ್ನಿಸಂಸ್ಕಾರವನ್ನು ಮಾಡಲಿ '' ಎಂದು ಹೇಳಿದನು. ಆಗ ಸುಗ್ರೀವನು ವಾಲಿಯ ಶರೀರವನ್ನು ವಸ್ತ್ರಾಭರಣಗಳಿಂದ ಅಲಂಕರಿಸಿ ಅಂಗದನ ಸಹಾಯದಿಂದ ವಾಲಿಯನ್ನು ಪಲ್ಲಕ್ಕಿಯಲ್ಲಿ ಏರಿಸಿದನು. ಕಪಿನಾಯಕರನ್ನು ಕರೆದು ''ಎಲೆ ವಾನರರೆ, ಅಗ್ನಿಸಂಸ್ಕಾರಕ್ಕೆ ಉಚಿತವಾದ ದಾನಧರ್ಮಗಳನ್ನು ಮಾಡುತ್ತ ಅಣ್ಣನ ದೇಹವನ್ನು ಸಾಗಿಸಿರಿ. ರಾಜೋಚಿತವಾದ ಮರ್ಯಾದೆಯೊಡನೆ ಯಾವ ನ್ಯೂನತೆಯೂ ಇಲ್ಲದಂತೆ ನಮ್ಮ ಒಡೆಯನ ಔರ್ಧ್ವದೈಹಿಕವನ್ನು ನೆರವೇರಿಸತಕ್ಕದ್ದು '' ಎಂದು ಆಜ್ಞಾಪಿಸಿದನು.

ಆಗ ಕಪಿನಾಯಕರು ಪ್ರೇತನಾದ ವಾಲಿಗೆ ಸರ್ವಾಲಂಕಾರವನ್ನು ಮಾಡಿ ಪಲ್ಲಕ್ಕಿಯಮೇಲಿಟ್ಟು ಆತನನ್ನೆತ್ತಿಕೊಂಡು ಹೊರಟರು. ಆಗ ತಾರಾದೇವಿಯೇ ಮೊದಲಾದ ವಾನರಸ್ತ್ರೀಯರು ಉರಸ್ತಾಡನ ಶಿರಸ್ತಾಡನಗಳೊಡನೆ ರೋದನಮಾಡಾತ್ತ ಹಿಂದೆ ಹೋದರು. ಆ ಬಳಿಕ ಸುಗ್ರೀವನು ನದೀತೀರದಲ್ಲಿ, ಮಳಲೊಟ್ಟುಗಳನ್ನು ಸೇರಿ ನೀರು ಸಮೀಪದಲ್ಲಿರುವ ರಮ್ಯವಾದ ಒಂದು ಸ್ಥಳದಲ್ಲಿ ಪಲ್ಲಕ್ಕಿಯನ್ನಿಳಿಸಿದನು. ತಾರಾದೇವಿಯು ಪಲ್ಲಕ್ಕಿಯಲ್ಲಿದ್ದ ವಾಲಿಯ ಶರೀರವನ್ನು ನೋಡಿ ಅತ್ಯಂತ ದುಃಖಾಕ್ರಾಂತೆಯಾಗಿ ಮಹಾರಾಜ; ಇಲ್ಲಿ ನೆರೆದಿರುವ ಪ್ರಜೆಗಳನ್ನೇಕೆ ನೋಡದಿದ್ದೀಯೆ ? ನನ್ನೊಡನೆ ಸಂಭಾಷಣವನ್ನೇಕೆ ಮಾಡದಿದ್ದೀಯೆ? ನೀನು ತಳಾ ಪದಿದ್ದರೂ ನಿನ್ನ ಮುಖಕಾಂತಿಯು ಸಾಯಂಕಾಲದ ಸೂರ್ಯಪ್ರಭೆಯಂತೆ ಒಪ್ಪುತ್ತಿದೆ.

ಮುಂದುವರಿಯುವುದು...

# ವ್ಯಾಲೆಂಟೈನ್ ಡೇ : ಪ್ರೇಮದ ವಿಕೃತೀಕರಣವೋ
## ಭಾರತೀಯ ಸಂಸ್ಕೃತಿಯ ಮೇಲೆ ಯೋಜಿತ ಆಘಾತವೋ ?


• ಶ್ರೀ. ವಿನೋದ ಕಾಮತ್
• ಉದಯವಾಹಿನಿ, ವಿಶೇಷ

ಭಾರತೀಯ ಸಂಸ್ಕೃತಿ ತ್ಯಾಗ, ಸಂಯಮ, ಸಾಧನೆಯ ಪರಂಪರೆಯನ್ನು ಹೊತ್ತುಕೊಂಡ ಮಹಾನ್ ಸಂಸ್ಕೃತಿಯಾಗಿದೆ. ಇಲ್ಲಿ ಪ್ರತಿಯೊಂದು ಹಬ್ಬ ಮತ್ತು ಉತ್ಸವದ ಹಿಂದೆ ಆಳವಾದ ಅಧ್ಯಾತ್ಮಶಾಸ್ತ್ರ ಅಡಗಿದೆ. ದೌರ್ಭಾಗ್ಯವಶಾತ್, ಇಂದಿನ ಯುವಪೀಳಿಗೆಯ ಪಾಶ್ಚಾತ್ಯ ಅಂಧಾನುಕರಣೆಯ ಪರಿಣಾಮವಾಗಿ 'ವ್ಯಾಲೆಂಟೈನ್ ಡೇ' ಮುಂತಾದ ಸಂಕಲ್ಪನೆಗಳ ಜಾಲದಲ್ಲಿ ಸಿಲುಕುತ್ತಾ ಹೋಗುತ್ತಿದೆ. ಇದು ಕೇವಲ ಒಂದು 'ದಿನ' ಮಾತ್ರವಲ್ಲ; ಇದು ಭಾರತೀಯ ಕುಟುಂಬ ವ್ಯವಸ್ಥೆಯ ಮೇಲೆ, ನೈತಿಕ ಮೌಲ್ಯಗಳ ಮೇಲೆ, ಪರೋಕ್ಷವಾಗಿ ಹಿಂದೂ ಧರ್ಮದ ಮೇಲೆ ನಡೆಯುತ್ತಿರುವ ವೈಚಾರಿಕ ಮತ್ತು ಸಾಂಸ್ಕೃತಿಕ ಆಕ್ರಮಣವಾಗಿದೆ.

**1. ದೇಹಬುದ್ಧಿಯ ಉದಾತ್ತೀಕರಣವೇ ? ಅಥವಾ ಆತ್ಮಬುದ್ಧಿಯ ಜಾಗೃತಿಯೇ:** ಪಾಶ್ಚಾತ್ಯರ 'ವ್ಯಾಲೆಂಟೈನ್ ಡೇ' ಸಂಕಲ್ಪನೆ ಸಂಪೂರ್ಣವಾಗಿ 'ದೇಹಬುದ್ಧಿ'ಯ ಮೇಲೆ ಆಧಾರಿತವಾಗಿದೆ. ಇದರಲ್ಲಿ ಕೇವಲ ಶಾರೀರಿಕ ಆಕರ್ಷಣೆ ಮತ್ತು ಇಂದ್ರಿಯ ಸುಖಗಳಿಗೆ ಅತಿರೇಕದ ಮಹತ್ವ ನೀಡಲಾಗುತ್ತದೆ. ಇದಕ್ಕೆ ವಿರುದ್ಧವಾಗಿ, ಭಾರತೀಯ ಸಂಸ್ಕೃತಿ 'ಆತ್ಮಬುದ್ಧಿ'ಯನ್ನು ಬೋಧಿಸುತ್ತದೆ. ಇಂದಿನ ಪೀಳಿಗೆ ಪ್ರೇಮವೆಂದು ಭಾವಿಸುವುದು ವಾಸ್ತವದಲ್ಲಿ ಕ್ಷಣಿಕವಾದ 'ವಾಸನೆ' ಮಾತ್ರ. ಹಿಂದೂ ಧರ್ಮ 'ಪ್ರೀತಿ'ಯನ್ನು ಹೇಳುತ್ತದೆ. ಪ್ರೀತಿ ಎಂದರೆ ನಿರಪೇಕ್ಷ ಪ್ರೇಮ ! ಅದು ದೇಹವನ್ನು ನೋಡಿ ಅಲ್ಲ, ಎದುರಿನ ವ್ಯಕ್ತಿಯೊಳಗಿನ ದೈವತ್ವವನ್ನು (ಆತ್ಮತತ್ತ್ವವನ್ನು) ನೋಡಿ ಹುಟ್ಟುವ ಪ್ರೇಮ. ಅಂಥ ಪ್ರೇಮವೇ ಶಾಶ್ವತ. ವ್ಯಾಲೆಂಟೈನ್ ಡೇ ವಾಸನೆಯನ್ನು ಉತ್ತೇಜಿಸುತ್ತದೆ; ಆದರೆ ಹಿಂದೂ ಧರ್ಮ ಸಂಯಮದ ಮೂಲಕ ಬ್ರಹ್ಮಾನಂದದತ್ತ ಕರೆದೊಯ್ಯುತ್ತದೆ.

**2. ಹಿಂದೂ ಧರ್ಮದ ಮೇಲಿನ ಸಾಂಸ್ಕೃತಿಕ ಮತ್ತು ನೈತಿಕ ಆಘಾತ:** 'ವ್ಯಾಲೆಂಟೈನ್ ಡೇ' ನೆಪದಲ್ಲಿ ಭಾರತೀಯ ಮಾರುಕಟ್ಟೆಯಲ್ಲಿ ಪಾಶ್ಚಾತ್ಯ ಕಂಪನಿಗಳು ಕೋಟ್ಯಂತರ ರೂಪಾಯಿಗಳನ್ನು ದೋಚುತ್ತಿವೆ. ಆದರೆ ಈ ಆರ್ಥಿಕ ಲೂಟಿಗಿಂತಲೂ ಭಯಾನಕವಾದದ್ದು ನಮ್ಮ 'ಸಾಂಸ್ಕೃತಿಕ ಲೂಟಿ'. ಈ ದಿನ ಸಾರ್ವಜನಿಕ ಸ್ಥಳಗಳಲ್ಲಿ ನಡೆಯುವ ಅಶ್ಲೀಲತೆ ಹಿಂದೂಗಳ 'ಲಜ್ಜಾರಕ್ಷಣೆ' ಎಂಬ ಮೌಲ್ಯಕ್ಕೆ ನೇರ ಆಘಾತವಾಗಿದೆ. 'ವ್ಯಾಲೆಂಟೈನ್ ಡೇ' ಹೆಸರಿನಲ್ಲಿ ಯುವಪೀಳಿಗೆಯನ್ನು ವ್ಯಸನ ಮತ್ತು ಅನೈತಿಕತೆಯ ಕತ್ತಲೊಳಗೆ ತಳ್ಳಲಾಗುತ್ತಿದೆ. ಸಂಯಮ ಮತ್ತು ಬ್ರಹ್ಮಚರ್ಯದ ಮಹತ್ವವನ್ನು ಸಾರಿದ ಭೂಮಿಯಲ್ಲಿ ಇಂತಹ 'ಡೇ ಸಂಸ್ಕೃತಿ'ಯನ್ನು ಹೊಗಳುವುದು ಹಿಂದೂ ಧರ್ಮದ ಮೂಲ ತತ್ವಗಳ ಮೇಲಿನ ದೊಡ್ಡ ದಾಳಿ. ಇದು ಒಂದು ರೀತಿಯ 'ವೈಚಾರಿಕ ಗುಲಾಮಗಿರಿ'ಯಾಗಿದ್ದು, ಯುವಕರನ್ನು ತಮ್ಮ






ಮೂಲಗಳಿಂದ ದೂರ ಮಾಡುವ ಕೆಲಸ ಮಾಡುತ್ತಿದೆ.

**3. 365 ದಿನಗಳ ಸಂಬಂಧವೇ ? ಅಥವಾ ಒಂದೇ ದಿನದ ನಾಟಕವೇ ?** ಪಾಶ್ಚಾತ್ಯ ದೇಶಗಳಲ್ಲಿ ಕುಟುಂಬ ವ್ಯವಸ್ಥೆ ಕುಸಿದಿರುವುದರಿಂದಲೇ ಅಲ್ಲಿಗೆ 'ಮದರ್ಸ್ ಡೇ', 'ವ್ಯಾಲೆಂಟೈನ್ ಡೇ'ಮುಂತಾದ ದಿನಗಳನ್ನು ಆಚರಿಸಬೇಕಾದ ಪರಿಸ್ಥಿತಿ ಬಂದಿದೆ. ನಮ್ಮ ಸಂಸ್ಕೃತಿ 'ವಸುಧೈವ ಕುಟುಂಬಕಮ್' ಎಂಬ ಭಾವನೆಯನ್ನು ಸಾರುತ್ತದೆ. ನಮಗೆ ಪ್ರೀತಿಗಾಗಿ ಒಂದೇ ದಿನದ ಮುಹೂರ್ತದ ಅವಶ್ಯಕತೆಯೇ ಇಲ್ಲ. ತಾಯಿ-ತಂದೆ, ಸಹೋದರ-ಸಹೋದರಿ, ಗುರು, ರಾಷ್ಟ್ರ ಮತ್ತು ಧರ್ಮದ ಮೇಲಿನ ನಿರಪೇಕ್ಷ ಪ್ರೀತಿ ಪ್ರತಿಕ್ಷಣವೂ ನಮ್ಮ ಉಸಿರಿನೊಂದಿಗೆ ಇರಬೇಕು ಇದು ನಮ್ಮ ಸಂಸ್ಕೃತಿಯ ಬೋಧನೆ. ಒಂದೇ ಗುಲಾಬಿ ಹೂವಿನೊಳಗೆ ಪ್ರೀತಿಯನ್ನು ಸೀಮಿತಗೊಳಿಸುವುದು ಪ್ರೀತಿಯ ಅವಮಾನವೇ ಸರಿ. ಹಿಂದೂ ಧರ್ಮದಲ್ಲಿ ಸಂಬಂಧಗಳು 'ಕಾಂಟ್ರಾಕ್ಟ್' ಅಲ್ಲ, ಅವು 'ಸಂಸ್ಕಾರ'.


**4. 'ಯೂಸ್ ಅಂಡ್ ತ್ರೋ'ಸಂಸ್ಕೃತಿ ವಿರುದ್ಧ ಏಳು ಜನ್ಮಗಳ ಬಂಧನ:** ಇಂದಿನ 'ಡೇ ಸಂಸ್ಕೃತಿ'ಮಾನವ ಭಾವನೆಗಳ ಮಾರುಕಟ್ಟೆಯಾಗಿದೆ. ಪಾಶ್ಚಾತ್ಯ ಸಂಸ್ಕೃತಿ "Use and Throw' ತತ್ವದ ಮೇಲೆ ನಿಂತಿರುವುದರಿಂದ ಅಲ್ಲಿನ ಸಂಬಂಧಗಳು ದೀರ್ಘಕಾಲ ಉಳಿಯುವುದಿಲ್ಲ ಮತ್ತು ವಿಚ್ಛೇದನ ಪ್ರಮಾಣ ಅತ್ಯಧಿಕವಾಗಿದೆ. ಇಂದಿನ 'ವ್ಯಾಲೆಂಟೈನ್'ನಾಳೆ ಮತ್ತೊಬ್ಬನಾಗಿರುತ್ತಾನೆ. ಇದಕ್ಕೆ ವಿರುದ್ಧವಾಗಿ ಭಾರತೀಯ ಸಂಸ್ಕೃತಿ 'ತ್ಯಾಗ ಮತ್ತು ಸಮರ್ಪಣೆ'ಯನ್ನು ಕಲಿಸುತ್ತದೆ. ಇಲ್ಲಿ ಪತಿ-ಪತ್ನಿಯ ಸಂಬಂಧ ಕೇವಲ ಶಾರೀರಿಕ ಅಗತ್ಯಗಳ ಮೇಲೆ ಅಲ್ಲ, ಅದು 'ಏಳು ಜನ್ಮಗಳ ಬಂಧನ'ವೆಂದು ಪರಿಗಣಿಸಲಾಗಿದೆ. ಕ್ಷಣಿಕ ಸುಖಕ್ಕಾಗಿ ಜೀವನವನ್ನೇ ಹಾಳುಮಾಡುವ ಈ ವಿಕೃತ ಸಂಸ್ಕೃತಿಯ ಅಗತ್ಯ ಭಾರತೀಯರಿಗೆ ಇಲ್ಲ.

**5. ಆನಂದದ ನಿಜವಾದ ವ್ಯಾಖ್ಯಾನ : ಭೋಗವೇ ? ಅಥವಾ ತ್ಯಾಗವೇ?:** ಅಧ್ಯಾತ್ಮಶಾಸ್ತ್ರ ಹೇಳುವುದೇನೆಂದರೆ, ಸುಖವು ಭೋಗದಲ್ಲಿಇಲ್ಲ, ತ್ಯಾಗದಲ್ಲಿ ಇದೆ. ಯುವಪೀಳಿಗೆಗೆ ದುಬಾರಿ ಹೋಟೆಲ್‌ಗಳಿಗೆ ಹೋಗುವುದು ಅಥವಾ ಪಬ್‌ಗಳಲ್ಲಿ ಪಾರ್ಟಿ ಮಾಡುವುದೇ ಆನಂದವೆಂದು ತೋರುತ್ತದೆ; ಆದರೆ ಆ ಆನಂದ ರಜ-ತಮ್ಮ ಸ್ವಭಾವದ್ದಾಗಿದ್ದು, ಅಂತ್ಯದಲ್ಲಿ ದುಃಖವನ್ನೇ ಕೊಡುತ್ತದೆ. ಇದಕ್ಕೆ ವಿರುದ್ಧವಾಗಿ ಸಾಧನೆಯ ಮೂಲಕ ದೊರೆಯುವ ಆನಂದ ಸಾತ್ವಿಕವಾಗಿರುತ್ತದೆ. ತಾಯಿ-ತಂದೆಯ ಪಾದಗಳಿಗೆ ನಮಿಸಿ ದೊರೆಯುವ ಸಾತ್ವಿಕ ತೃಪ್ತಿ ಪಾಶ್ಚಾತ್ಯ ಉತ್ಸವಗಳಲ್ಲಿ ಎಂದಿಗೂ ಸಿಗಲಾರದು. ಆದ್ದರಿಂದ 'ವ್ಯಾಲೆಂಟೈನ್ ಡೇ' ಬದಲಾಗಿ 'ಮಾತೃ-ಪಿತೃ ಪೂಜನ ದಿನ'ಆಚರಿಸುವ ಮೂಲಕ ನಮ್ಮ ಸಂಸ್ಕೃತಿಯನ್ನು ರಕ್ಷಿಸಬೇಕು.

**6. 'ಕ್ರಿಯೆ' ಮತ್ತು 'ಸಾಧನೆ'ಯೇ ಕಾಲದ ಅಗತ್ಯ:** ಕೇವಲ ವಿರೋಧ ವ್ಯಕ್ತಪಡಿಸುವುದರಿಂದ ಏನೂ ಆಗುವುದಿಲ್ಲ; ನಾವು ಕ್ರಿಯಾಶೀಲರಾಗಬೇಕು. ಸನಾತನ ಸಂಸ್ಥೆ ಸ್ವಧರ್ಮಾಭಿಮಾನವನ್ನು ಜಾಗೃತಗೊಳಿಸುವ ಕಾರ್ಯ ಮಾಡುತ್ತಿದೆ. ಯುವಕರು ಪಾಶ್ಚಾತ್ಯ ವಿಕೃತಿಗಳಿಗೆ ಬಲಿಯಾಗದೇ ಧರ್ಮಾಚರಣೆಯಲ್ಲಿ ತೊಡಗಬೇಕು. ಸಾಧನೆ ಮಾಡಿದಾಗ ಮಾತ್ರ ನಿಜವಾದ ಮತ್ತು ಸುಳ್ಳು ಪ್ರೀತಿಯ ನಡುವಿನ ವ್ಯತ್ಯಾಸ ಅರಿಯಲು ಸಾಧ್ಯ. ನಮ್ಮೊಳಗಿನ ಪ್ರೇಮಭಾವವನ್ನು ಹೆಚ್ಚಿಸಲು ಈಶ್ವರಭಕ್ತಿ ಅಗತ್ಯ, ಏಕೆಂದರೆ ಈಶ್ವರನೇ ಪ್ರೀತಿಯ ನಿಜವಾದ ಮೂಲ.

### ಭಾರತಕ್ಕೆ ಬೇಕಾಗಿರುವುದು 'ರಾಧೆ-ಕೃಷ್ಣರ' ಆಕರ್ಷಣೆ !

**ನಮ್ಮ ವಿರೋಧ ಪ್ರೀತಿಗೆ ಅಲ್ಲ; ಪ್ರೀತಿಯ ಹೆಸರಿನಲ್ಲಿ ನಡೆಯುವ 'ಸ್ವೈರಾಚಾರ' ಮತ್ತು 'ಧರ್ಮದ ಮೇಲಿನ ಆಘಾತ'ಕ್ಕೆ. ಭಾರತಕ್ಕೆ ಇಂದು 'ರೋಮಿಯೋ-ಜುಲಿಯೆಟ್'ರ ವಿಕೃತ, ಆತ್ಮಘಾತಕ ಪ್ರೀತಿಯ ಅಗತ್ಯವಿಲ್ಲ; ಶ್ರೀಕೃಷ್ಣ ಮತ್ತು ರಾಧೆಯ 'ಆತ್ಮಿಕ', 'ದೈವಿಕ' ಪ್ರೀತಿಯೇ ಅಗತ್ಯ. ಯುವಪೀಳಿಗೆ ಈ ಸಾಂಸ್ಕೃತಿಕ ಆಕ್ರಮಣವನ್ನು ಗುರುತಿಸಿ ತನ್ನ ಮಹಾನ್ ಹಿಂದೂ ಸಂಸ್ಕೃತಿಯನ್ನು ಅನುಸರಿಸುವುದೇ ರಾಷ್ಟ್ರರಕ್ಷಣೆಯ ಮೊದಲ ಹೆಜ್ಜೆ.**




# ಬದುಕು ಇಷ್ಟೇನೆ



ಹೆಚ್.ಎಸ್. ಪ್ರತಿಮಾ
• ಉದಯವಾಹಿನಿ, ವಿಶೇಷ

ಸತತ ಪ್ರಯತ್ನಗಳ ಫಲವು ಸಿಗದಲೆ
ನಡೆಯುತ ಸಾಗುತಿದ್ದರು
ತಡೆಯುತಲೆ ಬೇಕು ಬೇಡಗಳ ಆಲಿಸುತ
ಸಾಗುತಲೆ ಧೈರ್ಯವೆಂಬ ಅಸ್ತ್ರವ ಹಿಡಿಯುತಲೆ....
ಕಳೆಯುತಲೇ ಕಾಲವ ನಡೆಸುತಲೆ
ಜೀವನ ಶೂನ್ಯ ವೆಂದು ನಾವು ಅರಿಯದಲೆ
ಸಾಗುವ ನಾವು ಸಫಲತೆಯ ಪಡೆಯುತಲೆ
ಬಾಳೆಂದು ಕೊನೆಗೆ ಅಂತ್ಯವೆಂದು ತಿಳಿಯುತಲೆ....
ನಾವು ಬಾಳುವ ಎಲ್ಲಾ ಒಂದಾಗುತ್ತಲೇ
ಜೀವನದ ಪಾಠವನು ಕಲಿಯುತಲೆ
ಕಳಿಸುತ್ತಲೆ ಹಿರಿಯರಿಂದ ಕಿರಿಯರು
ಎಂದು ಸಾಗುತಲೆ ಸಂಸ್ಕೃತಿಯ ಉಳಿಸುವ
ನಾವು ಕೈಜೋಡಿಸುತಲೆ....
ಬದುಕು ಇಷ್ಟೇನೆ ಎಂಬುದರ ಗಮನವಿರಲಿ
ಎಂತಹ ಸಮಸ್ಯೆಗಳ ಎಲ್ಲಾ ಎದುರಿಸುತಲಿ
ದೈವ, ಪ್ರಕೃತಿಯ ವಿರುದ್ಧ ನಡೆಯದಲೆ
ನೀ ಸಾಗು ಜಗದಿ ಮಾನವನಾಗುತಲೆ.....



# ಗಡಿಬಿಡಿಯಲ್ಲಿ ಮಾಡ್ಬೋದು ಪನೀರ್ ಬುರ್ಜಿ ಪಕ್ಕಾ ಟೇಸ್ಟಿಯಾಗಿರುತ್ತೆ

ಪನೀರ್ ತಿನ್ಬೇಕು ಅನ್ನೋರಿಗೆ ಈ ರೆಸಿಪಿ ತುಂಬಾ ಇಷ್ಟ ಆಗುತ್ತೆ. ಸಾಮಾನ್ಯವಾಗಿ ಪನೀರ್ ಬಳಸಿ ಪನೀರ್ ಕರ್ರಿ, ಪನೀರ್ 65, ಪನೀರ್ ಮಂಚೂರಿಯನ್ ಮಾಡಿ ತಿನ್ನೋದು ಅಷ್ಟೆ. ಅದೇ ಪನೀರ್ ಬುರ್ಜಿ ಮಾಡಿದರೆ ಚಪಾತಿ, ಅನ್ನದ ಜೊತೆಗೆ ತಿನ್ನಬಹುದು. ಮತ್ತೆ ಕಡಿಮೆ ಸಮಯದಲ್ಲಿ ಸುಲಭವಾಗಿ ಮಾಡಬಹುದು. ಆಫೀಸ್ ಹೋಗುವವರು ಗಡಿಬಿಡಿಯಲ್ಲಿಯೂ ಕೂಡ ಇದನ್ನು ಮಾಡಿಕೊಳ್ಳಬಹುದು. 2 ನಿಮಿಷ ಸಾಕು.. ಥಟ್ ಅಂತ ಮಾಡಿಬಿಡಬಹುದು.

**ಬೇಕಾಗುವ ಸಾಮಾಗ್ರಿಗಳು:** ಈರುಳ್ಳಿ, ಟೊಮ್ಯಾಟೋ, ಮೆಣಸಿನಕಾಯಿ, ಉಪ್ಪು, ಪನೀರ್, ಎಣ್ಣೆ

**ಮಾಡುವ ವಿಧಾನ:** ಮೊದಲಿಗೆ ಈರುಳ್ಳಿ, ಟೊಮ್ಯಾಟೋ ಹಾಗೂ ಮೆಣಸಿನಕಾಯಿಯನ್ನು ಆದಷ್ಟು ಚಿಕ್ಕದಾಗಿ ಕತ್ತರಿಸಿಕೊಳ್ಳಬೇಕು. ಬುರ್ಜಿ ಎಷ್ಟು ಮಾಡಬೇಕು ಎನ್ನುವ ಆಧಾರದ ಮೇಲೆ ಪನೀರ್ ತೆಗೆದುಕೊಂಡು, ತುರಿದುಕೊಳ್ಳಬೇಕು. ಬಳಿಕ ಒಂದು ಕಡಾಯಿಗೆ ಎಣ್ಣೆ ಹಾಕಿ.. ಕಾದ ನಂತರ ಅದಕ್ಕೆ ಈರುಳ್ಳಿ ಹಾಕಿ ಹುರಿದುಕೊಳ್ಳಿ.



ಬಣ್ಣ ತಿರುಗುವವರೆಗೂ ಹುರಿದುಕೊಂಡು ಅದಕ್ಕೆ ಮೆಣಸಿಕಾಯಿ ಹಾಕಿಕೊಳ್ಳಿ. ಬಳಿಕ ಟೊಮ್ಯಾಟೋ ಹಾಕಿ. ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಚೆನ್ನಾಗಿ ಹುರಿಯಿರಿ.

ಈ ಮಿಶ್ರಣಕ್ಕೆ ಅರಿಶಿಣ ಹಾಕಿ, ಪನೀರ್ ಹಾಕಿಕೊಂಡು ಹುರಿದರೆ ಪನೀರ್ ಬುರ್ಜಿ ತಯಾರಾಗುತ್ತದೆ. ಒಂದು ವೇಳೆ ಗ್ರೇವಿ ರೂಪದಲ್ಲಿ ಬೇಕಿದ್ದರೆ ಹೆಚ್ಚು ಟೊಮ್ಯಾಟೋ ಹಾಕಿದರೆ ಸಾಕು, ಗ್ರೇವಿ ಮಾಡಿಕೊಳ್ಳಬಹುದು.

# ನಾವು (Modern Verse)



ಬಿ. ವಿ. ಹಿರೇಮಠ
• ಉದಯವಾಹಿನಿ, ವಿಶೇಷ

ನೀನು ನನ್ನನ್ನು ಬದಲಾಯಿಸಲ್ಲ,
ನಾನೂ ನಿನ್ನನ್ನು ನಿಯಂತ್ರಿಸಲ್ಲ?
ಆದರೂ ನಾವು ಒಬ್ಬರೊಳೊಬ್ಬರು
ಬೆಳೆದಿರುತ್ತೇವೆ. WhatsAppನಲ್ಲಿ ''Ok''
ಎಂದ ಮಾತಿನ ಹಿಂದೆ ಮನಸ್ಸಿನ ಸಾವಿರ ಅರ್ಥಗಳು,
Seen ಮಾಡಿದ ಮೌನದಲ್ಲೂ ವಿಶ್ವಾಸ ಕಳೆದುಹೋಗದ
ಧೈರ್ಯ. Career, ಕನಸು, ಆತಂಕ? ಎಲ್ಲಕ್ಕೂ
Space ಇದೆ, ಆದರೆ Fallback ಯಾವಾಗಲೂ
''ನೀನು'' ಅನ್ನೋ ಭರವಸೆ.
Argument ಆಗುತ್ತದೆ, Ego ಅಲ್ಲ?
Understanding ಗೆ ಬ್ರೇಕ್.
Sorry ಒಂದು ಪದವಲ್ಲ, Relationship
ಉಳಿಸುವ shortcut.
ಪ್ರೀತಿ ಎಂದರೆ Filter ಇಲ್ಲದ reality,
Perfect life ಅಲ್ಲ? Honest life.
ಲಾಕ್‌ಸ್ಕ್ರೀನ್ ಫೋಟೋ ಅಲ್ಲ, Hard times
ನಲ್ಲಿ ಕೈ ಹಿಡಿಯುವ ಕ್ಷಣವೇ ನಿಜವಾದ Couple
Goals. ನಾವು Status ಅಲ್ಲ, Story.

# ಗಡ್ಡ-ಮೀಸೆ ಬೆಳ್ಳಗೆ ಆಗ್ತಾ ಇದ್ಯಾ ? ಈ ಮನೆಮದ್ದುಗಳನ್ನು ಅನುಸರಿಸಿ ಸಾಕು

ವಯಸ್ಸಿಗೆ ತಕ್ಕಂತೆ ಮುಖದ ಸೌಂದರ್ಯ, ತಲೆಕೂದಲಿನಲ್ಲಿ ಬದಲಾವಣೆಗಳು ಕಾಣಿಸಿಕೊಳ್ಳುವುದು ಸಹಜ ಪ್ರಕ್ರಿಯೆ.ಸಾಮಾನ್ಯವಾಗಿ ಮನುಷ್ಯನ ಹದಿಹರೆಯದ ವಯಸ್ಸಿನಲ್ಲಿ ತಲೆ ಕೂದಲು, ಗಡ್ಡ, ಮೀಸೆ ಎಲ್ಲವೂ ಕಪ್ಪಾಗಿರುತ್ತದೆ. ಇನ್ನು 25 – 30 ವರ್ಷದ ಆಸುಪಾಸಿನಲ್ಲಿ ತಲೆಯಲ್ಲಿ ಅಲ್ಲೊಂದು ಇಲ್ಲೊಂದು ಬಿಳಿ ಕೂದಲು ಕಾಣಿಸಿಕೊಳ್ಳಲು ಪ್ರಾರಂಭವಾಗುತ್ತದೆ.

ಜೊತೆಗೆ ಗಡ್ಡ ಮೀಸೆಯಲ್ಲಿಯೂ ಕೂಡ ಬಿಳಿಕೂದಲು ಇಣುಕುತ್ತಿರುತ್ತವೆ. ಇನ್ನು ಕೆಲವರಿಗೆ ಸಣ್ಣ ವಯಸ್ಸಿನಲ್ಲಿಯೇ ಈ ಸಮಸ್ಯೆ ಕಾಣಿಸಿಕೊಳ್ಳಲು ಶುರುವಾಗುತ್ತದೆ, ಹೀಗಾಗಿ ಇದರಿಂದ ಉಂಟಾಗುವ ಮುಜುಗರವನ್ನು ತಪ್ಪಿಸುವುದಕ್ಕಾಗಿ ಪ್ರತಿ ದಿನ ಶೇವಿಂಗ್ ಮಾಡಲೇಬೇಕಾದ ಅನಿವಾರ್ಯತೆ ಎದುರಾಗುತ್ತದೆ, ಇಲ್ಲಾಂದ್ರೆ ಆಗಾಗ ಹೇರ್ ಡೈ ಮಾಡಬೇಕಾಗುತ್ತದೆ.

**ನೆಲ್ಲಿಕಾಯಿ ಬಳಸಿ ಪುರುಷರ ಗಡ್ಡದ ಕೂದಲನ್ನು ಕಪ್ಪಾಗಿಸಲು ನೆಲ್ಲಿಕಾಯಿ ಬಳಕೆ:** ಇತ್ತೀಚಿನ ದಿನಗಳಲ್ಲಿ ಸಣ್ಣ ವಯಸ್ಸಿನ ಯುವಕರಲ್ಲಿ ಗಡ್ಡ ಮೀಸೆ ಅಕಾಲಿಕ ಬೂದು ಬಣ್ಣಕ್ಕೆ ತಿರುಗುವ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಕೆಲವರು ಈ ಬಿಳಿ ಕೂದಲನ್ನು ನಿವಾರಿಸಲು, ಹೇರ್ ಡೈ ಮಾಡಲು ಮುಂದಾಗುತ್ತಿದ್ದರೆ, ಇನ್ನೂ ಕೆಲವರು ಪ್ರತಿ ದಿನ ಶೇವಿಂಗ್ ಮಾಡಿ ಕೊಳ್ಳುತ್ತಾರೆ.

ನೋಡಿ ಈ ಸಮಸ್ಯೆಗೆ ಮಾರ್ಕೆಟ್‌ನಲ್ಲಿ ಹಲವಾರು ಬಗೆಯ ಕ್ರೀಮ್, ಹೇರ್ ಡೈಗಳು ಲಭ್ಯವಿದ್ದರೂ, ನೈಸರ್ಗಿಕವಾಗಿ ಮನೆ ಮದ್ದುಗಳನ್ನು ಬಳಸಿಕೊಂಡ ಇದಕ್ಕೆ ಪರಿಹಾರ ಕಂಡುಕೊಳ್ಳಬಹುದು. ಆದರೆ ಇದಕ್ಕೆ ಸ್ವಲ್ಪ ತಾಳ್ಮೆ ಬೇಕಾಗುತ್ತದೆ ಅಷ್ಟೇ! ಈ ಬಗ್ಗೆ ಕಂಟೆಂಟ್ ಕ್ರಿಯೇಟರ್ ದಶಮೇಶ್ ರಾವ್ ಅವರು ಆಮ್ಲ ಅಥವಾ ನೆಲ್ಲಿಕಾಯಿ ಬಳಸಿ ಪುರುಷರ ಗಡ್ಡದ ಕೂದಲನ್ನು ಮತ್ತೆ ಕಪ್ಪು ಬಣ್ಣಕ್ಕೆ ತಿರುಗಿಸುವುದು ಹೇಗೆ ಎನ್ನುವುದರ ಬಗ್ಗೆ ತಿಳಿಸಿಕೊಟ್ಟಿದ್ದಾರೆ, ಮುಂದೆ ನೋಡುತ್ತಾ ಹೋಗೋಣ

**ಆಯುರ್ವೇದದಲ್ಲಿ ಆಮ್ಲಾ ಅಥವಾ ನೆಲ್ಲಿಕಾಯಿಯ ಪಾತ್ರ:** ಆಯುರ್ವೇದದಲ್ಲಿ ಆಮ್ಲಾ ಅಥವಾ ನೆಲ್ಲಿಕಾಯಿಯನ್ನು 'ಕೇಶ್ಯ' (ಕೂದಲಿಗೆ ಒಳ್ಳೆಯದು) ಎಂದು ಪರಿಗಣಿಸಲಾಗುತ್ತದೆ. ಇದರಲ್ಲಿ ವಿಟಮಿನ್ ಸಿ ಮತ್ತು ಆಂಟಿ ಆಕ್ಸಿಡೆಂಟ್‌ಗಳು ಸಮೃದ್ಧವಾಗಿವೆ.

ಇದು ಕೂದಲಿನ ನೈಸರ್ಗಿಕ ಬಣ್ಣವನ್ನು ಕಾಪಾಡಿಕೊಳ್ಳಲು ಮತ್ತು ಬೂದು ಕೂದಲನ್ನು ಮತ್ತೆ ಕಪ್ಪು ಬಣ್ಣಕ್ಕೆ ತಿರುಗಿಸಲು ಸಹಾಯ ಮಾಡುತ್ತದೆ. ಇಂದು, ಈ ಪರಿಹಾರವನ್ನು ಹೇಗೆ ಬಳಸುವುದು ಮತ್ತು ಅದರ ಪ್ರಯೋಜನಗಳೇನು ಎಂಬುದನ್ನು ನೋಡುತ್ತಾ ಹೋಗೋಣ .

**ಮೊದಲಿಗೆ ತಾಜಾ ಆಮ್ಲಾ ಅಥವಾ ನೆಲ್ಲಿಕಾಯಿ ತೆಗೆದುಕೊಳ್ಳಿ:** ಈ ಮನೆಮದ್ದನ್ನು ರೆಡಿ ಮಾಡಲು ಮೊದಲಿಗೆ ನಿಮಗೆ ತಾಜಾ ಆಮ್ಲಾ ಅಥವಾ ನೆಲ್ಲಿಕಾಯಿ ಬೇಕಾಗುತ್ತದೆ. ಆಮ್ಲಾವನ್ನು ತೊಳೆದು ಸಣ್ಣ ತುಂಡುಗಳಾಗಿ ಕತ್ತರಿಸಿ. ಆಮ್ಲಾದಲ್ಲಿರುವ ನೈಸರ್ಗಿಕ ಪದಾರ್ಥಗಳು ಕೂದಲಿನ ಬೇರುಗಳನ್ನು ಪೋಷಿಸುತ್ತವೆ. ತಾಜಾ ಆಮ್ಲಾ ಲಭ್ಯವಿಲ್ಲದಿದ್ದರೆ, ನೀವು ಉತ್ತಮ ಗುಣಮಟ್ಟದ ಆಮ್ಲಾ ಪುಡಿ ಯನ್ನು ಸಹ ಬಳಸಬಹುದು, ಆದರೆ ತಾಜಾ ರಸದ ಫಲಿತಾಂಶಗಳು



ವೇಗವಾಗಿ ಕಂಡುಬರುತ್ತವೆ.



**ಮಿಕ್ಸರ್‌ನಲ್ಲಿ ಪುಡಿಮಾಡಿ ಪೇಸ್ಟ್ ಮಾಡಿ:** ಆಮ್ಲಾ ತುಂಡುಗಳನ್ನು ಮಿಕ್ಸರ್ ನಲ್ಲಿ ಪುಡಿಮಾಡಿ ಪೇಸ್ಟ್ ಮಾಡಿ. ಈ ಪೇಸ್ಟ್ ಅನ್ನು ಸ್ಟ್ರೈನರ್ ಅಥವಾ ಹತ್ತಿ ಬಟ್ಟೆಯಲ್ಲಿ ಸುರಿಯಿರಿ ಮತ್ತು ಅದರ ಶುದ್ಧ ರಸ ವನ್ನು ಹೊರತೆಗೆಯಲು ಅದನ್ನು ಒತ್ತಿರಿ. ಈಗ ಈ ರಸವನ್ನು ಗಡ್ಡದ ಬಿಳಿ ಕೂದಲಿಗೆ ಹಚ್ಚಲು ಸಿದ್ಧವಾಗಿದೆ. ಈ ಪ್ರಕ್ರಿಯೆಯು ತುಂಬಾ ಸುಲಭ ಮತ್ತು ಇದಕ್ಕಾಗಿ ನೀವು ಯಾವುದೇ ಹೆಚ್ಚುವರಿ ಹಣವನ್ನು ಖರ್ಚು ಮಾಡುವ ಅಗತ್ಯವಿಲ್ಲ.



**ಗಡ್ಡದ ಮೇಲೆ ನೆಲ್ಲಿಕಾಯಿ ರಸವನ್ನು ಹಚ್ಚಿ:** ಈ ಆಮ್ಲಾ ರಸವನ್ನು ಹತ್ತಿಯ ಸಹಾಯದಿಂದ ನಿಮ್ಮ ಗಡ್ಡದ ಬಿಳಿ ಕೂದಲು ಮತ್ತು ಬೇರುಗಳಿಗೆ ಹಚ್ಚಿ. ಗಡ್ಡದ ಮೇಲೆ ಸುಮಾರು 1 ಗಂಟೆ ಬಿಡಿ, ಇದರಿಂದ ಕೂದಲು ಅದನ್ನು ಹೀರಿಕೊಳ್ಳುತ್ತದೆ. 1 ಗಂಟೆಯ ನಂತರ, ನಿಮ್ಮ ಮುಖವನ್ನು ಶುದ್ಧ ಅಥವಾ ಉಗುರು ಬೆಚ್ಚಗಿನ ನೀರಿನಿಂದ ತೊಳೆಯಿರಿ. ಉತ್ತಮ ಫಲಿತಾಂಶಕ್ಕೆ ವಾರದಲ್ಲಿ ಎರಡು ಮೂರು ಬಾರಿ ಮಾಡುತ್ತಾ ಬನ್ನಿ


**ಆಮ್ಲಾದಲ್ಲಿರುವ ವಿಟಮಿನ್ ಸಿ :** ಆಮ್ಲಾದಲ್ಲಿರುವ ವಿಟಮಿನ್ ಸಿ ಕೂದಲಿನಲ್ಲಿ ಕಾಲಜನ್ ಅನ್ನು ಹೆಚ್ಚಿಸುತ್ತದೆ, ಇದು ಕೂದಲು ಬೆಳವಣಿಗೆಯನ್ನು ವೇಗವಾಗಿ ಉತ್ತೇಜಿಸುತ್ತದೆ. ಇದರ ಉತ್ಕರ್ಷಣ ನಿರೋಧಕಗಳು ಕೂದಲಿನ ಅಕಾಲಿಕ ಬೂದು ಬಣ್ಣಕ್ಕೆ ಕಾರಣವಾಗುವ ಫ್ರೀ ರ್ಯಾಡಿಕಲ್ಸ್ ವಿರುದ್ಧ ಹೋರಾಡುತ್ತವೆ. ನಿಯಮಿತ ಬಳಕೆಯಿಂದ, ಗಡ್ಡದ ಕೂದಲು ಕಪ್ಪಾಗುವುದು ಮಾತ್ರವಲ್ಲದೆ, ದಪ್ಪ, ಮೃದು ಮತ್ತು ಹೊಳೆಯು ವಂತಾಗುತ್ತದೆ.

**ಸೋಪ್ ಅಥವಾ ಫೇಸ್ ವಾಶ್ ಬಳಸಬೇಡಿ:** ಈ ಪರಿಹಾರವನ್ನು ಬಳಸಿದ ನಂತರ ನಿಮ್ಮ ಮುಖವನ್ನು ತೊಳೆಯುವಾಗ, ನೀವು ಯಾವುದೇ ರೀತಿಯ ಸೋಪ್, ಫೇಸ್ ವಾಶ್ ಅನ್ನು ಬಳಸಲು ಬಯಸು ವುದಿಲ್ಲ ಎಂಬುದನ್ನು ನೆನಪಿಡಿ. ಸೋಪಿನಲ್ಲಿರುವ ರಾಸಾಯನಿಕಗಳು ಆಮ್ಲಾದ ನೈಸರ್ಗಿಕ ಪರಿಣಾಮಗಳನ್ನು ಕಡಿಮೆ ಮಾಡಬಹುದು. ಆಮ್ಲಾ ರಸವನ್ನು ತೊಳೆದ ನಂತರ ನಿಮ್ಮ ಚರ್ಮವು ಸ್ವಲ್ಪ ಒಣಗಿದಂತೆ ಭಾಸವಾದರೆ, ನೀವು ಅದರ ಮೇಲೆ ಸ್ವಲ್ಪ ತೆಂಗಿನ ಎಣ್ಣೆ ಅಥವಾ ಅಲೋವೆರಾ ಜೆಲ್ ಅನ್ನು ಹಚ್ಚಬಹುದು.

### ಈ ಮನೆಮದ್ದನ್ನು ಕೂಡ ಟ್ರೈ ಮಾಡಿ ನೋಡಿ

- **ಗಡ್ಡದ ಕೂದಲನ್ನು ಕಪ್ಪಾಗಿಸಲು, ತೆಂಗಿನ ಎಣ್ಣೆ, ಕರಿಬೇವಿನ ಎಲೆಗಳನ್ನು ಬಿಸಿ ಮಾಡಿ ಗಡ್ಡಕ್ಕೆ ಹಚ್ಚಬಹುದು. ತೆಂಗಿನ ಎಣ್ಣೆಯನ್ನು ಕಡಿಮೆ ಉರಿಯಲ್ಲಿ ಬಿಸಿ ಮಾಡಿ ಕರಿಬೇವು ಸೇರಿಸಿ.**
- **ಚೆನ್ನಾಗಿ ಕುದಿಸಿದ ನಂತರ, ಎಣ್ಣೆಯನ್ನು ಬಾಟಲಿಗೆ ಸೋಸಿ ಬೆಳ್ಳಗೆ ಆಗಿ ರುವ ಕೂದಲಿಗೆ ಹಚ್ಚಿ. ಈ ಎಣ್ಣೆಯಿಂದ ಮಸಾಜ್ ಮಾಡುವುದರಿಂದ ಕೂಡ ಪ್ರಯೋಜನವಾಗುತ್ತದೆ. ಇದು ನಿಮ್ಮ ಕೂದಲನ್ನು ಕಪ್ಪಾಗಿಸು ವುದು ಮಾತ್ರವಲ್ಲದೆ ದಪ್ಪವಾಗಿಸುತ್ತದೆ.**
- **ತೆಂಗಿನ ಎಣ್ಣೆ ಮತ್ತು ಆಮ್ಲಾ ಬಳಕೆ: ತೆಂಗಿನ ಎಣ್ಣೆ ಮತ್ತು ಆಮ್ಲಾ ಎಣ್ಣೆ ಎರಡೂ ಕೂದಲಿಗೆ ಪ್ರಯೋಜನಕಾರಿ. ನಿಮ್ಮ ಗಡ್ಡದ ಕೂದಲನ್ನು ಕಪ್ಪಾಗಿಸಲು ನೀವು ತೆಂಗಿನ ಎಣ್ಣೆ ಮತ್ತು ಆಮ್ಲಾ ಎಣ್ಣೆಯ ಮಿಶ್ರಣವನ್ನು ಬಳಸಬಹುದು.**
- **ಇದನ್ನು ಮಾಡಲು, 2-3 ಟೀ ಚಮಚ ತೆಂಗಿನ ಎಣ್ಣೆ ಮತ್ತು ಸಮಾನ ಪ್ರಮಾಣದ ಆಮ್ಲಾ ಎಣ್ಣೆಯನ್ನು ತೆಗೆದುಕೊಳ್ಳಿ. ಅದನ್ನು ಬಿಸಿ ಮಾಡಿ ನಂತರ, ಅದು ತಣ್ಣಗಾದ ನಂತರ, ಅದನ್ನು ನಿಮ್ಮ ಗಡ್ಡದ ಕೂದಲಿಗೆ ಹಚ್ಚಿ. 15-20 ನಿಮಿಷಗಳ ಕಾಲ ಹಾಗೆಯೇ ಬಿಡಿ ಮತ್ತು ನಂತರ ನಿಮ್ಮ ಮುಖ ಮತ್ತು ಗಡ್ಡದ ಕೂದಲನ್ನು ತೊಳೆಯಿರಿ.**
- **ಕಪ್ಪು ಅಥವಾ ಬಿಳಿಎಳ್ಳು: ಬಿಳಿ ಗಡ್ಡವನ್ನು ಕಪ್ಪಾಗಿಸಲು, ನೀವು ಕಪ್ಪು ಅಥವಾ ಬಿಳಿ ಎಳ್ಳನ್ನು ಕೂಡ ಬಳಸಬಹುದು. ಕಪ್ಪು ಎಳ್ಳನ್ನು ಒಂದು ಲೋಟ ನೀರಿನಲ್ಲಿ ನೆನೆಸಿ. ಬೆಳಗ್ಗೆ, ಪೇಸ್ಟ್ ಮಾಡಿ ನಿಮ್ಮ ಗಡ್ಡದ ಕೂದಲಿಗೆ ಹಚ್ಚಿ. ಒಣಗಲು ಬಿಡಿ. ಒಣಗಿದ ನಂತರ, ನಿಮ್ಮ ಕೂದಲನ್ನು ಚೆನ್ನಾಗಿ ತೊಳೆಯಿರಿ. ಈ ಪರಿಹಾರವು ನಿಮ್ಮ ಕೂದಲನ್ನು ಕಪ್ಪಾಗಿಸಲು ಪರಿಣಾಮಕಾರಿಯಾಗಿದೆ.**

# ಹಳಿಯಾಳ ಕುಡಿಯುವ ನೀರಿನ ಯೋಜನೆ ಕಾಮಗಾರಿ ಪೂರ್ಣ



• ಉದಯವಾಹಿನಿ ಹಳಿಯಾಳ

ಕಾಳಿ ನದಿಯಿಂದ ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಸಂಪೂರ್ಣಗೊಳ್ಳುವ ಹಂತದಲ್ಲಿದ್ದು, ಹಂತ ಹಂತವಾಗಿ ನೀರು ಸರಬರಾಜು ಮಾಡಲಾಗುವುದು ಎಂದು ಶಾಸಕ ಆರ್.ವಿ.ದೇಶಪಾಂಡೆ ಹೇಳಿದರು. ಈ ಯೋಜನೆಯಿಂದ 46 ಕೆರೆ 19 ಬಾಂದಾರಗಳಿಗೆ ನೀರು ತುಂಬಿಸಲಾಗುತ್ತಿದೆ. ಕುಡಿಯುವ ನೀರಿನ ಯೋಜನೆ ಕಾಮಗಾರಿ ಪೂರ್ಣಗೊಂಡಿದ್ದು, 113 ಗ್ರಾಮಗಳ ಪ್ರತಿ ಮನೆಗೆ ಕುಡಿಯುವ ನೀರು ಸರಬರಾಜು ಆಗಲಿದೆ. ಈಗಾಗಲೇ ಮುರ್ಕವಾಡ ಪಂಚಾಯಿತಿ ವ್ಯಾಪ್ತಿಯಲ್ಲಿ ನೀರಿನ ಯೋಜನೆಗೆ ಚಾಲನೆ ನೀಡಿ, ನೀರು ಸರಬರಾಜು ಮಾಡಲಾಗಿದೆ' ಎಂದು ತಿಳಿಸಿದರು. ಹಳಿಯಾಳ ಪುರಸಭೆಯಿಂದ ಕೈಗೊಂಡ ಒಳಚರಂಡಿ ಯೋಜನೆಯ ವ್ಯವಸ್ಥೆಯ ಕಾರ್ಯಾಚರಣೆಯ ನಿರ್ವಹಣೆಗೆ 5 ವರ್ಷ ಅವಧಿಗೆ ರೂ.10.60 ಕೋಟಿ ಅಂದಾಜು ವೆಚ್ಚದ ಪ್ರಸ್ತಾವ ಬಂದಿದೆ. ಹಳಿಯಾಳ, ದಾಂಡೇಲಿ ಹಾಗೂ ಜೋಯಿಡಾ ತಾಲ್ಲೂಕುಗಳಲ್ಲಿ ಒಟ್ಟು ರೂ.1.88 ಕೋಟಿ ವೆಚ್ಚದಿಂದ ನೂತನ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ.

**ಪ್ರತಿ ಮನೆಗೆ ಕುಡಿಯುವ ನೀರು**

ಹಳಿಯಾಳ ತಾಲ್ಲೂಕಿನ ಕಾವಲವಾಡ, ಬಿ.ಕೆ.ಹಳ್ಳಿ ಜೋಯಿಡಾ ತಾಲ್ಲೂಕಿನ ನಂದಿಗಾ. ಅನಮೋಡ, ಜಗಲಬೇಟ, ದಾಂಡೇಲಿಯ 2 ಸರ್ಕಾರಿ ಶಾಲಾ ಕೊಠಡಿಗಳ ದುರಸ್ತಿ ಕೈಗೊಳ್ಳಲಾಗುವುದು ಎಂದರು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಡಿಯಲ್ಲಿ ಹಳಿಯಾಳ ಮತ್ತು ಜೋಯಿಡಾ ತಾಲ್ಲೂಕುಗಳಲ್ಲಿ ರಸ್ತೆ ಹಾಗೂ ಸೇತುವೆಗಳ ಅಭಿವೃದ್ಧಿಗೆ ರೂ.6 ಕೋಟಿ ಅನುದಾನ ಮಂಜೂರಾಗಿದೆ. ಜೋಯಿಡಾ ತಾಲ್ಲೂಕು ಆಸ್ಪತ್ರೆಯಲ್ಲಿ ಸಂಸ್ಕರಣಾ ಘಟಕ ನಿರ್ಮಾಣ ಹಾಗೂ ರೂಫ್ ಶೀಟಿಂಗ್ ಅಳವಡಿಕೆಗೆ ರೂ.1.50 ಕೋಟಿ, ದಾಂಡೇಲಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಯ ದುರಸ್ತಿ ಮತ್ತು ಇತರೆ ದುರಸ್ತಿ ಕಾಮಗಾರಿಗಾಗಿ ರೂ.1.50 ಕೋಟಿ ಮಂಜೂರಾಗಿದೆ. ಜೋಯಿಡಾ ತಾಲ್ಲೂಕಿನ ಕಾಲುಸಂಕ ನಿರ್ಮಾಣಕ್ಕೆ ಅನುಮೋದನೆ ದೊರೆತು ರೂ.1 ಕೋಟಿ ಅನುದಾನ ಮಂಜೂರಾಗಿದೆ ಎಂದರು. ಆರೋಗ್ಯ ಸಹಾಯ ಹ್ಯಾವ್ ಎ ಹಾರ್ಟ್ ಪೌಂಡೇಶನ್‌ನಿಂದ ಶ್ರೇಯಾ ಜ್ಞಾನೇಶ್ವರ ದೇಸಾಯಿ ರಾಮನಗರ, ಸುಜಾತಾ ಮಂಜುನಾಥ ನಾವಲಗಿ ತೇರಗಾಂವ, ಮಹಾದೇವ ರಾಮಣ್ಣಾ ಹರಿಜನ ಹಂಪಿಹೊಳಿ ಅವರಿಗೆ ತಲಾ ರೂ.10,000 ಸಹಾಯ ಧನ ವಿತರಿಸಲಾಗಿದೆ. ಹಳಿಯಾಳದ ಶಿವಾಜಿ ಪದವಿ ಪೂರ್ವ ಕಾಲೇಜಿಗೆ ಟೋಯೋಟಾ ಕಿರ್ಲೋಸ್ಕರ ಮೋಟಾರ್ ಪ್ರೈ.ಲಿ. ಇವರ ಸಹಕಾರದಿಂದ ಅಟೋ ಮೊಬೈಲ್ ಪ್ರಯೋಗಾಲಯ ಸ್ಥಾಪಿಸಲಾಗಿದೆ' ಎಂದು ಮಾಹಿತಿ ನೀಡಿದರು.

## ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ ಕಾಮಗಾರಿ ಶಂಕು ಸ್ಥಾಪನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ ಹುಬ್ಬಳ್ಳಿ

ನವಲಗುಂದ ವಿಧಾನಸಭಾ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕೆಲಸಗಳಿಗೆ ಚಾಲನೆ ನೀಡಲಾಗಿದೆ. ಅಣ್ಣಿಗೇರಿಗೆ ಯುಜಿಡಿ ಮಾಡುವ ಕುರಿತು ಬಜೆಟ್ ನಲ್ಲಿ ಚರ್ಚಿಸಲಾಗುವುದು. ಈ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡಲು ಶ್ರಮಿಸಲಾಗುವುದು ಎಂದು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಹೇಳಿದರು.

ಶಿರಗುಪ್ಪಿ ಗ್ರಾಮದಲ್ಲಿ ಜಲ ಸಂಪನ್ಮೂಲ ಇಲಾಖೆ ಹಾಗೂ ಕರ್ನಾಟಕ ನೀರಾವರಿ ನಿಗಮ ನಿಯಮಿತ ಸಹಯೋಗದಲ್ಲಿ ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ ಕಾಮಗಾರಿ ಶಂಕು ಸ್ಥಾಪನೆ ಮತ್ತು ನವಲಗುಂದ ವಿಧಾನಸಭಾ ಕ್ಷೇತ್ರದ ವಿವಿಧ ಕಾಮಗಾರಿಗಳ ಉದ್ಘಾಟನಾ, ಭೂಮಿ ಪೂಜೆ ಸಮಾರಂಭವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಮೂರನೇ ಹಂತದ ಕೃಷ್ಣಾ ಮೇಲ್ದಂಡೆ ಯೋಜನೆ ಕೇಂದ್ರ ಸರ್ಕಾರದಿಂದ ನಿಂತು ಹೋಗಿದೆ. ಕೇಂದ್ರ ಸರ್ಕಾರ ಕೂಡಲೇ ಗೆಜೆಟ್ ನೋಟಿಫಿಕೇಶನ್ ಮಾಡಬೇಕು. ಮೇಕೆದಾಟು ಯೋಜನೆಗೆ ಸಹ ಕೇಂದ್ರ ಸರ್ಕಾರ ಅನುಮತಿ ನೀಡಬೇಕು. ಈಗಾಗಲೇ ತಮಿಳುನಾಡು ಸಲ್ಲಿಸಿದ್ದ ಅರ್ಜಿ ವಜಾ ಆಗಿದೆ. 65 ಟಿಎಂಸಿ ಕುಡಿಯುವ ನೀರಿನ ಯೋಜನೆ ಇದಾಗಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ರೂ.5300 ಕೋಟಿ ಕೊಡುತ್ತೇವೆ ಕೇಂದ್ರ ಸರ್ಕಾರ ಹೇಳಿತ್ತು. ಆದರೆ ಯಾವುದೇ ಹಣ ಇದುವರೆಗೂ ನೀಡಿಲ್ಲ. ರಾಷ್ಟ್ರೀಯ ಯೋಜನೆಯಾಗಿ ಮಾಡುತ್ತೇವೆ ಎಂದು ಬಣ್ಣಿಸಿದ್ದರು. 2005 ರಲ್ಲಿ ಮನರೇಗಾ ಯೋಜನೆ ಜಾರಿ ಮಾಡಲಾಗಿತ್ತು. ಆದರೆ ಕೇಂದ್ರ ಸರ್ಕಾರ ಕಳೆದ ಡಿಸೆಂಬರ್ ನಲ್ಲಿ ಈ ಯೋಜನೆಯನ್ನು ರದ್ದು ಮಾಡಿದೆ. ಯುವಕರಿಗೆ, ಮಹಿಳೆಯರಿಗೆ, ಕೆಲಸವಿಲ್ಲದವರಿಗೆ ಕೆಲಸ ಕೊಡುವ ಯೋಜನೆಯನ್ನು ಕೈ ಬಿಡಲಾಗಿದೆ ಎಂದು ಅವರು ತಿಳಿಸಿದರು. ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಕಾನೂನು ಸಚಿವ ಎಚ್.ಕೆ.ಪಾಟೀಲ್, ಕಾರ್ಮಿಕ ಸಚಿವ ಸಂತೋಷ ಲಾಡ್, ಶಾಸಕ ಎನ್.ಎಚ್.ಕೋನರಡ್ಡಿ ಮಾತನಾಡಿದರು.

### ತಾಕತ್ತು ಇದ್ದರೆ ಕ್ರಸ್ಟ್ ಗೇಟ್ ಗಳ ದುರಸ್ತಿ ಮಾಡಿ ರೈತರಿಗೆ ನೀರು ಬಿಡು ಉದ್ರಿ ಮಾತು ಬೇಡ..

# ಸಚಿವ ತಂಗಡಗಿಗೆ ಮಾಜಿ ಶಾಸಕ ಫುಲ್ ಕ್ಲಾಸ್

• ಉದಯವಾಹಿನಿ ಕಾರಟಗಿ

ನಿನಗೆ ತಾಕತ್ತು ಇದ್ದರೆ ಕ್ರಸ್ಟ್ ಗೇಟ್‌ಗಳ ದುರಸ್ತಿ ಮಾಡಿ ರೈತರಿಗೆ ನೀರು ಬಿಡು ಉದ್ರಿ ಮಾತು ಬೇಡ ಎಂದು ಮಾಜಿ ಶಾಸಕ ಬಸರಾಜ್ ದಡೆಸೂಗುರು ಅವರು ಸಚಿವ ಶಿವರಾಜ್ ತಂಗಡಗಿ ಅವರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಫೆಬ್ರವರಿ 8 ರಂದು ಸಚಿವರು ವಿವಿಧ ಕಾಮಗಾರಿಗಳ ಚಾಲನೆ ವೇಳೆ ಮಾಜಿ ಶಾಸಕರ ವಿರುದ್ಧ ವಾಗ್ದಾಳಿ ನಡೆಸಿದ್ದರು. ಕ್ರಸ್ಟ್ ಗೇಟ್ ದುರಸ್ತಿ ಬಗ್ಗೆ ಜಿಲ್ಲಾ ಅಧ್ಯಕ್ಷರು ಮಾಜಿ ಶಾಸಕರ ಅಪಪ್ರಚಾರ ಮಾಡುತ್ತಿದ್ದಾರೆ. ಅವರಿಗೆ ವಾಸ್ತವದ ಅರಿವಿಲ್ಲ, ರೈತರ ಬಗ್ಗೆ ಕಾಳಜಿ ಇದ್ದರೆ ಅಹೋರಾತ್ರಿ ಅನಿರ್ದಿಷ್ಟಾವಧಿ ಧರಣಿಯಲ್ಲಿ ಮಾಜಿ ಶಾಸಕರು ಮನೆಯಲ್ಲಿ ಯಾಕೆ ಮಲ್ಕೊಂಡಿದ್ರು ನೀನು ಬೈ ಚಾನ್ಸ್ ಎಂಎಲ್ಎ ಆಗಿದ್ದೀಯಾ ವಯಸ್ನಲ್ಲಿ ನಿನಗಿಂತ ಹಿರಿಯರಾದ ನನ್ನ ಬಗ್ಗೆ ಮಾತನಾಡುವಾಗ ಮಾತಿನ ಮೇಲೆ ಹಿಡಿತವಿರಲಿ, ಏಕವಚನದಲ್ಲಿ ಮಾತನಾಡುತ್ತೀಯ ನಿನಗೆ ಅರುವು ಇಲ್ಲ,ರೈಸ್ ಪಾರ್ಕ್‌ಗೆ 120ಕೋಟಿ ರೂ. ತಂದಿದ್ದು ನಾನು ಎಂದು ಮಾತನಾಡಿದ್ದರು.

ಸಚಿವರ ಈ ಮಾತುಗಳು ಮಾಜಿ ಶಾಸಕರನ್ನು ಕೆರಳಿಸಿವೆ, ಬಿಜೆಪಿ ಕಚೇರಿಯಲ್ಲಿ ಪತ್ರಿಕಾ ಮಾಧ್ಯಮದ ಸುದ್ದಿಗೋಷ್ಠಿಯನ್ನು ನಡೆಸಿ ಸಚಿವರಿಗೆ ಟಕ್ಕರ್ ನೀಡಿದ್ದಾರೆ. ಊರಾಗ ಒಂದು ಕೋಣ ಇರುತ್ತೈತಿ ಯಾವುದೆ ಗಬ್ಬು ಆದ್ರೇ ನಾನೇ ಅಂತೈತಿ ಹಂಗಾ, ಕುಮಾರಸ್ವಾಮಿಯವರು ಮುಖ್ಯಮಂತ್ರಿ ಇದ್ದಾಗ ನಬಾರ್ಡ್ ನಿಂದ 250 ಕೋಟಿ ಅನುದಾನ ತಂದು ರಾಣಿಬೆನ್ನೂರಿಗೆ 125 ಕೋಟಿ ರೈಸ್ ಪಾರ್ಕಿಗೆ 125 ಕೋಟಿ ಬಿಡುಗಡೆ ಮಾಡಿಸಿದ್ದು ನಾನು ಈ ಮನುಷ್ಯ ಸುಳ್ಳು ಹೇಳುತ್ತಿದ್ದಾನೆ.

ಕ್ರಸ್ಟ್ ಗೇಟ್ ದುರಸ್ಥಿ ಗೆ ನೀಡಿರುವ 10 ಕೋಟಿ ಸರ್ಕಾರ ವಾಪಸ್ ಪಡೆದಿದ್ದು ರೈತರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲ ಎಂದರು. ನೇರವಾಗಿ ರೈತರಿಗೆ ಕಾಳಜಿ ವಹಿಸಿರಿ, ನಿಮಗೆ ಬುದ್ಧಿ ಇಲ್ಲ ಎನ್ನುವ ಕಲ್ಪನೆ ನನಗಿದೆ, ಸಚಿವರು ಮೀಡಿಯಾದ ಮುಂದೆ ಹೀರೋ ನಿಜ ಜೀವನದಲ್ಲಿ ಅಲ್ಲ ಈ ಮಾತು ಕ್ಷೇತ್ರ ಜನ ಹೇಳುತ್ತಿದ್ದಾರೆ. ಕ್ರಸ್ಟ್ ಗೇಟು ಜೋಡಿಸಿವಲ್ಲಿ ವಿಳಂಬ ಮಾಡುತ್ತಿದ್ದೀರಿ. ಮಾರ್ಚ್ ಏಪ್ರಿಲ್ ನಲ್ಲಿ ಮುಂಗಾರು ಮಳೆ ಆರಂಭವಾದರೆ ಉಳಿದ ಗೇಟ್ ಗಳನ್ನು ನೀವು ಜೋಡಿಸಲಾಗುವುದಿಲ್ಲ ನಾವೆಲ್ಲ ಪ್ರಯತ್ನ ಮಾಡಿದ್ದೀವಿ ಆಗಲಿಲ್ಲ ಎಂದು ಪುನಃ ಮತ್ತೆ 2027ರಲ್ಲಿ ಬೇಸಿಗೆ ಬೆಳೆಗೆ ನೀರು ಬಿಡದೆ ರೈತರನ್ನು ಸಂಕಷ್ಟಕ್ಕೆ ಸಿಲುಕಿಸುವ ಕೆಲಸ ನೀವು ಮಾಡುತ್ತೀರಿ. ಒಂದು ವೇಳೆ ಟ್ರಸ್ಟ್ ಗೇಟ್‌ಗಳನ್ನು ಜೋಡಿಸದೆ ನಿರ್ಲಕ್ಷ್ಯ ಮಾಡಿದರೆ ನಾವು ಪಾದಯಾತ್ರೆ ಮಾಡುವುದರಲ್ಲಿ ಎರಡನೇ ಮಾತಿಲ್ಲ,

ನಿನಗೆ ಏನು ಮಾಡಬೇಕು ತಲೆಯಲ್ಲಿದೆ ಅದನ್ನೆಲ್ಲ ಮಾಡಿ ಬಿಡು ನಮ್ಮ ಕಾರ್ಯಕರ್ತರು ಹಂಗೆ ಮಾಡುತ್ತಾರೆ ಹಿಂಗೆ ಮಾಡುತ್ತಾರೆ ಎಲ್ಲಾ ಮಾಡಿ ಮುಗಿಸಿ ಮೀಡಿಯಾದ ಮುಂದೆ ಬಂದು ಹೇಳು, ನೀನು ಏಕವಚನದಲ್ಲಿ ಮಾತನಾಡಿಲ್ಲವೇ ಎಂದು ಸಚಿವರು ಮಾತನಾಡಿದ ವಿಡಿಯೋವನ್ನು ಪತ್ರಕರ್ತರಿಗೆ ತೋರಿಸಿದರು. ನೀನು ಹುಚ್ಚ,ನಾನು ಹುಚ್ಚರಿಗೆ ಉತ್ತರ ಕೊಡುವುದಿಲ್ಲ ಶ್ಯಾನರಿಗೆ ಉತ್ತರ ಕೊಡುತ್ತೇನೆ,

ಸಚಿವ ಶಿವರಾಜ್ ತಂಗಡಗಿಯವರು ಅವರು ನನ್ನ ಕಾಲು ತುಕ್ಕು ಹಿಡಿದಿದೆ,ಮತ್ತು ವಯಸ್ಸಿನಲ್ಲಿ ನನಗಿಂತ ಕಿರಿಯ ಇದ್ದಿ, ಎಂದು ಹೇಳುತ್ತಿಯಲ್ಲ ಹಿರಿಯ ಎನ್ನುವುದು ಪದಕ್ಕೆ ಅರ್ಥ ನಿನಗೆ ತಿಳಿಸಿದಿಯ? ಇಲ್ಲ. ನಿನ್ನಂತ ಚಿಲ್ಲರೆ ಮಾತಾಡುವಂತ ಮನುಷ್ಯನಿಗೆ ಗೌರವ ಎಲ್ಲಿದೆ, ಕ್ಷೇತ್ರದಲ್ಲಿ ನೀನೇನು ಆಕಾಶದಿಂದ ಇಳಿದು ಬಂದ್ದಿದೀಯಾ? 10 ಬಾರಿ ಶಾಸಕ ಸಚಿವರಾಗಿ ಬಂದವರು ಸಹಿತ ನಿನ್ನ ಹಾಗೆ ಮಾತನಾಡಿಲ್ಲ.... ಹಾಗೂ

ಊರು ಹೊರಗೆ ನಿನ್ನ ಆಸ್ತಿ ಡಿಮ್ಯಾಂಡ್‌ಗಾಗಿ ಮಿನಿ ವಿಧಾನಸೌಧ ನಿರ್ಮಾಣ ಮಾಡೋಕೆ ಹೊಂಟಿದ್ದೀರಿ ಊರಿನ ನಡುವೆ ಬಸ್ ಡಿಪೋ ಮಾಡೋಕೆ ತಯಾರಿ ನಡೆಸಿದ್ದೀರಿ ಜನ ಎಲ್ಲಾ ಇದನ್ನು ನೋಡುತ್ತಿದ್ದಾರೆ ಮರೆಯಬೇಡಿ ಎಂದು ಸಚಿವರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.



ಉದಯವಾಹಿನಿ ಚಿತ್ರ

**ಹೆದರೋದಿದ್ದರೆ ದಡೆಸುಗುರಲ್ಲಿ ಇರುತ್ತಿದ್ದೆ ಹೆದರಲಾರದಕ್ಕೆ ಜನರ ಮಧ್ಯೆ ಕನಕಗಿರಿಯಲ್ಲಿದ್ದೇನೆ**

**ಗೆದ್ದು ಮೂರು ವರ್ಷ ಆಗಿದೆ ಯಾವ ಕೆಲಸ ಮಾಡಿದ್ದೀ ನೀನು, ನಾನು ತಂದ ಕೆಲಸಗಳಿಗೆ ಕಮಿಷನ್ ಗಾಗಿ ನಿಲ್ಲಿಸಿದ್ದೀರಿ. ಸಮಾನಾಂತರ ಜಲಾಶಯ ಡಿಪಿಆರ್ ಮಾಡಿಸಿದ್ದು ನಿಜ ಸಾವಿರ ಕೋಟಿ ರೂಪಾಯಿಗಳ ಮೀಸಲಿರಿಸಿದ್ದು ನಿಜ ಆದರೆ ನಮ್ಮ ಸರ್ಕಾರ ಬಾರದ ಕಾರಣ ನೆನೆಗುದಿಗೆ ಬಿದ್ದಿದೆ,ನಾನು ಗೆದ್ದಿದ್ದರೆ ಇಷ್ಟೊತ್ತಿಗಾಗಲೇ ಸಮಾನಾಂತರ ಜಲಾಶಯಕ್ಕೆ ಅಡಿಗಲ್ಲು ಹಾಕುತ್ತಿದ್ದೆ, ಸಚಿವರು ಮೂರು ಸಲ ಶಾಸಕರು ಮೂರು ಬಾರಿ ಮಂತ್ರಿ ಅಂತ ಹೇಳುತ್ತಾರೆ, 2028ಕ್ಕೆ ಗೊತ್ತಾಗುತ್ತೆ ನಾಲ್ಕನೇ ಸಲ ಗೆಲ್ತಾನೋ ಸೋಲ್ತಾನೋ ಅನ್ನೋದು, ನನ್ನ ಬಗ್ಗೆ ಅಗುರವಾಗಿ ಮಾತಾಡ್ತಾನೆ ಅಂತ ಹೇಳ್ತಿರಲ್ಲ ಏನು ಅಂತದ್ದು ಹಗುರವಾಗಿ ಮಾತನಾಡಿದ್ದೇನೆ, ಏನ್ ನನ್ನ ಸಾಯಿಸ್ತಿಯಾ ? ಇಂಥ ನಿನ್ನ ಗೊಡ್ಡು ಬೆದರಿಕೆಗೆ ಎದುರುವವನಲ್ಲ ನಾನು, ಹೆದರೋದಿದ್ದರೆ ದಡೆಸುಗುರಲ್ಲಿ ಇರುತ್ತಿದ್ದೆ ಹೆದರಲಾರದಕ್ಕೆ ಜನರ ಮಧ್ಯೆ ಕನಕಗಿರಿಯಲ್ಲಿದ್ದೇನೆ.**

**ನಿನ್ನ ಗೊಡ್ಡು ಬೆದರಿಕೆಗೆ ಎದುರುವನಲ್ಲ**

## ಮಿನಿ ನ್ಯೂಸ್

### ಕರುನಾಡು ಕಾರ್ಯನಿರತ ಪತ್ರಕರ್ತರ ಸಂಘಟನೆಯ ಪದಾಧಿಕಾರಿಗಳ ಆಯ್ಕೆ



ಉದಯವಾಹಿನಿ ಚಿತ್ರ

• ಉದಯವಾಹಿನಿ ಬೆಳಗಾವಿ

ಕರುನಾಡು ಕಾರ್ಯನಿರತ ಪತ್ರಕರ್ತರ ಸಂಘ 2025-28 ನೇ ಸಾಲಿನ ಬೆಳಗಾವಿ ಜಿಲ್ಲೆಯ ಪದಾಧಿಕಾರಿಗಳ ಆಯ್ಕೆಯನ್ನು ರಾಜ್ಯಾಧ್ಯಕ್ಷರಾದ ಶ್ರೀನಿವಾಸರಾವ ಟಿ ಎಲ್ ಇವರು ಬೆಳಗಾವಿ ಜಿಲ್ಲಾ ಘಟಕದ ಅಧ್ಯಕ್ಷರನ್ನಾಗಿ ಅನಿಲ ಭೀ ಚಂದನವಾಲೆ. ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಹುಸೇನಸಾಬ ಹ ನದಾಫ ಜಿಲ್ಲಾ ಕಾರ್ಯದರ್ಶಿಯಾಗಿ ಮಲ್ಲಿಕಾರ್ಜುನ ಪ್ರ. ಹೊಸುರಿ ಜಿಲ್ಲಾ ಉಪಾಧ್ಯಕ್ಷರಾಗಿ ಶಿವಲಿಂಗಯ್ಯಾ ರೇ ಹಿರೇಮಠ ಜಿಲ್ಲಾ ಕಾನೂನು ಸಲಹೆಗಾರರಾಗಿ ದೀಲಿಪ ಜಮಾದಾರ ಜಿಲ್ಲಾ ಖಜಾಂಚಿಯಾಗಿ ಪರಶುರಾಮ ಕಾಂಬಳೆ ಮತ್ತು ಸವದತ್ತಿ ತಾಲ್ಲೂಕು ಅಧ್ಯಕ್ಷರಾಗಿ ಹುಸೇನಸಾಬಬು ಮದ್ನೂರ ಆಯ್ಕೆಯಾಗಿದ್ದಾರೆ.

### ಪ್ರವಾಸಿ ತಾಣಗಳ ಅಭಿವೃದ್ಧಿಗೆ ಆದ್ಯತೆ ಸಂಸದ ಕೋಟ ಶ್ರೀನಿವಾಸ ಪೂಜಾರಿ

• ಉದಯವಾಹಿನಿ ಉಡುಪಿ

ದೇಶದಲ್ಲಿ ಸುಸ್ಥಿರ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಕೇಂದ್ರ ಪ್ರವಾಸೋದ್ಯಮ ಇಲಾಖೆಯು 50 ಕ್ಕೂ ಹೆಚ್ಚು ಪ್ರವಾಸಿ ತಾಣಗಳನ್ನು ಅಭಿವೃದ್ಧಿ ಪಡಿಸಲು ಮುಂದಾಗಿದೆ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಮಣಿಪಾಲದ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ನಡೆದ ಕೇಂದ್ರ ಸರ್ಕಾರದ ಜಾಗತಿಕ ಪ್ರವಾಸೋದ್ಯಮ ತಾಣ ಯೋಜನೆಯ ಅನುಷ್ಠಾನ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪ್ರವಾಸೋದ್ಯಮ ಕ್ಷೇತ್ರದಲ್ಲಿ ಸುಸ್ಥಿರತೆ ತರುವುದು ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸುವುದರೊಂದಿಗೆ ಪರಿಸರ ಸ್ನೇಹಿಯಾಗಿ ಪ್ರವಾಸೋದ್ಯಮ ತಾಣಗಳನ್ನು ಅಭಿವೃದ್ಧಿ ಪಡಿಸುವುದರ ಮೂಲಕ ಪ್ರವಾಸಿಗರನ್ನು ಆಕರ್ಷಿಸುವುದು ಹಾಗೂ ಮೂಲ ಸೌಕರ್ಯ ಅಭಿವೃದ್ಧಿಗೆ ವಿಶೇಷ ಗಮನ ಹರಿಸುವ ಗುರಿಯೊಂದಿಗೆ ಡೆಸ್ಟಿನೇಷನ್ ಡೆವಲಪ್‌ಮೆಂಟ್ ಸ್ಕೀಮ್ ಅನ್ನು ಜಾರಿಗೆ ತಂದಿದೆ ಎಂದರು.

### ಮೊಬೈಲ್ ಬಳಕೆ ಆರೋಗ್ಯಕ್ಕೆ ಹಾನಿಕರ: ಪಿಎಸ್‌ಐ ಮಂಜುನಾಥ ಕುರಿ

• ಉದಯವಾಹಿನಿ ಶಿಗ್ಗಾವಿ

ಮೊಬೈಲ್ ಬಳಕೆ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಮಾರಕ. ಮೊಬೈಲ್ ಬಳಕೆ ಕುರಿತು ವಿದ್ಯಾರ್ಥಿಗಳಲ್ಲಿ ಸ್ವಯಂ ಜ್ಞಾನ ಜಾಗೃತಿ ಅವಶ್ಯ ಎಂದು ಬಂಕಾಪುರ ಪೊಲೀಸ್ ಠಾಣೆ ಪಿಎಸ್‌ಐ ಮಂಜುನಾಥ ಕುರಿ ಹೇಳಿದರು.

ತಾಲ್ಲೂಕಿನ ಬಂಕಾಪುರ ಪಟ್ಟಣದಲ್ಲಿ ಫಕ್ಕೀರೇಶ್ವರ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ಕೀರ್ತಿ ಪದವಿ ಪೂರ್ವ ಕಾಲೇಜು ಹಾಗೂ ಕೀರ್ತಿ ವಿದ್ಯಾ ಸಂಸ್ಥೆ ವತಿಯಿಂದ ನಡೆದ ವಾರ್ಷಿಕ ಸ್ನೇಹ ಸಮ್ಮೇಳನ, ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು.

ಪುರಸಭೆ ಉಪಾಧ್ಯಕ್ಷ ಆಂಜನೇಯ ಗುಡಿಗೇರಿ ಮಾತನಾಡಿ, ಗುರುವಿನ ಸ್ಥಾನ ಪವಿತ್ರವಾಗಿದ್ದು, ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಸದಾ ಶ್ರಮಿಸುತ್ತಾರೆ' ಎಂದರು. ರಂಭಾಪುರಿ ಕಾಲೇಜು ಉಪನ್ಯಾಸಕ ಶಿವಪ್ರಕಾಶ ಬಳಿಗಾರ, ಪುರಸಭೆ ಮುಖ್ಯಾಧಿಕಾರಿ ಶಿವಾನಂದ ಅಜ್ಜನವರ ಮಾತನಾಡಿದರು. ಪುರಸಭೆ ಅಧ್ಯಕ್ಷೆ ಮಮತಾ ಮಾಗಿ ಉದ್ಘಾಟಿಸಿದರು. ಕೀರ್ತಿ ವಿದ್ಯಾ ಸಂಸ್ಥೆ ಅಧ್ಯಕ್ಷ ಜಗದೀಶ ಕುರಂದವಾಡ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಎಸ್.ಆರ್.ಕಾರಗಿ, ಪ್ರಾಸ್ತಾವಿಕ ಮಾತನಾಡಿದರು.

### ರೂ. 2 ಕೋಟಿ ಮೊತ್ತದ 4 ಕಿರು ಏತ ನೀರಾವರಿ ಯೋಜನೆಗಳ ಮಂಜೂರು: ಪ್ರಕಾಶ ಹುಕ್ಕೇರಿ

• ಉದಯವಾಹಿನಿ ಚಿಕ್ಕೋಡಿ

ಚಿಕ್ಕೋಡಿ-ಸದಲಗಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಇಂಗಳಿ, ಯಕ್ಸಂಬಾ, ಯಡೂರವಾಡಿ ಗ್ರಾಮಗಳ 4 ಕಿರು ಏತ ನೀರಾವರಿ ಯೋಜನೆ ಮಂಜೂರಾಗಿದ್ದು, ಸರ್ಕಾರದ ಯೋಜನೆಗಳಿಂದ ಈ ಭಾಗದ ನೂರಾರು ರೈತರಿಗೆ ಅನುಕೂಲವಾಗಲಿದೆ ಎಂದು ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಹೇಳಿದರು. ತಾಲ್ಲೂಕಿನ ಯಕ್ಸಂಬಾ ಪಟ್ಟಣದಲ್ಲಿ ರೂ. 2 ಕೋಟಿ ಮೊತ್ತದ 4 ಕಿರು ಏತ ನೀರಾವರಿ ಯೋಜನೆಗಳ ಮಂಜೂರಾತಿ ಪ್ರತಿಗಳನ್ನು ಫಲಾನುಭವಿಗಳಿಗೆ ವಿತರಣೆ ಮಾಡಿ ಮಾತನಾಡಿದರು.

ರೈತರು ಒಣಬೇಸಾಯ ಜಮೀನುಗಳಿಗೆ ಕಿರು ಏತ ನೀರಾವರಿ ಯೋಜನೆ ಮಂಜೂರು ಮಾಡುವಂತೆ ವಿನಂತಿಸಿಕೊಂಡಿದ್ದರಿಂದ ಶಾಸಕ ಗಣೇಶ ಹುಕ್ಕೇರಿ ಹಾಗೂ ತಾನು ಪ್ರಯತ್ನ ಮಾಡಿ ಸರ್ಕಾರದಿಂದ ಯೋಜನೆ ಮಂಜೂರು ಮಾಡಿಕೊಂಡು ಬರಲಾಗಿದೆ ಎಂದರು. ಶಾಸಕ ಗಣೇಶ ಹುಕ್ಕೇರಿ ಮಾತನಾಡಿ. ಕೃಷ್ಣಾ ಹಾಗೂ ದೂಧಗಂಗಾ ನದಿಗಳಿಂದ ಪೈಪ್ ಲೈನ್ ಮೂಲಕ ಇಂಗಳಿ, ಯಕ್ಸಂಬಾ, ಯಡೂರವಾಡಿ ಗ್ರಾಮಗಳ ಜನರಿಗೆ ಅನುಕೂಲವಾಗಲಿದೆ. ಒಟ್ಟು 159 ಎಕರೆ ಜಮೀನು ಈ ಯೋಜನೆಯಿಂದ ನೀರಾವರಿಗೊಳಪಡಲಿವೆ ಎಂದು ಹೇಳಿದರು.

### ತುಂಗಭದ್ರಾ ನದಿಯ ನೀರು ಬಳಸಲು ಸುರಕ್ಷಿತವಲ್ಲ: ಕುಷ್ಟಗಿ

• ಉದಯವಾಹಿನಿ ಕೊಪ್ಪಳ

ಮಾಲಿನ್ಯಕಾರಕ ಕಾರ್ಖಾನೆಗಳ ವಿಸ್ತರಣೆ ವಿರೋಧಿಸಿ ಜಿಲ್ಲಾ ಬಚಾವೊ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಇದರ ಜಂಟಿ ಕ್ರಿಯಾ ವೇದಿಕೆ ನೇತೃತ್ವದಲ್ಲಿ ನಡೆಯುತ್ತಿರುವ ಧರಣಿ ಭಾನುವಾರ 101 ದಿನಗಳನ್ನು ಪೂರೈಸಿತು. ಬಲ್ಡೋಟ, ಕಿರ್ಲೋಸ್ಕರ್, ಕಲ್ಯಾಣಿ ಸ್ಟೀಲ್, ಮುಕುಂದ ಸುಮಿ, ಅಲ್ಟ್ರಾಟೆಕ್ ಸಿಮೆಂಟ್, ಎಕ್ಸ್‌ಇಂಡಿಯಾ, ಭದ್ರಶ್ರೀ ಸ್ಟೀಲ್, ತನುಷ್, ವನ್ಯಾ ಸ್ಟೀಲ್ ಮುಂತಾದ ಕಾರ್ಖಾನೆಗಳ ಮಾಲಿನ್ಯ ವಿರೋಧಿಸಿ ನಡೆಯುತ್ತಿರುವ ಹೋರಾಟದಲ್ಲಿ ಜನ ಸಂಗ್ರಾಮ ಪರಿಷತ್ ಸಂಸ್ಥಾಪಕ ರಾಯಚೂರಿನ ರಾಘವೇಂದ್ರ ಕುಷ್ಟಗಿ ಮಾತನಾಡಿ ತುಂಗಭದ್ರಾ ನದಿ ನೀರು, ಕೃಷಿ ಮತ್ತು ಕೈಗಾರಿಕಾ ಚಟುವಟಿಕೆಗಳಿಗೆ ಆಧಾರವಾಗಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಅಪಾಯಕಾರಿಯಾಗಿದೆ ಎಂದರು. ಕೈಗಾರಿಕಾ ತ್ಯಾಜ್ಯ, ಮತ್ತು ನಗರ ಚರಂಡಿಯ ಮಾಲಿನ್ಯದಿಂದಾಗಿ ನದಿಯ ನೀರಿನ ಗುಣಮಟ್ಟ ಗಂಭೀರವಾಗಿ ಕುಸಿದಿದೆ. ವಿಜಯನಗರ, ರಾಯಚೂರು ಮತ್ತು ಕೊಪ್ಪಳ, ಬಳ್ಳಾರಿ ಜಿಲ್ಲೆಗಳಲ್ಲಿನ ನೀರಿನ ಸ್ಥಿತಿ, ಆರೋಗ್ಯದ ಮೇಲೆ ಅದರ ಪರಿಣಾಮ ಬೀರುತ್ತದೆ. ತುಂಗಭದ್ರಾ ನದಿಯ ನೀರನ್ನು ಯಾವುದೇ ಸಂಸ್ಕರಣೆಯಿಲ್ಲದೆ ನೇರವಾಗಿ ಕುಡಿಯಬಾರದು' ಎಂದರು.

## ಹಂಚನಾಳ ಗ್ರಾಮದಲ್ಲಿ ಕೆಸರುಮಯ ರಸ್ತೆಗಳು ಪಂಚಾಯತ್ ನಿರ್ಲಕ್ಷ್ಯಕ್ಕೆ ಗ್ರಾಮಸ್ಥರ ಆಕ್ರೋಶ

• ಉದಯವಾಹಿನಿ ಆಲಮೇಲ

ತಾಲ್ಲೂಕಿನ ಮೋರಟಗಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಹಂಚನಾಳ ಗ್ರಾಮದಲ್ಲಿ ಮೂಲಸೌಕರ್ಯಗಳ ಕೊರತೆ ತೀವ್ರವಾಗಿದ್ದು, ಗ್ರಾಮದ ಪ್ರಮುಖ ರಸ್ತೆಗಳು ಸಂಪೂರ್ಣವಾಗಿ ಕೆಸರುಮಯವಾಗಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಅಭಿವೃದ್ಧಿ ಕಾರ್ಯಗಳು ಕಾಗದಕ್ಕಷ್ಟೇ ಸೀಮಿತವಾಗಿವೆ ಎಂಬ ಆರೋಪಗಳು ಕೇಳಿಬರುತ್ತಿವೆ.

ಗ್ರಾಮದ ರಸ್ತೆಗಳಲ್ಲಿ ಮಳೆಗಾಲವಿಲ್ಲದಿದ್ದರೂ ಚರಂಡಿ ನೀರು ಹರಿಯುತ್ತಿದ್ದು, ರಸ್ತೆಯ ಮೇಲೆ ಹಂದಿಗಳು ಮುಕ್ತವಾಗಿ ಸಂಚರಿಸುತ್ತಿರುವುದರಿಂದ ಪರಿಸರ ದುರವಸ್ಥೆಯಾಗಿದೆ. ಇದರಿಂದ ಸೊಳ್ಳೆಗಳ ಕಾಟ ಹೆಚ್ಚಾಗಿ ಡೆಂಗ್ಯೂ, ಮಲೇರಿಯಾ ಸೇರಿದಂತೆ ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗಿದೆ ಎನ್ನುತ್ತಾರೆ ಗ್ರಾಮಸ್ಥರು.

ರಸ್ತೆಯ ಮಧ್ಯೆ ನಿಂತಿರುವ ನೀರು ಹಾಗೂ ಹರಡಿಕೊಂಡಿರುವ ಕಲ್ಲುಗಳಿಂದಾಗಿ ಶಾಲಾ ಮಕ್ಕಳು ಮತ್ತು ಪಾದಚಾರಿಗಳು ಸಂಚರಿಸಲು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಈ ದಾರಿಯಲ್ಲಿ ಮಕ್ಕಳು ಬಿದ್ದು ಗಾಯಗೊಂಡಿರುವ ಘಟನೆಗಳೂ ನಡೆದಿವೆ ಎಂದು ಆರೋಪಿಸಲಾಗಿದೆ. ಗ್ರಾಮದ ಸ್ವಚ್ಛತೆ ಮತ್ತು ರಸ್ತೆ ನಿರ್ವಹಣೆ ಗ್ರಾಮ ಪಂಚಾಯತ್ ಜವಾಬ್ದಾರಿಯಾಗಿದ್ದರೂ, ಈ ಸಮಸ್ಯೆಯ ಕುರಿತು ಆಡಳಿತ ನಿರ್ಲಕ್ಷ್ಯ ವಹಿಸಿದೆ ಎಂಬ ಆಕ್ರೋಶ ವ್ಯಕ್ತವಾಗಿದೆ. ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಸ್ಪಂದನೆ ದೊರಕಿಲ್ಲ ಎಂದು ಗ್ರಾಮಸ್ಥರು ದೂರಿದ್ದಾರೆ.

ನಮ್ಮ ಗ್ರಾಮದ ರಸ್ತೆಗಳು ಹಂದಿಗಳ ಆವಾಸಸ್ಥಾನವಾಗಿ ಮಾರ್ಪಟ್ಟಿವೆ. ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ರಸ್ತೆ ದುರಸ್ತಿ ಹಾಗೂ ಸ್ವಚ್ಛತೆಗೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಪ್ರತಿಭಟನೆ ನಡೆಸಲಾಗುವುದು, ಎಂದು ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.



ಉದಯವಾಹಿನಿ ಚಿತ್ರ

## ಟೆಸ್ಟಿಂಗ್ ಪೌಡರ್ ರಾಸಾಯನಿಕ ಬಳಕೆ ನಿಷೇಧ

• ಉದಯವಾಹಿನಿ ಜಮಖಂಡಿ

ರಸ್ತೆಯ ಬದಿಯ ಆಹಾರ ಪದಾರ್ಥಗಳು ಸೇವಿಸಲು ಎಷ್ಟು ಹಿತಕರ ಇದಕ್ಕೆ ಆಹಾರ ಸುರಕ್ಷಾ ಕ್ರಮವೇ ಇಲ್ಲವೇ ಉದರ ಪೋಷಣೆಗೆ ಗೂಡಂಗಡಿಯವರು ಇಲ್ಲದ್ದನ್ನು ಮಾರಿ ತಮ್ಮ ಉದರವನ್ನು ತುಂಬಿಸುವದರ ಜೊತೆಗೆ ಖಾದ್ಯ ಪ್ರಿಯರ ಉದರವನ್ನು ವಿಷದಿಂದ ತುಂಬಿಸುವ ಕಾರ್ಯ ಎಗಿಲ್ಲದೆ ನಡೆದಿದೆ.

ನಗರ ಸಹಿತ ಗ್ರಾಮೀಣ ಭಾಗದಲ್ಲಿ ಹಲವೆಡೆ ರಸ್ತೆ ಬದಿಯ ಕುರುಕಲು ತಿಂಡಿಗಳ ವ್ಯಾಪಾರ ಜೋರಾಗೆಯೇ ನಡೆಯುತ್ತಿದೆ ಆದರೆ ಇಲ್ಲಿ ಸ್ವಚ್ಛತೆ ಮಾತ್ರ ಶೂನ್ಯವಾಗಿದೆ. ಮುಸ್ಸಂಜೆಯಿಂದ ರಾತ್ರಿಯವರೆಗೆ ಈ ಗೂಡಂಗಡಿಗಳ ವ್ಯಾಪಾರ ಬಲು ಜೋರು ಅವರು ಮಾಡಿದ ಖಾದ್ಯದ ರುಚಿ ನೋಡಲು ಜನತೆ ಮುಗಿ ಬೀಳುತ್ತದೆ.

ಆದರೆ ಇವರು ತಯಾರಿಸು ಆಹಾರ ಎಷ್ಟು ಸುರಕ್ಷಿತ ಮತ್ತು ಎಷ್ಟು ಆರೋಗ್ಯಕರ ಎನ್ನುವದನ್ನು ಕಡೆಗಣಿಸಿ ನಾಗರಿಕರು ಕೇವಲ ಬಾಯಿ ರುಚಿಗಾಗಿ ಇಂತಹ ಆಹಾರ ಸೇವಿಸುವದು ರೂಢಿಸಿಕೊಂಡಿದ್ದಾರೆ, ನಗರದ ಹೋಟೆಲ್ ಹಾಗೂ ರೆಸ್ಟೋರೆಂಟ್ ಹಾಗೂ ಗೂಡಂಗಡಿಗಳು ಕುರುಕಲು ಆಹಾರ ಪದಾರ್ಥ ಮಾರಾಟ ಮಾಡಿ ತಮ್ಮ ತುತ್ತಿನ ಚೀಲ ತುಂಬಿಕೊಳ್ಳುತ್ತಾರೆ. ಆದರೆ ಅವರು ನೀಡುವ ಆಹಾರ ಬೇರೆಯವರಿಗೆ ವಿಷಪ್ರಾಶನ ಮಾಡಿದಂತೆ ಎಂದು ಅರಿಯದೇ ತಮ್ಮ ಜೇಬು ತುಂಬಿಸಿಕೊಳ್ಳುವಲ್ಲಿ ಮಾತ್ರ ನಿರತರಾಗಿದ್ದಾರೆ ಎಂದರೆ ವಿಪರ್ಯಾಸವಾಗಲಾರದು.

ನಗರದ ವಿವಿಧ ಭಾಗ ಸೇರಿ ಗ್ರಾಮೀಣ ಪ್ರದೇಶದಲ್ಲಿ ಚರಂಡಿಯ ಪಕ್ಕದಲ್ಲಿ ಅಥವಾ ಹೋಟೆಲ್ ರೆಸ್ಟೋರೆಂಟ್‌ಗಳಲ್ಲಿ ಮತ್ತು ಗಬ್ಬೆದ್ದು ನಾರುವ ಸ್ಥಳಗಳಲ್ಲಿ ಮಾಂಸಾಹಾರ, ಸಸ್ಯಾಹಾರದ ತಿಂಡಿಗಳ ಮಾರಾಟವು ಎಗ್ಗಿಲ್ಲದೇ ಸಾಗಿದೆ. ಎಗ್ ರೆಸ್ ಹೆಸರಿನಲ್ಲಿ ಅನ್ನಕ್ಕೆ ವಿಧವಾದ ಬಣ್ಣ ಹಾಗೂ ಟೆಸ್ಟಿಂಗ್ ಪೌಡರ್ ಸೇರಿಸಿ ಗ್ರಾಹಕರನ್ನು ಮೆಚ್ಚಿಸುವಲ್ಲಿ ನಿರತರಾಗಿದ್ದರೆ ಇತ್ತ ಗ್ರಾಹಕ ತನ್ನ ಆರೋಗ್ಯದ ಮೇಲೆ ಎಷ್ಟು ಹಿತ ಎನ್ನುವ ಅರಿವಿಗೆ ಹೋಗದೇ ಸಂತೃಪ್ತಿಯಿಂದ ಬಾಯಿ ಚಪ್ಪರಿಸಿಕೊಳ್ಳುತ್ತಾರೆ. ಇವರು ಸ್ಥಳದಲ್ಲಿ ತಯಾರು ಮಾಡುವ ಆಹಾರ ಪದಾರ್ಥದ ಮೇಲೆ ವಾಹನದ ಧೂಳು ಮಣ್ಣು ಕಸ ಎಷ್ಟು ಬೀಳುತ್ತದೆ ಎನ್ನುವದನ್ನು ಗಣನೆಗೆ ತೆಗೆದುಕೋಳಲು ತಯಾರಿಲ್ಲ ಈ ಆಹಾರ ಪದಾರ್ಥಗಳ ಗುಣಮಟ್ಟದ ಗೋಜಿಗೆ ಹೋಗುತ್ತಿಲ್ಲ ಆದರೆ ಅಧಿಕಾರಿಗಳು ಮಾತ್ರ ಕಣ್ಣು ಮುಚ್ಚಿ ಕುಳಿತಿದ್ದಾರೆ. ರಾಜ್ಯದಲ್ಲಿ ಆಹಾರ ಸುರಕ್ಷಾ ಕಾನೂನು ಜಾರಿಯಲ್ಲಿದೆ. ಚಿಲ್ಲರೆ, ಸಗಟು ವ್ಯಾಪಾರಸ್ಥರು ಈ ಕಾನೂನ್ನು ಪಾಲಿಸಬೇಕು ಆದರೆ ಎಷ್ಟರ ಮಟ್ಟಿಗೆ ಈ ಕಾನೂನು ಪಾಲನೆಯಾಗುತ್ತಿದೆ ಎನ್ನುವುದೇ ಪ್ರಶ್ನೆಯಾಗಿದೆ.

ಸರಕಾರ 20 ಮೈಕ್ರೋನಾಗಿಂತ ಕಡಿಮೆ ಮಟ್ಟದ ಪ್ಲಾಸ್ಟಿಕ ಬ್ಯಾನ ಮಾಡಿದ್ದರೂ ಸಹ ಅದೇ ಪ್ಲಾಸ್ಟಿಕ್‌ನಲ್ಲಿ ಪಾರ್ಸಲ್ ಮಾಡಿ ನೀಡುತ್ತಾರೆ ಇಲ್ಲಿ ಯಾವ ಕಾನೂನು ಸರಿಯಾಗಿ ಪಾಲನೆಯಾಗುತ್ತಿಲ್ಲ ಎಂದು ಮೇಲ್ನೋಟಕ್ಕೆ ಕಾಣಸಿಗಬಹುದಾಗಿದೆ.



ಉದಯವಾಹಿನಿ ಚಿತ್ರ

**ಹೊಟೇಲ್ ಹಾಗೂ ರೆಸ್ಟೋರೆಂಟಗಳ ಆಹಾರ ಪದಾರ್ಥಗಳಲ್ಲಿ ಅತಿಯಾಗಿ ಬಳಕೆ**

## ಅದ್ದೂರಿ ಶಿವರಾತ್ರಿ ಆಚರಣೆಗೆ ಸಿದ್ಧತೆ: ಸಚಿವ ಮಂಕಾಳ ವೈದ್ಯ

• ಉದಯವಾಹಿನಿ ಭಟ್ಕಳ

ಮುರುಡೇಶ್ವರದಲ್ಲಿ ಶಿವರಾತ್ರಿ ಪ್ರಯುಕ್ತ ಫೆಬ್ರುವರಿ 15ರಂದು ಸಂಜೆ 6 ಗಂಟೆಯಿಂದ ಬೆಳಗಿನ ಜಾವ 6 ಗಂಟೆ ವರೆಗೆ ಶಿವರಾತ್ರಿ ಜಾಗರಣೆ ಉತ್ಸವವನ್ನು ಅದ್ದೂರಿಯಾಗಿ ನಡೆಸಲು ನಿರ್ಧರಿಸಲಾಗಿದೆ ಎಂದು ರಾಜ್ಯದ ಮೀನುಗಾರಿಕೆ. ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಹಾಗೂ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್ ವೈದ ಹೇಳಿದರು.

ಮುರುಡೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಭಾನುವಾರ ಮಧ್ಯಾಹ್ನ ಅಧಿಕಾರಿಗಳು ಮತ್ತು ಊರ ಪ್ರಮುಖರ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಸರಕಾರದಿಂದ ಶಿವರಾತ್ರಿ ಜಾಗರಣೆ ಉತ್ಸವಕ್ಕೆ ರೂ. 50 ಲಕ್ಷ ಅನುದಾನ ಬಂದಿದೆ. ಈ ಸಲವೂ ಅನುದಾನ ಬರುವ ನಿರೀಕ್ಷೆ ಇದೆ ಎಂದರು.

ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯ ಮಾತನಾಡಿ, ಶಿವರಾತ್ರಿ ಜಾಗರಣೆ ಉತ್ಸವವಕ್ಕೆ ಸಾರಿಗೆ, ವಸತಿ, ಸುರಕ್ಷತೆ, ಭದ್ರತೆ ಹಾಗೂ ಸ್ವಚ್ಛತೆಗೆ ಪ್ರಮುಖ ಆದ್ಯತೆ ಕೊಡಲಾಗಿದೆ ಎಂದರು. ಪ್ರಮುಖ ಕೃಷ್ಣ ನಾಯ್ಕ ಜಮೀನ್ದಾರ್ ಮಾತನಾಡಿ, ಸಚಿವರು ಮುರುಡೇಶ್ವರದ ಅಭಿವೃದ್ಧಿಗೆ ಮತ್ತು ಶಿವರಾತ್ರಿ ಜಾಗರಣೆ ಆಚರಣೆಗೆ ಖಾಯಂ ಸಮಿತಿ ರಚನೆ ಮಾಡಬೇಕು ಎಂದು ಆಗ್ರಹಿಸಿದರು.

ಹಿರಿಯ ಮುಖಂಡ ಎಸ್ ಎಸ್ ಕಾಮತ್ ಮಾತನಾಡಿ, ಶಿವರಾತ್ರಿ ಪೂರ್ವಭಾವಿಯಾಗಿ ಮುರುಡೇಶ್ವರದಲ್ಲಿ ಫೆ. 9 ರಂದು ಸ್ವಚ್ಛತಾ ಅಭಿಯಾನ ನಡೆಸಲು ನಿರ್ಧರಿಸಲಾಗಿದೆ ಎಂದರು.

ಶಂಕರ ಭಟ್ರಹಿತ್ತು ಮಾತನಾಡಿ, ಶಿವರಾತ್ರಿ ಜಾಗರಣೆ ಉತ್ಸವ ವರ್ಷಂಪ್ರತಿ ಆಚರಿಸಲು ಸಮಿತಿ ರಚಿಸಬೇಕೆಂದರು. ಇದಕ್ಕುತ್ತರಿಸಿದ ಸಚಿವರು ಕೂಡಲೇ ಎಲ್ಲಾ ಸಮಾಜದವರನ್ನೊಳಗೊಂಡ ಶಿವರಾತ್ರಿ ಜಾಗರಣೆ ಉತ್ಸವ ಸಮಿತಿ ರಚಿಸಿ ಇದನ್ನು ಶಿವರಾತ್ರಿ ಹಬ್ಬದ ಜಾಗರಣೆ ಉತ್ಸವದಂದು ಘೋಷಿಸುವುದಾಗಿ ಹೇಳಿದರು.

# ಫೆ.13-15ರವರೆಗೆ 3 ದಿನಗಳು ಅದ್ದೂರಿ ಹಂಪಿ ಉತ್ಸವ

### ತುಂಗಭದ್ರಾ ತಟದ ಕಲ್ಲು-ಬಂಡೆಗಳು ಮೌನವಾಗಿ ಪಿಸುಗುಟ್ಟುವ ಇತಿಹಾಸಕ್ಕೆ ಈ ಬಾರಿ ಸಾಂಸ್ಕೃತಿಕ ಮೆರುಗು ಸಿಗಲಿದೆ

• ಉದಯವಾಹಿನಿ ಹೊಸಪೇಟೆ

ವಿಜಯನಗರ ಸಾಮ್ರಾಜ್ಯದ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಜಗತ್ತಿಗೆ ಸಾರುವ ಹಂಪಿ ಉತ್ಸವಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಫೆ.13, 14 ಮತ್ತು 15ರಂದು ನಡೆಯಲಿರುವ ಸಂಭ್ರಮಕ್ಕೆ ವಿಜಯನಗರದ ಮಣ್ಣು ಸಜ್ಜಾಗುತ್ತಿದೆ. ವಿಶೇಷವಾಗಿ ವಿಜಯನಗರ ವೈಭವವನ್ನು ಕಣ್ಣ ಮುಂದೆ ತರಲು 5 ಸಾವಿರಕ್ಕೂ ಅಧಿಕ ಕಲಾವಿದರು ಅಣಿಯಾಗುತ್ತಿದ್ದಾರೆ.

**ಸಾಂಸ್ಕೃತಿಕ ಮೆರುಗು:** ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಪರಂಪರೆ ಬಿಂಬಿಸುವ ವಿಶ್ವವಿಖ್ಯಾತ ಹಂಪಿ ಉತ್ಸವಕ್ಕೆ ಕಲಾವಿದರು ಕಲೆ ಪ್ರದರ್ಶನದ ಮೂಲಕ ಗತ ವೈಭವವನ್ನು ಮರು ಸೃಷ್ಟಿಸಲಿದ್ದಾರೆ. ಜಿಲ್ಲಾಡಳಿತ ವೈಭವದಿಂದ ಉತ್ಸವ ನಡೆಸಲು ಅಗತ್ಯ ಸಿದ್ಧತೆ ಮಾಡುತ್ತಿದ್ದು, ತುಂಗಭದ್ರಾ ತಟದ ಕಲ್ಲು-ಬಂಡೆಗಳು ಮೌನವಾಗಿ ಪಿಸುಗುಟ್ಟುವ ಇತಿಹಾಸಕ್ಕೆ ಈ ಬಾರಿ ಸಾಂಸ್ಕೃತಿಕ ಮೆರುಗು ಸಿಗಲಿದೆ.

**ಕಲಾವಿದರಿಂದ ತಾಲೀಮು:** ವಸಂತ ವೈಭವ ಮೆರವಣಿಗೆ, ಜಾನಪದ ವಾಹಿನಿ ಮೆರವಣಿಗೆ, ವೇದಿಕೆಯಲ್ಲಿ ಕಲಾ ಪ್ರದರ್ಶನ ಸೇರಿ ನೂರಾರು ಕಲಾತಂಡಗಳು ಹಾಗೂ ಜನರ ಗಮನ ಸೆಳೆದ ಧ್ವನಿ ಮತ್ತು ಬೆಳಕು ಕಾರ್ಯಕ್ರಮದಲ್ಲಿ 101 ಕಲಾವಿದರು ಮತ್ತು ರಾಜ್ಯದ ನಾನಾ ಜಿಲ್ಲೆಗಳಿಂದ ಆಗಮಿಸುವ 100ಕ್ಕೂ ಹೆಚ್ಚು ಕಲಾತಂಡಗಳು ವೀರಗಾಸೆ, ಡೊಳ್ಳು ಕುಣಿತ, ಯಕ್ಷಗಾನ ಮತ್ತು ಲಂಬಾಣಿ ನೃತ್ಯದ ಮೂಲಕ ರಸ್ತೆಯುದ್ದಕ್ಕೂ ವಸಂತ ವೈಭವದಲ್ಲಿ ಕಳೆ ತರಲಿವೆ. ಕಲಾವಿದರ ಆಯ್ಕೆ ಪ್ರಕ್ರಿಯೆಯೂ ನಡೆದಿದ್ದು, ಕಲಾವಿದರು ತಾಲೀಮು ನಡೆಸಿದ್ದಾರೆ.


**ಸ್ಯಾಂಡಲ್‌ವುಡ್ ತಾರೆಯರ ಮೆರುಗು:** ಹಂಪಿ ಉತ್ಸವಕ್ಕೆ ಮೆರುಗು ತರುವುದೇ ಕಲಾವಿದರು. ಹಂಪಿ ಉತ್ಸವದಲ್ಲಿ ಕಲಾತಂಡಗಳು, ಕಲಾವಿದರು ತಮ್ಮ ಕಲೆಯನ್ನು ಪ್ರದರ್ಶಿಸಲಿದ್ದಾರೆ. ಇದಕ್ಕಾಗಿ ವೇದಿಕೆಗಳು ಸಿದ್ಧವಾಗುತ್ತಿವೆ. ಗಾಯತ್ರಿ ಪೀಠ, ಬಸವಣ್ಣ ಮಂಟಪ, ಸಾಸಿವೆ ಕಾಳು ಗಣೇಶ ಮತ್ತು ಮಹಾನವಮಿ ದಿಬ್ಬ, ವಿರೂಪಾಕ್ಷ ದೇವಸ್ಥಾನದ ಆವರಣ ಸೇರಿದಂತೆ ಒಟ್ಟು ಐದು ವೇದಿಕೆಗಳಲ್ಲಿ ಸಾಂಸ್ಕೃತಿಕ ಸೌರಭ ಪಸರಿಸಲಿದೆ. ಸ್ಥಳೀಯ ಕಲಾವಿದರ ಜತೆಗೆ ಬಾಲಿವುಡ್ ಮತ್ತು ಸ್ಯಾಂಡಲ್‌ವುಡ್ ತಾರೆಯರು ಉತ್ಸವಕ್ಕೆ ಮೆರುಗು ನೀಡಲಿದ್ದಾರೆ.

- **ಫೆ.13-15ರವರೆಗೆ 3ದಿನಗಳ ಕಾಲ ಹಂಪಿ ಉತ್ಸವ.**
- **5ಸಾವಿರ ಕಲಾವಿದರಿಂದ ಗತ ವೈಭವ ಮರುಸೃಷ್ಟಿಗೆ ಹಂಪಿ ಸಜ್ಜು.**
- **ಫೆ.13ರ ಸಂಜೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಹಂಪಿ ಉತ್ಸವಕ್ಕೆ ಅಧಿಕೃತ ಚಾಲನೆ.**

**ನಾಡಿನ ಕಲೆ, ಸಂಸ್ಕೃತಿಯ ಸಮ್ಮಿಲನ**

**ನಾಡಿನ ಕಲಾ ವೈಭವದ ದರ್ಶನಕ್ಕೆ ವೇದಿಕೆ ಸಿದ್ಧವಾಗುತ್ತಿದ್ದು, ಹಂಪಿಯ ಗಾಯತ್ರಿ ಪೀಠದ ಮುಖ್ಯ ವೇದಿಕೆಯಲ್ಲಿ ಫೆ.13ರ ಸಂಜೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉತ್ಸವಕ್ಕೆ ಅಧಿಕೃತವಾಗಿ ಚಾಲನೆ ನೀಡಲಿದ್ದಾರೆ. ಈ ಬಾರಿ ಉತ್ಸವವನ್ನು ಕೇವಲ ಪ್ರದರ್ಶನವಾಗಿರಿಸದೆ, ನಾಡಿನ ಕಲೆ ಮತ್ತು ಸಂಸ್ಕೃತಿಯ ಸಮ್ಮಿಲನವನ್ನಾಗಿ ಮಾಡಲು ಸರಕಾರ ನಿರ್ಧರಿಸಿದೆ.**

**ನಾಡಿನ ಹೆಮ್ಮೆಯ ಹಂಪಿ ಉತ್ಸವವನ್ನು ನಾಡಹಬ್ಬದ ರೀತಿಯಲ್ಲಿ ಅಚ್ಚುಕಟ್ಟಾಗಿ ಆಚರಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿ ಕೊಳ್ಳಲಾಗುತ್ತಿದೆ. ಸಾವಿರಾರು ಕಲಾವಿದರು ತಮ್ಮ ಕಲಾ ಪ್ರದರ್ಶನದ ಮೂಲಕ ಉತ್ಸವಕ್ಕೆ ಕಳೆ ತುಂಬುತ್ತಾರೆ. -ಕವಿತಾ ಎಸ್.ಮನ್ನಿಕೇರಿ, ಜಿಲ್ಲಾಧಿಕಾರಿ, ವಿಜಯನಗರ**



ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
|---|---|---|
| ಗುಳಿಕ ಕಾಲ | ಮಧ್ಯಾಹ್ನ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** – ನಿರಾಶಾದಾಯಕ ಮನೋಭಾವವು ಕೇವಲ ನಿಮ್ಮ ಅವಕಾಶಗಳನ್ನು ಸೀಮಿತಗೊಳಿಸುವುದಷ್ಟೇ ಅಲ್ಲದೇ ದೇಹದ ಸಾಮರಸ್ಯವನ್ನೂ ಭಂಗಪಡಿಸುವುದರಿಂದ ಅವುಗಳನ್ನು ತಡೆಯಬೇಕು.

**ವೃಷಭ** – ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ತಮ್ಮ ವ್ಯಾಪರಕ್ಕಾಗಿ ಮನೆಯಿಂದ ಹೊರಗೆ ಹೋಗಿರುವ ವ್ಯಾಪಾರಿಗಳು ಜಾಗರೂಕವಾಗಿರಿ, ಹಣದ ಕಳ್ಳತನವಾಗುವ ಸಾಧ್ಯತೆ ಇದೆ.

**ಮಿಥುನ** – ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ. ನೀವು ವಿವಾಹಿತರಾಗಿದ್ದರೆ ನಿಮ್ಮ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ ಏಕೆಂದರೆ ನೀವು ಅದನ್ನು ಮಾಡದಿದ್ದರೆ ಅವರ ಆರೋಗ್ಯವು ಹದಗೆಡಬಹುದು.

**ಕರ್ಕಾಟಕ** – ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ನಿಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ.

**ಸಿಂಹ** – ಮನೆಯಲ್ಲಿ ಸಮಸ್ಯೆಗಳು ಉದ್ಭವವಾಗುವಂತೆ ತೋರುತ್ತಿರುವುದರಿಂದ ನಿಮ್ಮ ಮಾತುಗಳ ಬಗ್ಗೆ ಎಚ್ಚರ ವಹಿಸಿ. ಇಂದು ಪ್ರಣಯದ ಭಾವನೆಗಳಿಗೆ ಪ್ರತಿಕ್ರಿಯೆ ದೊರಕುತ್ತದೆ.

**ಕನ್ಯಾ** – ನೀವು ಕೆಲವು ಉನ್ನತ ವ್ಯಕ್ತಿಗಳನ್ನು ಸಭೇಟಿಯಾಗಬಹುದಾದ್ದರಿಂದ ಗಾಬರಿಯಾಗಬೇಡಿ ಮತ್ತು ವಿಶ್ವಾಸ ಕಳೆದುಕೊಳ್ಳದಿರಿ. ಇದು ವ್ಯಾಪಾರಕ್ಕೆ ಬಂಡವಾಳದಂತೆ ಉತ್ತಮ ಆರೋಗ್ಯಕ್ಕೆ ಅಗತ್ಯವಾಗಿದೆ.

**ತುಲಾ** – ಮಾನಸಿಕವಾಗಿ ಮತ್ತು ದೈಹಿಕವಾಗಿ ಸ್ವಲ್ಪ ಸುಸ್ತನ್ನು ಅನುಭವಿಸಬಹುದು. ನಿಮ್ಮ ಚೈತನ್ಯವನ್ನು ಹೆಚ್ಚಿಸಲು ಸ್ವಲ್ಪ ವಿಶ್ರಾಂತಿ ಮತ್ತು ಪೌಷ್ಟಿಕ ಆಹಾರ ಬಹಳ ಸಹಾಯ ಮಾಡುತ್ತದೆ.

**ವೃಶ್ಚಿಕ** – ಮಾನಸಿಕ ಶಾಂತಿಗಾಗಿ ಕೆಲವು ದಾನ ಧರ್ಮಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ತನ್ನ ಹಣವನ್ನು ಹೇಗೆ ಸಂಗ್ರಹಿಸುವುದು ಎಂಬ ಈ ಕೌಶಲ್ಯವನ್ನು ನೀವು ಕಲಿಯಬಹುದು ಮತ್ತು ಹಣವನ್ನು ಉಳಿಸಬಹುದು.

**ಧನಸ್ಸು** – ಅಭದ್ರತೆ ಭಾವನೆ ತಲೆತಿರುಗುವಿಕೆಯನ್ನು ಉಂಟುಮಾಡಬಹುದು. ಇಂದು ನಿಮಗೆ ನಿಮ್ಮ ಸಹೋದರ ಅಥವಾ ಸಹೋದರಿಯ ಸಹಾಯದಿಂದ ಹಣದ ಲಾಭವಾಗುವ ಸಾಧ್ಯತೆ ಇದೆ.

**ಮಕರ** – ನೀವು ಶಾಂತಿ ಕಾಪಾಡಲು ಹಾಗೂ ಕೌಟುಂಬಿಕ ಸಾಮರಸ್ಯವನ್ನು ಕಾಪಾಡಲು ನಿಮ್ಮ ಕೋಪವನ್ನು ಮೆಟ್ಟಿ ನಿಲ್ಲಬೇಕು ಇಂದು ನಿಮ್ಮ ಪ್ರೀತಿಯ ಜೀವನದಲ್ಲಿ ಅದ್ಭುತ ದಿನವಾಗಿದೆ.

**ಕುಂಭ** – ನಿಮ್ಮ ದಯಾಳು ಪ್ರಕೃತಿ ಇಂದು ಅನೇಕ ಸಂತೋಷದ ಕ್ಷಣಗಳನ್ನು ತರುತ್ತದೆ. ನೀವು ಅತ್ಯಂತ ಅನಿರೀಕ್ಷಿತ ಮೂಲಗಳಿಂದ ಗಳಿಕೆಯ ಸಾಧ್ಯತೆಯನ್ನು ಹೊಂದಿದ್ದೀರಿ.

**ಮೀನ** – ಆರೋಗ್ಯ ಪರಿಪೂರ್ಣವಾಗಿರುತ್ತದೆ. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿಯಾಗಲಿದೆ.

# ಸರ್ಕಾರಿ ಆಸ್ಪತ್ರೆಗಳಲ್ಲಿ ಆರೋಗ್ಯ ಸೇವೆ ಸುಧಾರಣೆಯಾಗಬೇಕು

## ಆರೋಗ್ಯ ಸೇವೆಗಳನ್ನು ಸುಧಾರಿಸಿ, ಗುಣಮಟ್ಟದ ಸೇವೆ ಖಾತ್ರಿಪಡಿಸಿ ಆರೋಗ್ಯ ಅಧಿಕಾರಿಗಳಿಗೆ ಸಚಿವ ಕಟ್ಟುನಿಟ್ಟಿನ ಸೂಚನೆ

• ಉದಯವಾಹಿನಿ ಕಲಬುರಗಿ

ಬಡವ ಬಲ್ಲಿದ ಎನ್ನದೆ ರಾಜ್ಯದ ಪ್ರತಿಯೊಬ್ಬ ನಾಗರಿಕನಿಗೂ ಗುಣಮಟ್ಟದ ಆರೋಗ್ಯ ಸೇವೆ ಸಿಗಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಆರೋಗ್ಯ ಸೇವೆ ಸುಧಾರಣೆಯಾಗಬೇಕು. ಗುಣಮಟ್ಟದ ಸೇವೆಯನ್ನು ಖಾತ್ರಿಪಡಿಸಿಕೊಳ್ಳಬೇಕೆಂದು ಆರೋಗ್ಯಾಧಿಕಾರಿಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಕಟ್ಟುನಿಟ್ಟಿನ ಸೂಚನೆ ನೀಡಿದರು.

**ವಿಳಂಬ ಕುರಿತು ಅಸಮಾಧಾನ ವ್ಯಕ್ತಪಡಿಸಿದ ಸಚಿವ**

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಕಲಬುರಗಿ ವಿಭಾಗ ಮಟ್ಟದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಉಪಕರಣಗಳು, ಔಷಧಗಳ ಕೊರತೆಯಿಂದ ರೋಗಿಗಳ ಸೇವೆಯಲ್ಲಿ ವ್ಯತ್ಯಯವಾಗದಂತೆ ವೈದ್ಯರು ಎಚ್ಚರಿಕೆ ವಹಿಸಬೇಕು ಎಂದರು.

ಕಲಬುರಗಿ ಜಿಲ್ಲಾ ಆಸ್ಪತ್ರೆಯನ್ನು ಸರ್ಕಾರಿ ವೈದ್ಯಕೀಯ ಕಾಲೇಜಿನಿಂದ ಬೇರ್ಪಡಿಸುವ ಪ್ರಕ್ರಿಯೆಯಲ್ಲಿ ಆಗುತ್ತಿರುವ ವಿಳಂಬ ಕುರಿತು ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಕೂಡಲೆ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಸೂಚಿಸಿದಲ್ಲದೆ ವಿಜಯನಗರ ಹೊಸ ಜಿಲ್ಲೆಗೆ ಅಗತ್ಯವಿರುವ ಮಾನವ ಸಂಪನ್ಮೂಲ ಮತ್ತು ಔಷಧ ಉಗ್ರಾಣ ಕೇಂದ್ರ ಸ್ಥಾಪನೆಗೆ ಶೀಘ್ರ ಅನುಮೋದನೆ ನೀಡಲಾಗುವುದು ಎಂದರು. ಬೀದರ್ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಔಷಧ ಪೂರೈಕೆಯಲ್ಲಿ ಆಗುತ್ತಿರುವ ವಿಳಂಬ, ಕೆ.ಎಸ್.ಎಂ.ಎಸ್.ಸಿ.ಎಲ್. ಸಂಸ್ಥೆಯಿಂದ ಔಷಧಿಗಳ ಕೊರತೆ, ಹಾಗೂ ಕೊಪ್ಪಳದಲ್ಲಿ ಸಿಬಿನಾಟ್ ಕಾಟ್ರಿಜ್‌ಗಳ ಅಭಾವದಿಂದ ಕ್ಷಯರೋಗಿಗಳ ಪರೀಕ್ಷೆಗೆ ತೊಂದರೆ ಉಂಟಾಗಿರುವ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸಿದ ಸಚಿವ ದಿನೇಶ ಗುಂಡೂರಾವ್ ಅವರು, ಮುಂದೆ ಇದು ಮರುಕಳಿಸದಂತೆ ಪರಿಹಾರ ಕ್ರಮ ಕೈಗೊಳ್ಳುವಂತೆ ಡಿ.ಎಚ್.ಓ. ಗಳಿಗೆ ನಿರ್ದೇಶನ ನೀಡಿದರು.

ಟೆನೆಕ್ಟೆಪ್ಲೇಸ್ ಇಂಜೆಕ್ಷನ್ ಲಭ್ಯತೆ ಖಚಿತಪಡಿಸಿಕೊಳ್ಳಿ: ಡಾ. ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆಯಡಿ ಈವರೆಗೆ 83,573 ಇಸಿಜಿಗಳನ್ನು ನಡೆಸಲಾಗಿದ್ದು, ಸುಮಾರು 41,043 ಅಸಹಜ ಇಸಿಜಿಗಳು ಪತ್ತೆಯಾಗಿದ್ದು, ತುರ್ತು ಹೃದಯಾಘಾತದ ಪ್ರಕರಣದಲ್ಲಿ ಇದುವರೆಗೆ 182 ಜನ ರೋಗಿಗಳಿಗೆ ಜೀವ ಉಳಿಸುವ 'ಟೆನೆಕ್ಟೆಪ್ಲೇಸ್' ಇಂಜೆಕ್ಷನ್ ನೀಡಲಾಗಿದೆ. ಈ ಇಂಜೆಕ್ಷನ್ ಆಸ್ಪತ್ರೆಯಲ್ಲಿ ಲಭ್ಯತೆ ಇರುವಂತೆ ಆರೋಗ್ಯ ಕೇಂದ್ರಗಳು ಖಚಿತಪಡಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್, ಶಾಸಕ ಜಗದೇವ್ ಗುತ್ತೇದಾರ್, ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್, ಜಿಲ್ಲಾ ಪಂಚಾಯತ್ ಸಿ.ಇ.ಓ ಭನ್ವರ್ ಸಿಂಗ್ ಮೀನಾ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತ ಗುರುದತ್ತ ಹೆಗಡೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕ ಅವಿನಾಶ ಮೆನನ್ ರಾಜೇಂದ್ರನ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕ ಕೆ.ವಸಂತಕುಮಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಅಪರ ನಿರ್ದೇಶಕಿ ಚೆನ್ನಮ್ಮ ಕಟ್ಟಿ, ಕಲಬುರಗಿ ವಿಭಾಗಿಯ ಸಹ ನಿರ್ದೇಶಕ ಶಂಕ್ರಪ್ಪ ಮೈಲಾರೆ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಿಗಿ ಸೇರಿದಂತೆ ವಿಭಾಗದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತಾಲ್ಲೂಕಾ ಆರೋಗ್ಯಾಧಿಕಾರಿಗಳು ಭಾಗವಹಿಸಿದ್ದರು.



ಉದಯವಾಹಿನಿ ಚಿತ್ರ

> ಪ್ರಸಕ್ತ 2025-26ನೇ ಸಾಲಿನಲ್ಲಿ ಡಿಸೆಂಬರ್ ಅಂತ್ಯದ ವರೆಗೆ 90 ತಾಯಿ ಮರಣ ಪ್ರಮಾಣ ವಿಭಾಗದಲ್ಲಿ ದಾಖಲಾಗಿದೆ. ಕಲಬುರಗಿ ಜಿಲ್ಲೆಯಲ್ಲಿ 28 ತಾಯಂದಿರು ಮರಣ ಹೊಂದಿರುವುದು ಕಳವಳಕಾರ ಸಂಗತಿ. ಪ್ರತಿ ಮರಣದ ಪ್ರಕರಣವನ್ನು ಆಳವಾಗಿ ವಿಶ್ಲೇಷಿಸಿ, ಲೋಪದೋಷಗಳನ್ನು ಸರಿಪಡಿಸಬೇಕು. ಮುಂದಿನ ದಿನದಲ್ಲಿ ತಾಯಂದಿರ ಮರಣ ಪ್ರಮಾಣ ತಗ್ಗಿಸಲು ಕಡ್ಡಾಯವಾಗಿ ಆಸ್ಪತ್ರೆ ಹೆರಿಗೆ ಹೆಚ್ಚಿಸಬೇಕು. ಈ ಕುರಿತು ಸಮುದಾಯ ಮಟ್ಟದಲ್ಲಿ ಜಾಗೃತಿ ಮೂಡಿಸಬೇಕು -ದಿನೇಶ್ ಗುಂಡೂರಾವ್

**ಮೆಚ್ಚುಗೆ ವ್ಯಕ್ತಪಡಿಸಿದ ಸಚಿವರು**

ಕಳೆದ ಆಗಸ್ಟ್ ಮಾಹೆಯಿಂದ ಆರಂಭಿಸಲಾದ ''ಗೃಹ ಆರೋಗ್ಯ'' ಯೋಜನೆಯಡಿ ಮನೆ ಮನೆಗೆ ತೆರಳಿ ತಪಾಸಣೆ ನಡೆಸುವ ಕಾರ್ಯದಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಇದೂವರೆಗೆ 2,40,961 ಜನರನ್ನು ಸ್ಕ್ರೀನಿಂಗ್ ಮಾಡಿ ವಿಭಾಗದಲ್ಲಿಯೆ ಮುಂಚೂಣಿಯಲ್ಲಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ ಸಚಿವರು, ಇದೇ ರೀತಿಯ ಪ್ರಗತಿ ಇತರೆ ಜಿಲ್ಲೆಯಿಂದಲು ಅಪೇಕ್ಷಿಸಲಾಗುತ್ತದೆ ಎಂದರಲ್ಲದೆ ಡಯಾಲಿಸಿಸ್ ಸೇವೆ ನೀಡುವಲ್ಲಿ ಕಲಬುರಗಿ ಮತ್ತು ಬೀದರ್ ಜಿಲ್ಲೆಗಳು ಮುಂಚೂಣಿಯಲ್ಲಿರುವುದಕ್ಕೆ ಸಮಾಧಾನಪಟ್ಟರು.

## ಜೀತ ಪದ್ಧತಿ ನಿರ್ಮೂಲನಾ ದಿನಾಚರಣೆ: ಪ್ರತಿಜ್ಞಾವಿಧಿ ಸ್ವೀಕಾರ



ಉದಯವಾಹಿನಿ ಚಿತ್ರ

• ಉದಯವಾಹಿನಿ ಚಿತ್ರದುರ್ಗ

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯಲ್ಲಿ ಸೋಮವಾರ ಜೀತ ಪದ್ಧತಿ ನಿರ್ಮೂಲನಾ ದಿನಾಚರಣೆ ಯನ್ನು ಆಚರಿಸಲಾಯಿತು.

ಜೀತ ಪದ್ಧತಿ (ನಿರ್ಮೂಲನೆ) ಕಾಯಿದೆ 1976 ಜಾರಿಗೆ ಬಂದು 50 ವರ್ಷಗಳು ಪೂರೈಸುತ್ತಿರುವ ಹಿನ್ನೆಲೆಯಲ್ಲಿ, ಈ ವರ್ಷದ ಆಚರಣೆಯು ವಿಶೇಷ ಮಹತ್ವ ಪಡೆದುಕೊಂಡಿದೆ. ಕಾಯ್ದೆಯ ಆಶಯಗಳನ್ನು ಎತ್ತಿ ಹಿಡಿಯುವ ಮತ್ತು ಸಮಾಜದಲ್ಲಿ ಜೀತ ಪದ್ಧತಿಯಂತಹ ಅನಿಷ್ಟಗಳನ್ನು ತೊಲಗಿಸುವ ನಿಟ್ಟಿನಲ್ಲಿ ಎಲ್ಲರಲ್ಲಿಯೂ ಜಾಗೃತಿ ಮೂಡಿಸುವಂತೆ ಡಾ. ರೇಣುಪ್ರಸಾದ್ ಈ ಸಂದರ್ಭದಲ್ಲಿ ಹೇಳಿದರು. ಸಹಾಯಕ ಆಡಳಿತ ಅಧಿಕಾರಿ ಅನುಸೂಯಮ್ಮ ಜೀತ ಪದ್ಧತಿ ನಿರ್ಮೂಲನಾ ದಿನಾಚರಣೆ ಪ್ರತಿಜ್ಞೆ ಸಿಬ್ಬಂದಿಗೆ ಬೋಧಿಸಿದರು.

ಈ ವೇಳೆ ಕಚೇರಿ ಅಧಿಕ್ಷಕ ಗವಿಸಿದ್ದೇಶ್, ಇಸ್ಮೈಲ್, ಅಣ್ಣಪ್ಪ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಕೃಷ್ಣ ನಾಯಕ್ ಮತ್ತು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಜಾನಕಿ, ಪ್ರಥಮ ದರ್ಜೆ ಸಹಾಯಕರಾದ ತಿಪ್ಪೇಸ್ವಾಮಿ, ಬಾಬು, ರಾಜೇಶ್ವರಿ, ಲಕ್ಷ್ಮಿ, ಪುನೀತ್, ಜಿಲ್ಲಾ ಮೇಲ್ವಿಚಾರಕರಾದ ಸುರೇಶ್ ಬಾಬು, ಮಲ್ಲಿಕಾರ್ಜುನ್, ಗಂಗಾಧರ್, ಜಬ್ಬಾರ್ ಇದ್ದರು.

## ಸಹಕಾರಿ ಸಂಘಗಳು ಜನಪರವಾಗಿ ಕೆಲಸ ಮಾಡಲಿ: ಶ್ರೀಗಳು

• ಉದಯವಾಹಿನಿ ಬಳ್ಳಾರಿ

ಸಹಕಾರವು ಶರಣ ಸಂಸ್ಕೃತಿಯ ಜೀವಾಳವೇ ಆಗಿದೆ. ಹೊಸಪೇಟೆಯ ಈ ಬ್ಯಾಂಕ್ ಸ್ಥಾಪನೆ ಅದರ ಮುಂದುವರೆದ ಭಾಗವೇ ಆಗಿದೆ. ಸಮಾಜದ ವಿಸ್ಮೃತಿಗೆ ಒಳಗಾದ ಶ್ರೀ ಶರಣ ಸಕ್ಕರೆ ಕರಡೀಶ ಅವರ ಹೆಸರು ಈ ಸಹಕಾರಿ ಸಂಘಕ್ಕೆ ಇಟ್ಟಿದ್ದು ಸಮಯೋಚಿತ ಆಗಿದೆ ಎಂದು ಕೊಟ್ಟೂರು ಶ್ರೀಗಳು ಅಭಿಪ್ರಾಯ ಪಟ್ಟರು.

ಶ್ರೀ ಶರಣ ಸಕ್ಕರೆ ಕರಡೀಶ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ ಬ್ಯಾಂಕ್ ನ ಹೊಸಪೇಟೆ ಶಾಖೆಯ ಉದ್ಘಾಟನೆ ಮಾಡಿ ಮಾತನಾಡಿದ, ಅವರು ಬಡವರು, ಮಧ್ಯಮ ವರ್ಗದ ಜನರಿಗೆ ಈ ಸಂಘ ಅನುಕೂಲ ಮಾಡಲಿ ಎಂದು ಹಾರೈಸಿದರು. ಬಂದ ಲಾಭದ ಸ್ವಲ್ಪ ಭಾಗವನ್ನು ಸಮಾಜಕ್ಕೂ ಹಂಚಬೇಕು ಎಂದು ಒತ್ತಿ ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಧಾನ ಪರಿಷತ್ ಸದಸ್ಯರಾದ ಎಸ್. ವಿ. ಸಂಕನೂರ ಅವರು ಮಾತನಾಡಿ ''ಸಹಕಾರಿ ಸಂಘ ಬೆಳೆಯುತ್ತಿರುವುದು ತುಂಬ ಸಂತೋಷದ ಸಂಗತಿ. ಪಾರದರ್ಶಕ ಆಡಳಿತ ನೀಡಿದರೆ ಖಂಡಿತ ಸಹಕಾರ ಕ್ಷೇತ್ರ ಬೆಳವಣಿಗೆ ಆಗುವುದು ಖಚಿತ'' ಎಂದು ಹೇಳಿದರು.

ಸಂಡೂರಿನ ಪ್ರಭುದೇವರ ವಿರಕ್ತಮಠದ ಸ್ವಾಮೀಜಿಗಳಾದ ಪ್ರಭುಸ್ವಾಮಿಗಳು ಆಶೀರ್ವಚನ ನೀಡಿದರು.

ಇನ್ನೋರ್ವ ಅತಿಥಿಗಳಾದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಅಧ್ಯಕ್ಷರಾದ ಜೀ.ನಂಜನಗೌಡರು ಮಾತನಾಡಿ ಸಹಕಾರಿ ಸಂಸ್ಥೆ ನಿಜಕ್ಕೂ ಆರ್ಥಿಕವಾಗಿ ಸುಭದ್ರವಾಗಿದೆ.



ಉದಯವಾಹಿನಿ ಚಿತ್ರ

ಠೇವಣಿ ಸಂಗ್ರಹಣೆಗೆ ಯಾವ ಕೊರತೆಯೂ ಇಲ್ಲ. ಸಾಲ ಮಂಜೂರಾತಿಯಲ್ಲಿ ಸರಳ ನಿಯಮಗಳನ್ನು ಅಳವಡಿಸಿದ್ದೇವೆ. ಎಂದು ಹೇಳಿದರು. ಜೀ. ನೀಲಕಂಠಪ್ಪ, ಬಳ್ಳಾರಿ ಶ್ರೇಷ್ಠ ಸಹಕಾರಿ ರತ್ನ ಪ್ರಶಸ್ತಿ ಪಡೆದಿದ್ದಾರೆ. ಅವರಿಗೆ ಸನ್ಮಾನ ಮಾಡಿದರು. ವಿವಿಧ ಗಣ್ಯರಿಗೆ ಸನ್ಮಾನ ಮಾಡಲಾಯಿತು. ಶ್ರೀಮತಿ ಎನ್ ಪುಷ್ಪಾ ಮಲ್ಲಿಕಾರ್ಜುನ ಅವರು ಪ್ರಾರ್ಥನೆ ನೆರವೇರಿಸಿದರು. ಪ್ರಾಸ್ತಾವಿಕ ನುಡಿಯನ್ನು ಬ್ಯಾಂಕಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಕಲ್ಗುಡಿ ಮಂಜುನಾಥ ಅವರು ನೆರವೇರಿಸಿದರು. ಇದೇ ಸಂದರ್ಭದಲ್ಲಿ ಡಾ. ಮೃತ್ಯುಂಜಯ ರುಮಾಲೆ ಅವರು ಬರೆದ ''ಶರಣ ಸಕ್ಕರೆ ಕರಡೆಪ್ಪನವರು'' ಚಿತ್ರಗಿ ಪೂಜ್ಯರಿಂದ ಬಿಡುಗಡೆ ಗೊಳಿಸಲಾಯಿತು. ಷಾ ಭವರಲಾಲ್ ನಾಹರ್ ಬಿ.ಇಡಿ ಕಾಲೇಜಿನ ಅಧ್ಯಕ್ಷ ಗುಡೇಕೋಟೆ ನಾಗರಾಜ್ ಅವರು ವಂದನಾರ್ಪಣೆ ಮಾಡಿದರು.

## ಅಭಿವೃದ್ಧಿ ಕುಂಠಿತ ಹಿರೇಬಂಡಾಡಿಗೆ ಇನ್ನಷ್ಟು ಅನುದಾನ



ಉದಯವಾಹಿನಿ ಚಿತ್ರ

• ಉದಯವಾಹಿನಿ ಪುತ್ತೂರು

ಮಾಜಿ ಶಾಸಕರ ಊರಾಗಿರುವ ಹಿರೆಬಂಡಾಡಿ ಗ್ರಾಮ ಅಭಿವೃದ್ಧಿಯಲ್ಲಿ ಬಹುತೇಕ ಹಿಂದೆ ಬಿದ್ದಿದೆ. ಇಲ್ಲಿನ ಗ್ರಾಮೀಣ ರಸ್ತೆಗಳು ಕಾಂಕ್ರೀಟ್‌ಕರಣವಾಗದೆ ಜನರಿಗೆ ಸಮಸ್ಯೆಯಾಗಿದೆ. ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆ ಸರಿಯಾಗಿಲ್ಲ. ದಾರಿದೀಪ ಕೂಡಾ ಇಲ್ಲ. ಇಂತಹ ಸ್ಥಿತಿ ಖೇದಕರವಾದ ವಿಚಾರವಾಗಿದೆ. ಈಗಾಗಲೇ ಇಲ್ಲಿನ ಕೆಲ ಬೇಡಿಕೆಗಳನ್ನು ಈಡೇರಿಸಿದ್ದೇನೆ. ಈ ಗ್ರಾಮಕ್ಕೂ ಇನ್ನೂ ಹೆಚ್ಚಿನ ಅನುದಾನ ನೀಡುವುದಾಗಿ ಶಾಸಕ ಅಶೋಕ್ ರೈ ಹೇಳಿದರು. ಅವರು ಹಿರೆಬಂಡಾಡಿ ಗ್ರಾಮದ ವಿವಿಧ ಕಾಮಗಾರಿಗೆ ಶಿಲಾನ್ಯಾಸ ನಡೆಸಿ ಮಾತನಾಡಿದರು.

ಇಲ್ಲಿನ ಷಣ್ಮುಖ ದೇವಳದ ಕಾಮಗಾರಿ ಪೂರ್ಣಗೊಳಿಸಲು ಮಾಜಿ ಶಾಸಕರಿಂದ ಆಗಿಲ್ಲ ಎಂದು ದೇವಳದ ಪ್ರಮುಖರು ತಿಳಿಸಿದ್ದಾರೆ. ಅದಕ್ಕೂ ಅನುದಾನ ನೀಡುತ್ತೇನೆ. ಕೆಮ್ಮಾರ ಮಸೀದಿ ರಸ್ತೆ ಪಕ್ಕ ತಡೆಗೋಡೆ ನಿರ್ಮಾಣಕ್ಕೆ ರೂ.90ಲಕ್ಷ ಅನುದಾನ ಒದಗಿಸಿದ್ದೇನೆ. ಇಲ್ಲಿನ ಭಜನಾ ಮಂದಿರಕ್ಕೂ ಅನುದಾನ ನೀಡುವುದಾಗಿ ಅವರು ತಿಳಿಸಿದರು.

ಹಿರೆಬಂಡಾಡಿ ಗ್ರಾಪಂನಲ್ಲಿ ಕುಡಿಯುವ ನೀರಿಗೂ ತತ್ವಾರ ಉಂಟಾಗಿದೆ. ಅನುದಾನ ಇಡುವಲ್ಲಿ ರಾಜಕೀಯ ನಡೆಸಲಾಗುತ್ತಿದೆ. ಹರಿನಗರ ಕಾಲೋನಿಯ ನಳ್ಳಿಯಲ್ಲಿ ಮಣ್ಣು ಬರುತ್ತಿದೆ. ಇಷ್ಟು ವರ್ಷವಾದರೂ ನಮ್ಮ ಈ ಪ್ರದೇಶಕ್ಕೆ ಯಾವ ಶಾಸಕರೂ ಸಮಸ್ಯೆ ಆಲಿಸಲು ಬಂದಿಲ್ಲ. ಈಗ ನೀವು ಬಂದಿದ್ದೀರಿ. ಇಲ್ಲಿನ ಸಮಸ್ಯೆಗಳ ದೊಡ್ಡ ಪಟ್ಟಿಯೇ ಇದೆ. ಇಲ್ಲಿನ ಗ್ರಾಪಂ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಹರಿನಗರ ಗ್ರಾಮಸ್ಥರು ದೂರು ನೀಡಿದರು.

**ಮಾಜಿ ಅಧ್ಯಕ್ಷರ ಕಾರುಬಾರು..**

**ಹಿರೆಬಂಡಾಡಿ ಗ್ರಾಪಂಕಚೇರಿಗೆ ಹೋಗುವ ಹಾಗಿಲ್ಲ. ಅಲ್ಲಿ ಮಾಜಿ ಅಧ್ಯಕ್ಷರದ್ದೇ ಕಾರುಬಾರು. ಪಿಡಿಒ ಅವರು ಹೇಳಿದಂತೆ ಕುಣಿಯುತ್ತಿದ್ದಾರೆ. ಮಾಜಿ ಅಧ್ಯಕ್ಷರು ಹೇಳಿದರೆ ಮಾತ್ರ ಇಲ್ಲಿ ಕೆಲಸ ಆಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಹರಿನಗರ ಕಾಲೋನಿ ನಿವಾಸಿಗಳು ಪಿಡಿಒ ರಾಜಕೀಯ ಬಿಟ್ಟು ಕೆಲಸ ಮಾಡುವಂತೆ ಸೂಚಿಸಿ. ಮಾಜಿ ಅಧ್ಯಕ್ಷನನ್ನು ಗ್ರಾಪಂನಿಂದ ಹೊರಹಾಕಿ ಎಂದು ಮನವಿ ಮಾಡಿದರು.**

## ಪಂಚ ಗ್ಯಾರಂಟಿಯೊಂದಿಗೆ ಮೊದಲು ಆರೋಗ್ಯ ಗ್ಯಾರಂಟಿ ಕೊಡಿ

• ಉದಯವಾಹಿನಿ ಉಡುಪಿ

ಅಸ್ಪೃಶ್ಯರಿಗೆ, ಬಡವರಿಗೆ, ಕೂಲಿ ಕಾರ್ಮಿಕರಿಗೆ ಮೊತ್ತ ಮೊದಲಿಗೆ ಆರೋಗ್ಯದ ಗ್ಯಾರಂಟಿ ಕೊಡಿ ಆಮೇಲೆ ಉಳಿದ ಗ್ಯಾರಂಟಿ. ಬಡವರು, ಅಸ್ಪೃಶ್ಯರು, ಕೂಲಿ ಕಾರ್ಮಿಕರು ಆರೋಗ್ಯದಿಂದ ಬದುಕುಳಿದರೆ ಮಾತ್ರ ನಿಮ್ಮ ಪಂಚ ಗ್ಯಾರಂಟಿ ಉಪಯೋಗಕ್ಕೆ ಬರುವುದು. ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ) ಅಂಬೇಡ್ಕರ್ ವಾದ ಇದರ ರಾಜ್ಯ ಸಂಘಟನಾ ಸಂಚಾಲಕರಾದ ಸುಂದರ ಮಾಸ್ತರ್ ಹೇಳಿದರು.

ಅವರು ಇದೇ ಫೆಬ್ರವರಿ 2 ರಿಂದ 17 ರ ವರೆಗೆ ರಾಜ್ಯದ ವಿವಿಧ ಸಂಘಟನೆಗಳ ವತಿಯಿಂದ ನಡೆಯುವ ಆರೋಗ್ಯ ಹಕ್ಕಿನ ಜಾಥಾದ ಕುರಿತು ಪ್ರೆಸ್ ಕ್ಲಬ್ ನಲ್ಲಿ ನಡೆದ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡುತ್ತಿದ್ದರು. ಎಲ್ಲಾ ಸರಕಾರಿ ಆಸ್ಪತ್ರೆಗಳನ್ನು ಖಾಸಗಿಯವರ ಸಹಭಾಗಿತ್ವಕ್ಕೆ ವಹಿಸುತ್ತಿದ್ದಾರೆ. ಎಲ್ಲಾ ಸರಕಾರಿ ಆಸ್ಪತ್ರೆಗಳಲ್ಲೂ ಸರಿಯಾದ ಔಷಧಿಗಳಿಲ್ಲ, ವೈದ್ಯರು ಹೊರಗಡೆ ಮೆಡಿಕಲ್ ಗೆ ಚೀಟಿ ಬರೆದು ಕೊಡುತ್ತಿದ್ದಾರೆ. ಸರಕಾರಿ ಆಸ್ಪತ್ರೆಯನ್ನೇ ನಂಬಿಕೊಂಡಿರುವ ಅಸ್ಪೃಶ್ಯರು, ಬುಡಕಟ್ಟು ಸಮುದಾಯದವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲಾಗದೆ ಚಿಕ್ಕಪ್ರಾಯದಲ್ಲೇ ಅಸುನೀಗುತ್ತಿದ್ದಾರೆ. ಬಡವರು ಸರಕಾರಿ ಆಸ್ಪತ್ರೆಯಲ್ಲಿ ಸೂಕ್ತ ಔಷಧಿ, ಚಿಕಿತ್ಸೆ ಸಿಗದೆ ಪರದಾಡುವಂತಾಗಿದೆ, ಖಾಸಗೀ ಸಹಭಾಗಿತ್ವದ ಸರಕಾರಿ ಆಸ್ಪತ್ರೆಗಳು ದುಭಾರಿ ಚಿಕಿತ್ಸಾ ವೆಚ್ಚ ಹಾಕುವುದರಿಂದ ಬಡವರು ಸಂವಿಧಾನ ದತ್ತ ಆರೋಗ್ಯ ಹಕ್ಕಿನಿಂದ ವಂಚಿತರಾಗಿದ್ದಾರೆ.

ಈ ಸರಕಾರಿ ಆಸ್ಪತ್ರೆಗಳ ಅನಾನುಕೂಲಗಳನ್ನು ವಿರೋಧಿಸಿ ರಾಜ್ಯಾದ್ಯಂತ ನಡೆಯುವ ಪ್ರತಿಭಟನಾ ಜಾಥಾದಂತೆ ಉಡುಪಿಯಲ್ಲೂ ಸಹ ಇದೇ ತಾರೀಖು 10-02-2026 ಮಂಗಳವಾರದಂದು ಕೊರಗ ಒಕ್ಕೂಟ, ಇತರ ಸಹಭಾಗೀ ಸಂಘಟನೆಯೊಂದಿಗೆ ಆರೋಗ್ಯ ಹಕ್ಕಿನ ಜಾಥಾ ಮಣಿಪಾಲ ಟೈಗರ್ ಸರ್ಕಲ್‌ನಿಂದ ಜಿಲ್ಲಾಧಿಕಾರಿ ಕಛೇರಿ ವರೆಗೆ ನಡೆಯಲಿದೆ.




ಉದಯವಾಹಿನಿ ಚಿತ್ರ

> ಈ ಸರಕಾರಿ ಖಾಸಗೀ ಸಹಭಾಗಿತ್ವ ಕಾರ್ಯಕ್ರಮವನ್ನು ಕೂಡಲೇ ಕೈಬಿಡಬೇಕು?.. ಈ ವ್ಯವಸ್ಥೆಯನ್ನು ಈ ಕೂಡಲೇ ಕೈ ಬಿಡದಿದ್ದರೆ ಬಡವರು, ಕೂಲಿ ಕಾರ್ಮಿಕರು, ಬುಡಕಟ್ಟು ಸಮೂದಾಯದವರು, ಅಸ್ಪೃಶ್ಯರು ಮುಂದಿನ ಬಾರಿ ಇದೇ ಸರಕಾರ ಮುಂದುವರಿಯುವ ಗ್ಯಾರಂಟಿಯನ್ನು ಸಹ ನಿಲ್ಲಿಸಬೇಕಾಗಬಹುದು.
> -ಸುಂದರ ಮಾಸ್ತರ್

## ಆಲಮೇಲ ಬಸ್ ನಿಲ್ದಾಣದಲ್ಲಿ ಹಾಡಹಗಲೇ ಸರಗಳ್ಳತನ

• ಉದಯವಾಹಿನಿ ಆಲಮೇಲ

ಪಟ್ಟಣದ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವ ವೇಳೆ ಮಹಿಳೆಯೊಬ್ಬರ ಕೊರಳಿನಿಂದ ಅಂದಾಜು ಮೂರು ತೊಲ ಚಿನ್ನದ ಸರವನ್ನು ಬೈಕ್ ಮೇಲೆ ಬಂದ ಇಬ್ಬರು ಕಳ್ಳರು ಕಿತ್ತುಕೊಂಡು ಪರಾರಿಯಾದ ಘಟನೆ ನಡೆದಿದೆ. ನಿಲ್ದಾಣಕ್ಕೆ ಬಸ್ ಬರುತ್ತಿದ್ದಂತೆ ಪ್ರಯಾಣಿಕರು ಬಸ್ ಹತ್ತಲು ಮುಗಿಬಿದ್ದಿದ್ದಾರೆ. ಈ ಜನದಟ್ಟಣೆಯ ವೇಳೆಯಲ್ಲಿ ಬೈಕ್ ಮೇಲೆ ಬಂದ ಇಬ್ಬರು ಕಳ್ಳರು, ಬಸ್ ಹತ್ತುತ್ತಿದ್ದ ಮಹಿಳೆಯ ಕೊರಳಿಗೆ ಕೈ ಹಾಕಿ ಸರವನ್ನು ಕಿತ್ತುಕೊಂಡಿದ್ದಾರೆ. ಕ್ಷಣಾರ್ಧದಲ್ಲಿ ನಡೆದ ಈ ಕೃತ್ಯದಿಂದ ಮಹಿಳೆ ಹೌಹಾರಿ ದಿಕ್ಕು ಕಾಣದೆ ಏರಿದ ದನಿಯಲ್ಲಿ ಕಿರುಚಾಡಿದ್ದಾರೆ. ಆಗ ಕಳ್ಳರು ಬೈಕ್‌ನಲ್ಲಿ ವೇಗವಾಗಿ ಪರಾರಿಯಾಗಿದ್ದು, ಆಲಮೇಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ಜರುಗಿದೆ.

**ಮನವಿಗಳಿಗೆ ಬೆಲೆ ನೀಡದ ಸಾರಿಗೆ ಇಲಾಖೆ:** ಆಲಮೇಲ ಬಸ್ ನಿಲ್ದಾಣದಲ್ಲಿ ಭದ್ರತೆಗಾಗಿ ಸಿಸಿಟಿವಿ ಅಳವಡಿಸಲು ಸಾರಿಗೆ ಇಲಾಖೆಗೆ ಹಲವಾರು ಬಾರಿ ಮನವಿ ಸಲ್ಲಿಸಲಾಗಿತ್ತು. ಆದರೆ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಸಾರ್ವಜನಿಕರು ತಮ್ಮ ಬೆಲೆಬಾಳುವ ಆಭರಣಗಳನ್ನು ಕಳೆದುಕೊಳ್ಳುವಂತಾಗಿದೆ ಎಂದು ಸಾರ್ವಜನಿಕರು ಕಿಡಿಕಾರಿದ್ದಾರೆ.

## ಬಸ್ ಹತ್ತುವಾಗ ಚಿನ್ನಾಭರಣ ಕಳವು

• ಉದಯವಾಹಿನಿ ಕಲಬುರಗಿ

ಮಹಿಳೆಯೊಬ್ಬರು ಬಸ್ ಹತ್ತುವಾಗ ಅವರ ವ್ಯಾನಿಟಿ ಬ್ಯಾಗ್‌ನಲ್ಲಿದ್ದ 4.50 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಕಳವಾದ ಘಟನೆ ನಡೆದಿದೆ. ಶಹಾಬಾದ ತಾಲ್ಲೂಕಿನ ಭಂಕೂರ ಗ್ರಾಮದ ಸಂಗೀತಾ ಪ್ರಕಾಶ ಗೌರ ಎಂಬುವವರೆ ಚಿನ್ನಾಭರಣ ಕಳೆದುಕೊಂಡಿದ್ದು, ಅವರು ಈ ಸಂಬಂಧ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ಸಂಗೀತಾ ಅವರು ಕಲಬುರಗಿಯಲ್ಲಿ ಸಂಬಂಧಿಕರೊಬ್ಬರ ಧಾರ್ಮಿಕ ಕಾರ್ಯಕ್ರಮ ಇದ್ದ ಪ್ರಯುಕ್ತ ಭಂಕೂರ ಗ್ರಾಮದಿಂದ ಸಹೋದರಿಯೊಂದಿಗೆ ಕಲಬುರಗಿಗೆ ಬಂದಿದ್ದಾರೆ. ಕಾರ್ಯಕ್ರಮ ಮುಗಿದ ನಂತರ ಮರಳಿ ಊರಿಗೆ ಹೋಗಲು ಸಾಯಂಕಾಲ ರಾಮ ಮಂದಿರ ಹತ್ತಿರ ಬಸ್ ಹತ್ತಿದ್ದಾರೆ. ಟಿಕೆಟ್ ತೆಗೆಯಲು ವ್ಯಾನಿಟಿ ಬ್ಯಾಗ್ ನೋಡಿದಾಗ ಬ್ಯಾಗ್‌ನ ಚೈನ್ ತೆರೆದಿದ್ದು, ಅದರಲ್ಲಿದ್ದ 1.50 ಲಕ್ಷ ರೂ.ಮೌಲ್ಯದ 10 ಗ್ರಾಂ.ಬಂಗಾರದ ಸರ, 3 ಲಕ್ಷ ರೂ. ಮೌಲ್ಯದ 20 ಗ್ರಾಂ.ಬಂಗಾರದ ಎರಡೆಳೆ ಸರ ಕಳವಾಗಿರುವುದು ಗಮನಕ್ಕೆ ಬಂದಿದೆ. ಈ ಸಂಬಂಧ ಅವರು ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

## ಖೂಬಾ ಅವರ ಕೀಳು ಪದ ಬಳಕೆ ಖಂಡನೆ: ಜಿಲ್ಲಾ ಕಾಂಗ್ರೆಸ್ ಆಕ್ರೋಶ

• ಉದಯವಾಹಿನಿ ಬೀದರ್

ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಅವರು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರ ಕುರಿತು ಕೀಳು ಪದ ಬಳಸಿ ಅವಹೇಳನಕಾರಿಯಾಗಿ ಮಾತನಾಡಿರುವುದನ್ನು ಜಿಲ್ಲಾ ಕಾಂಗ್ರೆಸ್ ಸಮಿತಿ ತೀವ್ರವಾಗಿ ಖಂಡಿಸಿದೆ.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ, ಉಪಾಧ್ಯಕ್ಷ ಬಾಬುರಾವ ತುಂಬಾ ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ಮಹ್ಮದ್ ಸಮಿ, ಜಾರ್ಜ್ ಫರ್ನಾಂಡೀಸ್, ಕಾರ್ಯದರ್ಶಿಗಳಾದ ಸುನೀಲ್ ಬಚ್ಚನ್ ಹಾಗೂ ರವೀಂದ್ರ, ಅವರು ಈ ಕುರಿತು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ರಾಜಕೀಯ ಜೀವನದಲ್ಲಿ ಪರಸ್ಪರ ಟೀಕೆ ಸಹಜವಾದರೂ, ವೈಯಕ್ತಿಕವಾಗಿ ಅವಹೇಳನ ಮಾಡುವುದು ಹಾಗೂ ಅಸಭ್ಯ ಭಾಷೆ ಬಳಸುವುದು ಸಂಸದ ಮತ್ತು ಕೇಂದ್ರ ಸಚಿವರಾಗಿದ್ದ ವ್ಯಕ್ತಿಗೆ ಶೋಭೆ ತರುವಂತದ್ದಲ್ಲ ಎಂದು ಅವರು ಹೇಳಿದ್ದಾರೆ. ಕ್ಷೇತ್ರದ ಜನತೆ ಖೂಬಾ ಅವರಿಗೆ 10 ವರ್ಷ ಸಂಸದರಾಗುವ ಅವಕಾಶ ನೀಡಿದ್ದು, ಇದೀಗ ಸಾಗರ್ ಖಂಡ್ರೆ ಅವರಿಗೆ ಅವಕಾಶ ನೀಡಿದ್ದಾರೆ. ಜನರ ತೀರ್ಪನ್ನು ಗೌರವಿಸಿ, ಜಿಲ್ಲೆಯ ಅಭಿವೃದ್ಧಿಗೆ ಸಹಕರಿಸಬೇಕು. ಪ್ರತಿಯೊಂದು ವಿಷಯದಲ್ಲೂ ವಿರೋಧ ವ್ಯಕ್ತಪಡಿಸಿ ವೈಯಕ್ತಿಕ ಟೀಕೆ ಮಾಡುವುದು ಜನಾಭಿಪ್ರಾಯಕ್ಕೆ ವಿರುದ್ಧವಾಗಿದೆ ಎಂದು ಕಾಂಗ್ರೆಸ್ ಮುಖಂಡರು ಅಭಿಪ್ರಾಯಪಟ್ಟಿದ್ದಾರೆ.

## ಮಕ್ಕಳ ಮೇಲೆ ಬೀದಿ ನಾಯಿಗಳ ದಾಳಿ ಮೂರು ಮಕ್ಕಳಿಗೆ ಗಂಭೀರ ಗಾಯ

• ಉದಯವಾಹಿನಿ ಜಮಖಂಡಿ

ನಗರದಲ್ಲಿ ಮಕ್ಕಳ ಮೇಲೆ ಬೀದಿ ನಾಯಿಗಳ ದಾಳಿ ನಡೆಸಿರುವ ಘಟನೆ ಜರುಗಿದೆ. ಜಮಖಂಡಿ ನಗರದ ರಾಮದೇವ ಗಲ್ಲಿ, ತುಪ್ಪದ ಗಲ್ಲಿ ಹಾಗೂ ಸಿಕ್ಕಲಗಾರ ಗಲ್ಲಿಯಲ್ಲಿ ಮಕ್ಕಳು ಆಟ ಆಡುತಿರುವ ಸಂಧರ್ಭದಲ್ಲಿ ಏಕಾಏಕಿಯಾಗಿ ಬೀದಿ ನಾಯಿಗಳು ಮಕ್ಕಳ ಮೇಲೆ ದಾಳಿ ಮಾಡಿವೆ ಎಂದು ಮಾಹಿತಿ ಲಭ್ಯವಾಗಿದೆ.

ರಾಮದೇವ ಗಲ್ಲಿಯ 5 ವರ್ಷದ ಮಗು ಯುವನ ಸಾಗರ ಭಾಗೋಜಿ, ತುಪ್ಪದ ಗಲ್ಲಿಯ 6 ವರ್ಷದ ಪ್ರಭು ಸದಾಶಿವ ತುಪ್ಪದ್, ಶಿಕ್ಕಲಗಾರ ಓಣಿಯ 4 ವರ್ಷದ ರೇಖಾ ಸುನೀಲ ಸಿಕ್ಕಲಗಾರ ಎಂದು ಮಾಹಿತಿ ತಿಳಿದು ಬಂದಿದೆ. ಆದಷ್ಟು ಬೇಗನೆ ಸಂಭಂದ ಪಟ್ಟ ಅಧಿಕಾರಿಗಳು ಬೀದಿ ನಾಯಿಗಳ ಹಾವಳಿಗೆ ಕಡಿವಾಣ ಹಾಕಬೇಕು ಎಂದು ಪೋಷಕರು ಮನವಿ ಮಾಡಿದ್ದಾರೆ.

# ಬಡವರ ಮನೆ ಸೇರಬೇಕಿದ್ದ ಅನ್ನಭಾಗ್ಯ ಅಕ್ಕಿಗೆ ಕನ್ನ

## ಉತ್ತರ ಕನ್ನಡ ಜಿಲ್ಲೆಯಲ್ಲಿ ಬಡವರ ಹೊಟ್ಟೆ ತುಂಬಿಸಬೇಕಿದ್ದ ಅಕ್ಕಿ ಕಾಳಸಂತೆ ಮಾರಾಟಗಾರರ ಪಾಲು

• ಉದಯವಾಹಿನಿ ಕಾರವಾರ

**ನೂರಾರು ಕ್ವಿಂಟಲ್ ಅಕ್ರಮ ಅಕ್ಕಿ ವಶ**

ರಾಜ್ಯದ ವಿವಿಧೆಡೆ ಸುದ್ದಿಯಾಗಿದ್ದ ಅನ್ನಭಾಗ್ಯ ಅಕ್ಕಿಯ ಕಾಳಸಂತೆಯ ಮಾರಾಟವು ಜಿಲ್ಲೆಯಲ್ಲಿಯೂ ಆರಂಭವಾಗಿದೆ. ಬಡವರ ಕೈ ಸೇರಬೇಕಿದ್ದ ಅನ್ನಭಾಗ್ಯ ಯೋಜನೆಯ ಅಕ್ಕಿಯನ್ನು ಆಹಾರ ಇಲಾಖೆಯ ಕಣ್ತಪ್ಪಿಸಿ ಅಕ್ರಮವಾಗಿ ಸಂಗ್ರಹಿಸಿ ಮಾರಾಟ ಮಾಡುವ ಪ್ರಕರಣಗಳು ಹೆಚ್ಚುತ್ತಿವೆ. 2025ರ ಏಪ್ರಿಲ್ ತಿಂಗಳಿನಿಂದ ಇಲ್ಲಿಯವರೆಗೆ ಆಹಾರ ಇಲಾಖೆ ನಡೆಸಿದ ದಾಳಿಗಳಲ್ಲಿ 9.32 ಲಕ್ಷ ರೂ. ಮೌಲ್ಯದ 192.94 ಕ್ವಿಂಟಲ್ ಅನ್ನಭಾಗ್ಯ ಅಕ್ಕಿಯನ್ನು ವಶಕ್ಕೆ ಪಡೆಯಲಾಗಿದೆ. ಈ ಕುರಿತು ಭಟ್ಕಳ ತಾಲೂಕಿನಲ್ಲಿ ಐದು, ಶಿರಸಿ ಮತ್ತು ಕಾರವಾರದಲ್ಲಿ ತಲಾ ಒಂದು ಪ್ರಕರಣ ದಾಖಲಾಗಿದೆ. ಅಕ್ರಮ ಸಾಗಣೆಗೆ ಬಳಸಿದ ಒಂದು ಆಟೋ, ಒಂದು ಕ್ಯಾಂಟರ್ ಸೇರಿ ಒಟ್ಟೂ ಏಳು ವಾಹನಗಳನ್ನು ಜಪ್ತಿ ಮಾಡಲಾಗಿದೆ. ಹಲವರ ಮೇಲೆ ಪ್ರಕರಣ ಕೂಡ ದಾಖಲಿಸಲಾಗಿದೆ. ಈ ಎಲ್ಲಾ ಪ್ರಕರಣಗಳೂ ಪಡಿತರ ಗ್ರಾಹಕರು ಮಾರಾಟ ಮಾಡಿರುವ ಅಕ್ಕಿಯನ್ನು ಸಂಗ್ರಹಿಸಿ ಅಕ್ರಮವಾಗಿ ಸಾಗಣೆ ಮಾಡುವಾಗ ಪತ್ತೆಯಾಗಿವೆ ಎಂದು ಆಹಾರ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.


ಅನ್ನಭಾಗ್ಯ ಅಕ್ಕಿಯನ್ನು ಆಹಾರ ಇಲಾಖೆಯಿಂದ ಟೆಂಡರ್ ಪಡೆದ ಅಧಿಕೃತ ಸಂಸ್ಥೆಗಳೇ ನಿಗದಿತ ವಾಹನಗಳ ಮೂಲಕ ಸಾಗಣೆ ಮಾಡಬೇಕು. ಸರಕಾರಿ ಉಗ್ರಾಣಗಳು ಹಾಗೂ ಪಡಿತರ ಅಂಗಡಿಗಳಲ್ಲಿ ನಿರ್ದಿಷ್ಟ ಪ್ರಮಾಣದಲ್ಲೇ ಅಕ್ಕಿ ಸಂಗ್ರಹಕ್ಕೆ ಅವಕಾಶವಿದ್ದು, ಅಕ್ರಮವಾಗಿ ಮಾರಾಟ, ದಾಸ್ತಾನು ಅಥವಾ ಸಾಗಣೆ ಮಾಡುವುದು ಅಪರಾಧ. ಆದರೂ ಉತ್ತಮ ಗುಣಮಟ್ಟ ಮತ್ತು ಕಡಿಮೆ ಬೆಲೆಯ ಕಾರಣದಿಂದ ಅನ್ನಭಾಗ್ಯ ಅಕ್ಕಿಗೆ ಕಾಳಸಂತೆಯಲ್ಲಿ ಬೇಡಿಕೆ ಹೆಚ್ಚಿದ್ದು, ಇದನ್ನು ದುರುಪಯೋಗಪಡಿಸಿಕೊಂಡ ಅಕ್ರಮ ವ್ಯಾಪಾರಿಗಳು ಟನ್ ಗಟ್ಟಲೆ ಅಕ್ಕಿಯನ್ನು ಸಂಗ್ರಹಿಸಿ ಮಾರಾಟ ಮಾಡುತ್ತಿರುವುದು ದಾಳಿ ವೇಳೆ ಪತ್ತೆಯಾಗಿದೆ.

- ರಾಜ್ಯದಲ್ಲಿ ಅಕ್ರಮ ಅನ್ನಭಾಗ್ಯ ಅಕ್ಕಿಯಲ್ಲಿ ಅಕ್ರಮ ಪ್ರಕರಣಗಳಲ್ಲಿ ಹೆಚ್ಚಳ.
- ಉತ್ತರ ಕನ್ನಡ ಜಿಲ್ಲೆಯಲ್ಲಿ ಬಡವರ ಹೊಟ್ಟೆ ತುಂಬಿಸಬೇಕಿದ್ದ ಅಕ್ಕಿ ಕಾಳಸಂತೆ ಮಾರಾಟಗಾರರ ಪಾಲು.
- ಕೆಲವೇ ತಿಂಗಳಿನಲ್ಲಿ ಬರೋಬ್ಬರಿ 9 ಲಕ್ಷ ಮೌಲ್ಯದ 192.94 ಕ್ವಿಂಟಾಲ್ ಅಕ್ರಮ ಅಕ್ಕಿ ವಶ.




> ಪಡಿತರ ಚೀಟಿದಾರರು ಪಡಿತರ ಅಕ್ಕಿ ಮಾರಾಟ ಮಾಡುವುದು ಕಂಡು ಬಂದರೆ ಅವರ ಪಡಿತರ ಚೀಟಿ ರದ್ದು ಮಾಡುವ ಬಗ್ಗೆ ಪ್ರತಿಯೊಂದು ನ್ಯಾಯಬೆಲೆ ಅಂಗಡಿಯಲ್ಲಿ ಫಲಕ ಹಾಕಲಾಗಿದೆ. ಯಾರಾದರೂ ಪಡಿತರ ಅಕ್ಕಿ ಪಡಿತರ ಚೀಟಿದಾರರಿಂದ ಕಡಿಮೆ ದರದಲ್ಲಿ ಕೊಂಡುಕೊಂಡು ಸಂಗ್ರಹಣೆ ಅಥವಾ ಸಾಗಣೆ ಮಾಡಿದರೆ ಅವರ ಮೇಲೆ ವಸ್ತು ಕಾಯ್ದೆ 1955 ಅಡಿ ಪ್ರಕರಣ ದಾಖಲಿಸಲಾಗುವುದು. ಸಾರ್ವಜನಿಕರು ಪಡಿತರ ಅಕ್ಕಿ ಮಾರಾಟ ಬಗ್ಗೆ ಮಾಹಿತಿ ಇದ್ದರೆ ತಮ್ಮ ತಾಲ್ಲೂಕಿನ ತಹಶೀಲ್ದಾರರಿಗೆ ಮಾಹಿತಿ ನೀಡಬೇಕು. -ಮಂಜುನಾಥ ರೇವಣಕರ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕರು

# ಚಂದ್ರನ ಮೇಲೆ ಸಿಟಿ ನಿರ್ಮಾಣಕ್ಕೆ ಮಸ್ಕ್ ಸಜ್ಜು



**ಅಮೆರಿಕ:** ಇತ್ತೀಚೆಗೆ ಭೂಮಿ ಮೇಲೆ ಜನಸಂಖ್ಯೆ ಹೆಚ್ಚಳದಿಂದಾಗಿ ಜನರಿಗೆ ಬದುಕಲು ಸೂರು ಸಿಗುವುದು ಬಹಳನೇ ಕಷ್ಟದ ಪರಿಸ್ಥಿತಿಯಾಗಿದೆ. ಆದರೆ, ಸಮಸ್ಯೆ ಏನೇ ಇರಲಿ ನಾನು ಎಲ್ಲರಿಗಿಂತಲೂ ಮುಂದಾಗಿ ಯೋಚನೆ ಮಾಡಿ ಭವಿಷ್ಯವನ್ನು ತಂತ್ರಜ್ಞಾನದ ಮೂಲಕ ನಾನೇ ರೂಪಿಸುತ್ತೇನೆ ಎಂಬ ಹುಮ್ಮಸ್ಸಿನಲ್ಲಿರುವ ಪ್ರಪಂಚದ ಅತ್ಯಂತ ಶ್ರೀಮಂತ ಉದ್ಯಮಿ ಸ್ಪೇಸ್ ಎಕ್ಸ್ ಮಾಲೀಕ ಎಲಾನ್ ಮಸ್ಕ್ ಭೂಮಿಯಲ್ಲಿ ಇದಿದ್ದು ಸಾಕು, ನಾನು ಮುಂದಿನ 10 ವರ್ಷಗಳಲ್ಲಿ ಚಂದ್ರನ ಮೇಲೆ ನಗರವನ್ನು ಕಟ್ಟಿ ಅಲ್ಲಿ ವಾಸಿಸುವಂತೆ ಮಾಡುತ್ತೇನೆ ಎಂದು ಘೋಷಿಸಿದ್ದಾರೆ. ಈಗಾಗಲೇ ಮಂಗಳ ಗ್ರಹ ಹಾಗೂ ಚಂದ್ರನ ಮೇಲ್ಮೈ ಮೇಲೆ ಮನುಷ್ಯರು ವಾಸಿಸಲು ಸಾಧ್ಯವೇ ಎಂಬುದರ ಕುರಿತಂತೆ ಹಲವು ಸಂಶೋಧನೆಗಳು ನಡೆಯುತ್ತಿದ್ದು, ಇದರಲ್ಲಿ ಚೀನಾ ಅಮೆರಿಕಾ ಸೇರಿದಂತೆ ಹಲವು ದೇಶಗಳ ವಿಜ್ಞಾನಿಗಳು ಇವುಗಳನ್ನು ಆಕ್ರಮಿಸಿಕೊಂಡು ಫ್ಯೂಚರ್ ಸಿಟಿಗಳನ್ನು ನಿರ್ಮಾಣ ಮಾಡುವ ಆಲೋಚನೆಗಳನ್ನು ರೂಪಿಸಿಕೊಳ್ಳುತ್ತಿದ್ದಾರೆ.

**ಚಂದ್ರನ ಅಂಗಳದಲ್ಲಿ ಸಿಟಿ ನಿರ್ಮಾಣಕ್ಕೆ ಮಸ್ಕ್ ಸಿದ್ಧತೆ:** ಈ ರೇಸ್‌ನಲ್ಲಿ ಸದ್ಯ ಎಲ್ಲರಿಗಿಂತ ಮುಂದೆ ಇರುವ ಹಂಬಲದಲ್ಲಿರುವ ಎಲಾನ್ ಮಸ್ಕ್ ಭಾನುವಾರ(ಫೆ.8) ತಮ್ಮ ಅಧಿಕೃತ ಎಕ್ಸ್ ಖಾತೆಯ ಮೂಲಕ ಈ ಮಹತ್ವದ ಘೋಷಣೆಯನ್ನು ಮಾಡಿದ್ದಾರೆ. ಇದರಲ್ಲಿ ಮಸ್ಕ್ ಸ್ಪೇಸ್‌ಎಕ್ಸ್ ಈಗಾಗಲೇ ಚಂದ್ರನ ಮೇಲೆ ಸ್ವಯಂ-ಬೆಳೆಯುವ ನಗರವನ್ನು ನಿರ್ಮಿಸುವತ್ತ ಗಮನ ಹರಿಸಿದೆ. ಏಕೆಂದರೆ, ಚಂದ್ರನ ಮೇಲೆ ನಗರವನ್ನು ನಿರ್ಮಿಸಲು ಕೇವಲ ನಮಗೆ 10 ವರ್ಷಕ್ಕಿಂತ ಕಡಿಮೆ ಸಮಯ ಬೇಕಾಗಬಹುದು ಎಂದು ತಿಳಿಸಿದ್ದಾರೆ.

- 10 ವರ್ಷಗಳಲ್ಲಿ ಚಂದ್ರನ ಮೇಲೆ ಸಿಟಿ ನಿರ್ಮಾಣ ಮಾಡಲು ಎಲಾನ್ ಮಸ್ಕ್ ಬಿಗ್ ಪ್ಲ್ಯಾನ್
- ಚಂದ್ರನಾದ ಮೇಲೆ ಮಸ್ಕ್ ನೆಕ್ಸ್ಟ್ ಟಾರ್ಗೆಟ್ ಮಂಗಳ ಗ್ರಹವಂತೆ
- ಏನಿದು ಸ್ಪೇಸ್ ಎಕ್ಸ್ ಮಾಲೀಕನ ಔಟ್ ಆಫ್ ಅರ್ಥ್ ರಿಯಲ್ ಎಸ್ಟೇಟ್ ಪ್ಲ್ಯಾನಿಂಗ್ ?

**ಮಂಗಳನಿಂದ ಚಂದ್ರನೆಡೆಗೆ ಮಸ್ಕ್ ಪ್ಲ್ಯಾನ್ ಶಿಫ್ಟ್ ಏಕೆ?:** ಹಲವು ವರ್ಷಗಳಿಂದ, ಮಸ್ಕ್ ಮಂಗಳವನ್ನು ವಸಾಹತುವನ್ನಾಗಿ ಮಾಡುವ ಕಲ್ಪನೆಯೊಂದಿಗೆ ಇದ್ದಾರೆ. ಆದರೆ ಸದ್ಯ, ಚಂದ್ರನ ಮೇಲೆ ಗಮನ ಹರಿಸುವುದಕ್ಕೆ ಕಾರಣವಿದೆ. ಭೂಮಿ ಮತ್ತು ಮಂಗಳ ಗ್ರಹಗಳನ್ನು ಒಂದೇ ಸಾಲಿನಲ್ಲಿ ನೇರವಾಗಿ ಜೋಡಿಸಲು ಸರಿಸುಮಾರು ಪ್ರತಿ 26 ತಿಂಗಳ ಕಾಲ ಹಿಡಿಯುತ್ತದೆ ಅಂದರೆ ಸುಮಾರು 6 ತಿಂಗಳ ಪ್ರಯಾಣದಷ್ಟು ಸಮಯವಾಗಲಿದೆ. ಇದರಿಂದ ಪ್ರತಿ 6 ತಿಂಗಳಿಗೊಮ್ಮೆ ಮಾತ್ರ ಉಡಾವಣೆ

ಮಂಗಳನಂಗಳಕ್ಕೂ ಕಾಲಿಡುವ ಹಿಂಟ್

### ಮಂಗಳ ಗ್ರಹವನ್ನು ಸಿಟಿ ಮಾಡುತ್ತಾರಂತೆ ಮಸ್ಕ್

**ಮುಂದುವರೆದು, ಮಂಗಳ ಗ್ರಹವನ್ನು ಆಕ್ರಮಿಸಿ ಅದರ ಮೇಲೆಯೂ ನಗರವನ್ನು ಕಟ್ಟುವ ಯೋಜನೆಯ ಕುರಿತು ಹೇಳಿಕೊಂಡಿದ್ದು, ಚಂದ್ರನ ಮೇಲೆ ನಗರವನ್ನು ನಿರ್ಮಿಸಲು 10 ವರ್ಷಗಳ ಅವಧಿ ಬೇಕಾದರೆ, ಮಂಗಳ ಗ್ರಹದ ಮೇಲೆ ನಗರವನ್ನು ನಿರ್ಮಿಸಲು ಬರೋಬ್ಬರಿ 20ಕ್ಕೂ ಹೆಚ್ಚು ವರ್ಷಗಳು ಬೇಕಾಗುತ್ತದೆ. ಆದಾಗ್ಯೂ, ಮುಂದಿನ 5-7 ವರ್ಷಗಳಲ್ಲಿ ಮಂಗಳ ಗ್ರಹದ ಮೇಲೆ ನಗರ ನಿರ್ಮಾಣ ಕಾರ್ಯವನ್ನೂ ಆರಂಭಿಸಲಿದ್ದೇವೆ. ಆದರೆ ಸದ್ಯ, ನಾಗರಿಕತೆಯ ಭವಿಷ್ಯವನ್ನು ಭದ್ರಪಡಿಸುವುದು ಪ್ರಮುಖ ಆದ್ಯತೆಯಾಗಿರುವುದರಿಂದ, ಮಂಗಳ ಗ್ರಹಕ್ಕಿಂತ ಚಂದ್ರನ ಮೇಲೆ ನಗರ ನಿರ್ಮಾಣ ಕೆಲಸ ವೇಗವಾಗಲಿದೆ ಎಂದು ಹೇಳಿದ್ದಾರೆ.**

ನಡೆಸಲುಸಾಧ್ಯವಾಗಲಿದೆ. ಆದರೆ, ಚಂದ್ರನಿಂದ ಭೂಮಿಗೆ ಇರುವ ಕಡಿಮೆ ಅಂತರದಿಂದಾಗಿ ಈ 10 ದಿನಗಳು(2 ದಿನಗಳ ಪ್ರಯಾಣದ ಸಮಯ) ಚಂದ್ರನ ಮೇಲೆ ಹಾರಲು ಸಾಧ್ಯ ಎಂದು ವಿವರಿಸಿದ್ದಾರೆ.ಹೀಗೆ ಬಾನಿಗೊಂದು ಎಲ್ಲೆ ಎಲ್ಲಿದೆ, ನಿನ್ನ ಆಸೆಗೆಲ್ಲಿ ಕೊನೆಯಿದೆ ಎಂಬಂತೆ ಎಲಾನ್ ಮಸ್ಕ್ ಹಲವು ವರ್ಷಗಳಿಂದ ಗ್ರಹಗಳಲ್ಲಿ ಮಾನವರು ಭವಿಷ್ಯವನ್ನು ರೂಪಿಸಿಕೊಳ್ಳುವ ಫ್ಯೂಚರಿಸ್ಟಿಕ್ ಯೋಜನೆಗಳನ್ನು ಜಗತ್ತಿನ ಮುಂದೆ ಪ್ರಸ್ತುತಪಡಿಸುತ್ತಲೇ ಇದ್ದಾರೆ. ಆದರೆ ಇವೆಲ್ಲದಕ್ಕೂ ಹಲವು ಸವಾಲುಗಳಿದ್ದು, ಈ ಸವಾಲುಗಳು ಹಿಮದಂತೆ ಕರಗಿದಾಗ ಮಾತ್ರ ಚಂದ್ರನೇ ಆಗಿರಬಹುದು ಅಥವಾ ಮಂಗಳ ಗ್ರಹವೇ ಆಗಿರಬಹುದು ಮನುಷ್ಯರು ಕಾಲಿಡಲು ಸಾಧ್ಯವಾಗುವುದು.

## ಜಪಾನ್ ಸಂಸತ್ ಚುನಾವಣೆ: ಸನ್ಯೆ ತಕ್ಕೈಚಿ ಜಯಭೇರಿ

ಟೋಕಿಯೋ: ಜಪಾನ್ ಸಂಸತ್ ಚುನಾವಣೆಯಲ್ಲಿ ಐರನ್ ಲೇಡಿ ಎಂದೇ ಖ್ಯಾತಿ ಪಡೆದಿದರುವ ಹಾಲಿ ಪ್ರಧಾನಿ ಸನ್ಯೆ ತಕ್ಕೈಚಿ ನೇತೃತ್ವದ ಲಿಬರಲ್ ಡೆಮಾಕ್ರಟಿಕ್ ಪಕ್ಷ ಭರ್ಜರಿ ಗೆಲುವು ಸಾಧಿಸಿದೆ. ಎರಡನೇ ಬಾರಿಗೆ ಸಂಸತ್ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾದಿಸಿದ ಪ್ರಧಾನಿ ಸನ್ಯೆ ತಕ್ಕೈಚಿ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂಧಿಸಿದ್ದಾರೆ. ಸನ್ಯೆ ತಕ್ಕೈಚಿ ನೇತೃತ್ವದ ಪಕ್ಷ ಬಹುಮತಕ್ಕೆ ಬೇಕಾದ 233 ಸ್ಥಾನಗಳನ್ನು ದಾಟಿ, ಐತಿಹಾಸಿಕ ವಿಜಯ ದಾಖಲಿಸಿದರು.

ಸಮ್ಮಿಶ್ರ ಪಾಲುದಾರ, ಇಶಿನ್ ಎಂದು ಕರೆಯಲ್ಪಡುವ ಜಪಾನ್ ಇನ್ನೋವೇಶನ್ ಪಾರ್ಟಿಯೊಂದಿಗೆ, ತಕ್ಕೈಚಿ ಈಗ ಮೂರನೇ ಎರಡರಷ್ಟು ಸ್ಥಾನ ಪಡೆದು ಬಹುಮತದೊಂದಿಗೆ ಸರ್ಕಾರ ರಚನೆಗೆ ಮುಂದಾಗಿದ್ದಾರೆ. ಪ್ರಧಾನಿ ಸನೇ ತಕ್ಕೈಚಿ ಅವರ ಒಕ್ಕೂಟ ಐತಿಹಾಸಿಕ ಚುನಾವಣಾ ಗೆಲುವು ಸಾಧಿಸಿದೆ ಇದು ಭರವಸೆಯ ತೆರಿಗೆ ಕಡಿತ ಮತ್ತು ಬಲವಾದ ರಕ್ಷಣಾ ವ್ಯವಸ್ಥೆಗೆ ದಾರಿ ಮಾಡಿಕೊಟ್ಟಿತು.

ಮತದಾನ ಮುಗಿದ ಎರಡು ಗಂಟೆಗಳಿಗಿಂತ ಕಡಿಮೆ ಅವಧಿಯಲ್ಲಿ ಬಹುಮತಕ್ಕೆ ಅಗತ್ಯವಿರುವ 233 ಸ್ಥಾನಗಳನ್ನು ಪಕ್ಷ ಲಿಬರಲ್ ಡೆಮಾಕ್ರಟಿಕ್ ಪಾರ್ಟಿ ಮಾತ್ರ ದಾಟಿ, ಇದುವರೆಗಿನ ಅತ್ಯುತ್ತಮ ಚುನಾವಣಾ ಫಲಿತಾಂಶಗಳಲ್ಲಿ ಒಂದು ಎನ್ನುವ ಹೆಗ್ಗಳಿಕೆ ಪಡೆದಿದೆ. ಸಮ್ಮಿಶ್ರ ಪಾಲುದಾರ ಇಶಿನ್ ಎಂದು ಕರೆಯಲ್ಪಡುವ ಜಪಾನ್ ಇನ್ನೋವೇಶನ್ ಪಾರ್ಟಿಯೊಂದಿಗೆ, ತಕ್ಕೈಚಿ ಈಗ ಮೂರನೇ ಎರಡರಷ್ಟು ಸ್ಥಾನಗಳ ಬಹುಮತ ಹೊಂದಿದೆ.

ಜಪಾನ್‌ನ ಆಡಳಿತಾರೂಢ ಲಿಬರಲ್ ಡೆಮಾಕ್ರಟಿಕ್ ಪಾರ್ಟಿ ಮತ್ತು ಅದರ ಸಮ್ಮಿಶ್ರ ಪಾಲುದಾರ ಇಶಿನ್ 465 ಸದಸ್ಯರ ಕೆಳಮನೆಯಲ್ಲಿ ಒಟ್ಟು 302 ರಿಂದ 366 ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆಯಿದೆ ಎಂದು ಎನ್‌ಎಚ್‌ಕೆ ನಿರ್ಗಮನ ಸಮೀಕ್ಷೆಗಳನ್ನು ಉಲ್ಲೇಖಿಸಿ ವರದಿ ಮಾಡಿತ್ತು ನಿರೀಕ್ಷೆಯಂತೆ ಗೆಲುವು ಸಾಧಿಸಿದೆ.

ಪ್ರಧಾನಿ ಸನ್ಯೆ ತಕ್ಕೈಚಿಯ ಲಿಬರಲ್ ಡೆಮಾಕ್ರಟಿಕ್ ಪಕ್ಷ ಸದನದಲ್ಲಿನ 465 ಸ್ಥಾನಗಳಲ್ಲಿ 274 ರಿಂದ 328 ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆಯಿತ್ತು, ಇದು ಬಹುಮತಕ್ಕೆ ಅಗತ್ಯವಿರುವ 233 ಕ್ಕಿಂತ ಹೆಚ್ಚು ಎಂದು ಹೇಳಲಾಗಿದೆ. 64 ವರ್ಷದ ಹಾಲಿ ಪ್ರಧಾನಿ ಸನ್ಯೆ ತಕ್ಕೈಚಿ, ಎಲ್‌ಡಿಪಿ ನಾಯಕರಾಗಿ ಆಯ್ಕೆಯಾದ ನಂತರ ಅಕ್ಟೋಬರ್‌ನಲ್ಲಿ ಪ್ರಧಾನಿಯಾಗಿದ್ದರು. ಜನಪ್ರಿಯತೆಯ ಅಲೆಯ ಮೇಲೆ ಸವಾರಿ ಮಾಡುತ್ತಾ ಹೊಸ ಜನಾದೇಶವನ್ನು ಪಡೆಯಲು ಅಪರೂಪದ ಚಳಿಗಾಲದ ಚುನಾವಣೆ ಕರೆದಿದ್ದರು. ಈ ಚುನಾವಣೆಯಲ್ಲಿ ಮತ್ತೊಮ್ಮೆ ಜಯಭೇರಿ ಬಾರಿಸಿದ್ದಾರೆ.



ನೇರ ನುಡಿಯ ಶೈಲಿ ಮತ್ತು ಕಠಿಣ ಪರಿಶ್ರಮಿ ಎಂಬ ಇಮೇಜ್‌ಗೆ ಹೆಸರು ವಾಸಿಯಾದ ಸನ್ಯೆ ತಕ್ಕೈವಿ ಅವರು ಯುವ ಮತದಾರರಲ್ಲಿ ಬಲವಾದ ಬೆಂಬಲವನ್ನು ಕಂಡುಕೊಂಡಿದ್ದಾರೆ. ಅಧಿಕಾರದಲ್ಲಿರುವಾಗ, ಅವರು ಚೀನಾವನ್ನು ಎದುರಿಸಲು ಮಿಲಿಟರಿ ವೆಚ್ಚವನ್ನು ವೇಗಗೊಳಿಸಲು ತ್ವರಿತವಾಗಿ ಕ್ರಮ ಕೈಗೊಂಡಿದ್ದಾರೆ ಮತ್ತು ಮಾರಾಟ-ತೆರಿಗೆ ಕಡಿತಕ್ಕೆ ಒತ್ತಾಯಿಸಿದ್ದಾರೆ, ಇದು ಹಣಕಾಸು ಮಾರುಕಟ್ಟೆಗಳನ್ನು ಅಸ್ಥಿರಗೊಳಿಸಿತ್ತು. ಯುವ ಮತದಾರರಲ್ಲಿ ಅವರ ಆಕರ್ಷಣೆ ಜನಪ್ರಿಯ ಸಂಸ್ಕೃತಿಗೂ ವ್ಯಾಪಿಸಿದೆ, "ಸನಕಟ್ಸು'' ಎಂದು ಕರೆಯಲ್ಪಡುವ ಸಾಮಾಜಿಕ ಮಾಧ್ಯಮ-ಚಾಲಿತ ವಿದ್ಯಮಾನ, ಅವರ ಕೈಚೀಲ ಮತ್ತು ಸಂಸತ್ತಿನಲ್ಲಿ ಹೆಚ್ಚಿನ ಒಲವು ಗಳಿಸಿದ್ದಾರೆ.

## ದೇಶಾದ್ಯಂತ 400 ವಾಯುನೆಲೆ ತಪಾಸಣೆ

**ನವದೆಹಲಿ:** ನಾಗರಿಕ ವಿಮಾನಯಾನ ನಿರ್ದೇಶನಾಲಯ ಮತ್ತು ರಾಜ್ಯಗಳು ಜಂಟಿಯಾಗಿ ನಿರ್ವಹಿಸಲಿರುವ ಏಕರೂಪದ ಕಾರ್ಯಾಚರಣಾ ಮಾನದಂಡಗಳು ಮತ್ತು ಮೇಲ್ವಿಚಾರಣಾ ಕಾರ್ಯವಿಧಾನವನ್ನು ಅಭಿವೃದ್ಧಿಪಡಿಸಲು ನಾಗರಿಕ ವಿಮಾನಯಾನ ಸಚಿವಾಲಯವು ಸುಮಾರು 400 ಅನಿಯಂತ್ರಿತ ವಾಯುನೆಲೆಗಳ ರಾಷ್ಟ್ರವ್ಯಾಪಿ ತಪಾಸಣೆಯನ್ನು ಪ್ರಾರಂಭಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಪಾಸಣಾ ಅಭಿಯಾನವು ಮೂಲಸೌಕರ್ಯದ ಅಂತರಗಳು, ಸಂವಹನ ಸೌಲಭ್ಯಗಳು, ಅಗ್ನಿಶಾಮಕ ಸನ್ನದ್ಧತೆ ಮತ್ತು ಸ್ಥಳೀಯ ಅಧಿಕಾರಿಗಳೊಂದಿಗೆ ಸಮನ್ವಯ ಕಾರ್ಯವಿಧಾನಗಳನ್ನು ನಕ್ಷೆ ಮಾಡುತ್ತದೆ. ಪ್ರಸ್ತುತ, ಈ ಅನಿಯಂತ್ರಿತ ವಿಮಾನ ನಿಲ್ದಾಣಗಳಲ್ಲಿ ಹೆಚ್ಚಿನವು ಆಯಾ ರಾಜ್ಯಗಳ ಒಡೆತನದಲ್ಲಿವೆ ಮತ್ತು ಅವು ವಾಡಿಕೆಯ ಡಿಜಿಸಿಎ ಮೇಲ್ವಿಚಾರಣೆಗೆ ಒಳಪಡುವುದಿಲ್ಲ, ಇದು ನಿಯಂತ್ರಕ ಅಂತರವನ್ನು ಸೃಷ್ಟಿಸುತ್ತದೆ. ಜನವರಿ 28ರಂದು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್ ಮತ್ತು ಇತರ ನಾಲ್ವರು ಸಾವನ್ನಪ್ಪಿದ ಬಾರಾಮತಿ ವಿಮಾನ ಅಪಘಾತದ ನಂತರ ಈ ಪರಿಶೀಲನೆ ಮತ್ತು ಮಾರ್ಗಸೂಚಿಗಳನ್ನು ರೂಪಿಸಲಾಗಿದೆ. ಡಿಜಿಸಿಎಯ ತಂಡಗಳು ಎ ವರ್ಗದ ವಿಮಾನ ನಿಲ್ದಾಣಗಳಲ್ಲಿ ಅಭ್ಯಾಸಗಳು ಮತ್ತು ಸುರಕ್ಷತಾ ಶಿಷ್ಟಾಚಾರಗಳನ್ನು ಪರಿಶೀಲಿಸಲು ಪ್ರಾರಂಭಿಸಿವೆ. ಯಾವುದೇ ಏರ್ ಟ್ರಾಫಿಕ್ ಕಂಟ್ರೋಲ್ ಸೇವೆಯನ್ನು ಒದಗಿಸದ ಮತ್ತು ರಾಜ್ಯ ಸರ್ಕಾರಗಳು, ಖಾಸಗಿ ನಿರ್ವಾಹಕರು ಅಥವಾ ವಿಮಾನ ತರಬೇತಿ ಸಂಸ್ಥೆಗಳು ನಿರ್ವಹಿಸುವ ಸೌಲಭ್ಯಗಳು. ಭಾರತವು ಕನಿಷ್ಠ 400 ಏರ್ ಸ್ಟ್ರಿಪ್‌ಗಳನ್ನು ಹೊಂದಿದೆ. ಅದು ಪ್ರಸ್ತುತ ಡಿಜಿಸಿಎಯ ನಿಯಂತ್ರಕ ಚೌಕಟ್ಟಿನ ಹೊರಗಿದೆ. ಈ ಸೌಲಭ್ಯಗಳಲ್ಲಿ ಅನೇಕವನ್ನು ಚಾರ್ಟರ್ ವಿಮಾನಗಳು, ರಾಜಕೀಯ



ಪಕ್ಷಗಳು ಮತ್ತು ಹಾರುವ ಶಾಲೆಗಳು ಬಳಸುತ್ತವೆ, ಆದರೆ ಪಾರುಗಾಣಿಕಾ ಸೇವೆಗಳು, ರನ್ ವೇ ನಿರ್ವಹಣೆ ಮತ್ತು ಚಲನೆಯ ಸಮನ್ವಯಕ್ಕಾಗಿ ಪ್ರಮಾಣೀಕೃತ ಕಾರ್ಯವಿಧಾನಗಳನ್ನು ಹೊಂದಿಲ್ಲ. ''ಅಂತಹ ಏರ್ ಸ್ಟ್ರಿಪ್ ಗಳಿಗೆ ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳು ಡಿಜಿಸಿಎ ವ್ಯಾಪ್ತಿಗೆ ಬರುವುದಿಲ್ಲ. ನಿಯಂತ್ರಕ, ರಾಜ್ಯಗಳ ಸಮನ್ವಯದೊಂದಿಗೆ, ಈ ವಿಮಾನ ನಿಲ್ದಾಣಗಳ ಸ್ಥಿತಿ ಮತ್ತು ಸುರಕ್ಷತಾ ಮಾನದಂಡಗಳನ್ನು ನಾಗರಿಕ ವಿಮಾನಯಾನ ಪ್ರಾಧಿಕಾರಕ್ಕೆ ತಿಳಿದುಕೊಳ್ಳುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

## ಮಿನಿ ನ್ಯೂಸ್

### ಪಬ್ಜಿ ಆಡುವಾಗ- ಯುವಕ ಸಾವು

**ಲಖನೌ:** ಗಾಜಿಯಾಬಾದ್‌ನ ಮೂವರು ಸಹೋದರಿಯರು ಕೊರಿಯನ್ ವೆಲ್ ಗೇಮ್‌ಕ್ಕೆ ಬಲಿಯಾದ ಘಟನೆ ಮರೆಯುವ ಮೊದಲೇ, ಮತ್ತೊಂದು ದುರದೃಷ್ಟಕರ ಘಟನೆ ಸಂಭವಿಸಿದೆ. ಉತ್ತರ ಪ್ರದೇಶದ ಮೀರತ್‌ನಲ್ಲಿ ಪಬ್ಜಿ ಆಡುವಾಗ ಅಧಿಕ ರಕ್ತದೊತ್ತಡದಿಂದ ಯುವಕ ಸಾವನ್ನಪ್ಪಿದ್ದಾನೆ.

ಮೃತ ಯುವಕ ಮೊಹಮ್ಮದ್ ಕೈಫ್ (22), ಖೈರ್ನಗರದ ಗುಲಾರ್ ವಾಲಿ ಗಾಲಿಯ ನಿವಾಸಿ ಆಸ್ತಿ ವ್ಯಾಪಾರಿ ಫಾರೂಕ್ ಅವರ ಏಕೈಕ ಪುತ್ರ ಕೈಫ್ ಕಳೆದ ನಾಲ್ಕು ತಿಂಗಳಿನಿಂದ ಆನ್‌ಲೈನ್ ಗೇಮಿಂಗ್‌ಗೆ ವ್ಯಸನಿಯಾಗಿದ್ದ. ಶುಕ್ರವಾರ ರಾತ್ರಿ ತಡರಾತ್ರಿಯವರೆಗೆ ಅವರು ಪಬ್ಜಿ ಆಡುತ್ತಿದ್ದ ಬೆಳಗಿನ ಜಾವ 3 ಗಂಟೆ ಸುಮಾರಿಗೆ ಪಬ್ಜಿ ಆಡುವಾಗ ಕೈಫ್ ಕುಸಿದು ಬಿದ್ದ ಶಬ್ದ ಕೇಳಿ ಅವರ ಕುಟುಂಬ ಸದಸ್ಯರು ಕೋಣೆಗೆ ಧಾವಿಸಿದ್ದಾರೆ ಆ ವೇಳೆ ಕೈಫ್ ಪ್ರಜ್ಞಾಹೀನ ಸ್ಥಿತಿಯಲ್ಲಿ ಕಂಡು ಬಂದಿದ್ದು

ಕೈಫ್ ಅವರ ಪೋಷಕರು ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ .ಪರೀಕ್ಷೆಯ ಸಮಯದಲ್ಲಿ, ಅವರ ರಕ್ತದೊತ್ತಡ 300 ದಾಟಿದೆ ಎಂದು ಕಂಡುಬಂದಿದೆ. ಅವರನ್ನು ತಕ್ಷಣ ದೆಹಲಿ ಆಸ್ಪತ್ರೆಗೆ ಕಳುಹಿಸಲಾಗಿದೆ, ಅಲ್ಲಿ ಅವರು 2 ದಿನಗಳ ಚಿಕಿತ್ಸೆ ಪಡೆದಿದ್ದಾರೆ. ಭಾನುವಾರ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ. ತೀವ್ರ ಮಾನಸಿಕ ಒತ್ತಡ, ನಿದ್ರಾಹೀನತೆ, ಅಧಿಕ ರಕ್ತದೊತ್ತಡ, ಇದು ಮೆದುಳಿನ ರಕ್ತಸ್ರಾವಕ್ಕೆ ಕಾರಣವಾಗಿ ಯುವಕನ ಸಾವಿಗೆ ಇದೇ ಕಾರಣ ಎಂದು ವೈದ್ಯರು ಹೇಳಿದ್ದಾರೆ.

### ದೆಹಲಿ ಶಾಲೆಗಳಿಗೆ ಬಾಂಬ್ ಬೆದರಿಕೆ

**ನವದೆಹಲಿ:** ರಾಷ್ಟ್ರ ರಾಜಧಾನಿಯ ಕನಿಷ್ಠ 10 ಶಾಲೆಗಳಿಗೆ ಬಾಂಬ್ ಬೆದರಿಕೆ ಇಮೇಲ್‌ಗಳು ಬಂದಿದೆ.ಬೆಳಿಗ್ಗೆ ನಗರದ ವಿವಿಧ ಭಾಗಗಳಲ್ಲಿರುವ ಹಲವಾರು ಶಿಕ್ಷಣ ಸಂಸ್ಥೆಗಳಿಂದ ತುರ್ತು ಕರೆಗಳು ಬಂದವು, ನಂತರ ಅಗ್ನಿಶಾಮಕ ದಳ ಮತ್ತು ಬಾಂಬ್ ನಿಷ್ಕ್ರಿಯ ತಂಡಗಳನ್ನು ಸ್ಥಳಗಳಿಗೆ ರವಾನಿಸಲಾಯಿತು. ಒಟ್ಟು 10 ಶಾಲೆಗಳಿಗೆ ಬಾಂಬ್ ಬೆದರಿಕೆಗಳು ಬಂದಿವೆ. ಅಗ್ನಿಶಾಮಕ ದಳ ತಂಡಗಳು ತಕ್ಷಣ ಆವರಣಕ್ಕೆ ತಲುಪಿದವು. ಪರಿಶೀಲನೆ ನಡೆಯುತ್ತಿದೆ ಎಂದು ಡಿಎಫ್‌ಎಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮುನ್ನೆಚ್ಚರಿಕೆ ಕ್ರಮವಾಗಿ ಶಾಲೆಗಳ ಮಕ್ಕಳನ್ನು ಸ್ಥಳಾಂತರಿಸಲಾಗಿದೆ. ಶ್ವಾನ ದಳದ ಜೊತೆಗೆ ಬಾಂಬ್ ಪತ್ತೆ ಮತ್ತು ವಿಲೇವಾರಿ ತಂಡಗಳು ವ್ಯಾಪಕ ಶೋಧ ನಡೆಸುತ್ತಿದ್ದು ಇದು ಭಯ ಹುಟ್ಟಿಸುವ ಕುಚೋದ್ಯ ಎಂದು ಪೊಲೀಸರು ತಿಳಿಸಿದ್ದಾರೆ. ಆದರೂ ಭದ್ರತಾ ದೃಷ್ಟಿಯಿಂದ ವ್ಯಾಪಕ ತಪಾಸಣೆ ನಡೆಸಲಾಗುತ್ತಿದೆ.

### ಶರದ್ ಪವಾರ್ ಆಸ್ಪತ್ರೆಗೆ ದಾಖಲು

**ಪುಣೆ:** ಎನ್‌ಸಿಪಿ ನಾಯಕ ಶರದ್ ಪವಾರ್ ಗಂಟಲು ಸಂಬಂಧಿತ ಸಮಸ್ಯೆಗಳು, ಕೆಮ್ಮು ಮತ್ತು ಜ್ವರದ ಕಾರಣದಿಂದ ಮಧ್ಯಾಹ್ನ ಪುಣೆಯ ಆಸ್ಪತ್ರೆಗೆ ದಾಖಲಾಗಿದ್ದಾರೆ. ಹೆಚ್ಚಿನ ವೈದ್ಯಕೀಯ ಚಿಕಿತ್ಸೆಗಾಗಿ ಅವರನ್ನು ಮಹಾರಾಷ್ಟ್ರದ ಬಾರಾಮತಿಯಲ್ಲಿರುವ ಅವರ ನಿವಾಸದಿಂದ ಆಸ್ಪತ್ರೆಗೆ ಸೇರಿಸಲಾಯಿತು. ಬಾರಾಮತಿಯಲ್ಲಿದ್ದಾಗಲೇ ಅವರು ಅಸ್ವಸ್ಥರಾಗಿದ್ದರು. ಅಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದರೂ ಅವರ ಅನಾರೋಗ್ಯ ಮುಂದುವರಿದ ಕಾರಣದಿಂದ ಚಿಕಿತ್ಸೆಗಾಗಿ ಅವರನ್ನು ಪುಣೆಗೆ ಸ್ಥಳಾಂತರಿಸಲು ವೈದ್ಯರು ಸಲಹೆ ನೀಡಿದರು. ಎನ್‌ಸಿಪಿ ನಾಯಕ ಶರದ್ ಪವಾರ್ ಗಂಟಲು ಸೋಂಕಿನಿಂದ ಬಳಲುತ್ತಿದ್ದಾರೆ. ಅವರು ಪ್ರಸ್ತುತ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆಸ್ಪತ್ರೆಗೆ ಬಂದ ನಂತರ ವೈದ್ಯರ ತಂಡವು ಅವರನ್ನು ಪರಿಶೀಲಿಸುತ್ತಿದೆ. ವೈದ್ಯರ ಸಲಹೆಯ ಮೇರೆಗೆ ಮುಂದಿನ ಕ್ರಮವನ್ನು ನಿರ್ಧರಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

### ಹಾಂಗ್‌ಕಾಂಗ್ ಮಾಧ್ಯಮ ದೊರೆ ಜಿಮ್ಮಿಗೆ 20ವರ್ಷ ಜೈಲು

**ಬೀಜಿಂಗ್:** ಸರ್ಕಾರ ಉರುಳಿಸಲು ಕುತಂತ್ರ ನಡೆಸಿದ ಆರೋಪದ ಮೇಲೆ ಹಾಂಗ್ ಕಾಂಗ್ ಮಾಧ್ಯಮ ದೊರೆ ಮತ್ತು ಪ್ರಜಾಪ್ರಭುತ್ವ ಪರ ಕಾರ್ಯಕರ್ತ ಜಿಮ್ಮಿ ಲೈಗೆ 20 ವರ್ಷ ಜೈಲು ಶಿಕ್ಷೆ ವಿಧಿಸಿ ನ್ಯಾಯಾಲಯ ತೀರ್ಪು ನೀಡಿದೆ. 2020 ರಿಂದ ರಾಜಕೀಯ ಸನ್ನಿವೇಶ ಪುನರ್ರೂಪಿಸಿದ ಚೀನಾ ಹೇರಿದ ರಾಷ್ಟ್ರೀಯ ಭದ್ರತಾ ಕಾನೂನಿನಡಿಯಲ್ಲಿ ಹಾಂಗ್ ಕಾಂಗ್ ಮಾಧ್ಯಮ ಉದ್ಯಮಿ ಜಿಮ್ಮಿ ಲೈ ಅವರಿಗೆ 20 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ಜಿಮ್ಮಿ ಲೈ ಅವರ ವಿರುದ್ಧ ಗಂಭೀರ ಅಪರಾಧ ಕೃತ್ಯಕ್ಕಾಗಿ ಒಟ್ಟು ಶಿಕ್ಷೆಯ ಜಾಗತಿಕವಾಗಿ ಗಮನ ಸೆಳೆದಿದೆ. ಪ್ರಸ್ತುತ ಪ್ರಕರಣದಲ್ಲಿ ಜಿಮ್ಮಿ ಲೈ ಅವರ ಒಟ್ಟು ಶಿಕ್ಷೆಯು 20 ವರ್ಷಗಳ ಜೈಲು ಶಿಕ್ಷೆಯಾಗಿರಬೇಕು ಎಂದು ನಾವು ತೃಪ್ತರಾಗಿದ್ದೇವೆ ಎಂದು ಹೈಕೋರ್ಟ್ ತನ್ನ ತೀರ್ಪಿನಲ್ಲಿ ತಿಳಿಸಿದೆ.



## ಟ್ರಕ್ ನಿಯಂತ್ರಣ ತಪ್ಪಿ ಅಪಘಾತ: 30 ಮಂದಿ ಸಾವು



**ಕಾನೊ:** ಉತ್ತರ ನೈಜೀರಿಯಾದಲ್ಲಿ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದ ಟ್ರಕ್ ನಿಯಂತ್ರಣ ತಪ್ಪಿ ಅಪಘಾತಕ್ಕೀಡಾಗಿ 30 ಮಂದಿ ಸಾವನ್ನಪ್ಪಿದ್ದಾರೆ.

ಕಾನೊ ರಾಜ್ಯದ ಗೆಜಾವಾ ಸ್ಥಳೀಯ ಸರ್ಕಾರಿ ಪ್ರದೇಶದ ಕ್ವಾನಾರ್ ಬಾರ್ಡೆ ಪಟ್ಟಣದ ಪ್ರಮುಖ ಹೆದ್ದಾರಿಯಲ್ಲಿ ಭಾನುವಾರ ಈ ಮಾರಣಾಂತಿಕ ಅಪಘಾತ ಸಂಭವಿಸಿದೆ. ದೊಡ್ಡ ಟ್ರೈಲರ್ ಆಗಿದ್ದ ವಾಹನವು ಹೆಚ್ಚಿನ ವೇಗದಲ್ಲಿ ಚಲಿಸುತ್ತಿದ್ದಾಗ ಚಾಲಕನ ನಿಯಂತ್ರಣ ಕಳೆದುಕೊಂಡು ಮಾರಣಾಂತಿಕ ಅಪಘಾತಕ್ಕೆ ಕಾರಣವಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾನೊ ರಾಜ್ಯ ಸರ್ಕಾರದ ಪ್ರಕಾರ, ಟ್ರಕ್ ಪ್ರಯಾಣಿಕರು ಮತ್ತು ಸರಕುಗಳನ್ನು ಕಾನೊದಿಂದ ಗುಜುಂಗು ಪಟ್ಟಣದತ್ತ ಸಾಗಿಸುತ್ತಿತ್ತು. ವಾಹನ ಪಲ್ಟಿಯಾದಾಗ ವಿಮಾನದಲ್ಲಿದ್ದ ಅನೇಕರನ್ನು ಕೆಳಗಿಳಿಸಲಾಯಿತು. ಅಪಘಾತದಲ್ಲಿ ಹಲವಾರು ಪ್ರಯಾಣಿಕರು ಗಾಯಗೊಂಡಿದ್ದು, ಹಲವರ ಸ್ಥಿತಿ ಗಂಭೀರವಾಗಿದೆ ಎಂದು ವರದಿಯಾಗಿದೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ರಾಜ್ಯದ ವಿವಿಧ ಆಸ್ಪತ್ರೆಗಳಿಗೆ ಕರೆದೊಯ್ಯಲಾಗಿದೆ.

ಗವರ್ನರ್ ಅಬ್ಬಾ ಕಬೀರ್ ಯೂಸುಫ್ ಅವರ ವಕ್ತಾರ ಸುನುಸಿ ಬತೂರೆ ದವಾಕಿನ್ ಟೋಫಾ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ಈ ವಿವರಗಳನ್ನು ದೃಢಪಡಿಸಲಾಗಿದೆ. ಅಪಘಾತಕ್ಕೆ ಅಜಾಗರೂಕ ಚಾಲನೆಯನ್ನು ಅಧಿಕಾರಿಗಳು ದೂಷಿಸಿದ್ದಾರೆ. ಗವರ್ನರ್ ಈ ಘಟನೆಯನ್ನು ಹೃದಯ ವಿದ್ರಾವಕ ಮತ್ತು ಸಂತ್ರಸ್ತ ಕುಟುಂಬಗಳಿಗೆ ಮಾತ್ರವಲ್ಲದೆ ಕಾನೊ ರಾಜ್ಯದ ಇಡೀ ಜನರಿಗೆ ದೊಡ್ಡ ನಷ್ಟ ಎಂದು ಬಣ್ಣಿಸಿದ್ದಾರೆ'' ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಪಶ್ಚಿಮ ನೈಜೀರಿಯಾದ ಎರಡು ಹಳ್ಳಿಗಳ ಮೇಲೆ ಸಶಸ್ತ್ರ ಹೋರಾಟಗಾರರು ದಾಳಿ ನಡೆಸಿದ ನಂತರ ಕನಿಷ್ಠ 162 ಜನರು ಸಾವನ್ನಪ್ಪಿದ್ದಾರೆ, ಇದು ಇತ್ತೀಚಿನ ತಿಂಗಳುಗಳಲ್ಲಿ ಈ ಪ್ರದೇಶದ ಅತ್ಯಂತ ಭೀಕರ ದಾಳಿಗಳಲ್ಲಿ ಒಂದಾಗಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ. ಕ್ವಾರಾ ರಾಜ್ಯದ ಎರಡು ಗ್ರಾಮೀಣ ಸಮುದಾಯಗಳಾದ ವೊರೊ ಮತ್ತು ನುಕುದಲ್ಲಿ ಸಂಜೆ ಹಿಂಸಾಚಾರ ನಡೆದಿದೆ. ಸಂಸತ್ತಿನಲ್ಲಿ ಈ ಪ್ರದೇಶವನ್ನು ಪ್ರತಿನಿಧಿಸುವ ಸಂಸದ ಮೊಹಮ್ಮದ್ ಒಮರ್ ಬಿಯೊ ಸಾವಿನ ಸಂಖ್ಯೆಯನ್ನು ದೃಢಪಡಿಸಿದ್ದಾರೆ.


ಬಯೋ ಪ್ರಕಾರ, ದಾಳಿಕೋರರು ಇಸ್ಲಾಮಿಕ್ ಸ್ಟೇಟ್ ನೊಂದಿಗೆ ಸಂಪರ್ಕ ಹೊಂದಿದ್ದಾರೆಂದು ನಂಬಲಾದ ಸಶಸ್ತ್ರ ಗುಂಪಿನ ಸದಸ್ಯರಾಗಿದ್ದರು. ಈ ಗುಂಪು ಹಳ್ಳಿಗಳಿಗೆ ನುಗ್ಗಿ ನಿವಾಸಿಗಳ ಮೇಲೆ ಸಂಘಟಿತ ದಾಳಿ ನಡೆಸಿದೆ ಎಂದು ಅವರು ಹೇಳಿದರು. ದಾಳಿಯ ಹೊಣೆಯನ್ನು ಯಾವುದೇ ಗುಂಪು ಅಧಿಕೃತವಾಗಿ ಹೊತ್ತುಕೊಂಡಿಲ್ಲ.

## ಕುಕಿ-ನಾಗಾ ಸಮುದಾಯದ ನಡುವೆ ನಿಲ್ಲದ ಘರ್ಷಣೆ

**ಇಂಫಾಲ:** ಮಣಿಪುರದ ಉಖ್ರುಲ್ ಜಿಲ್ಲೆಯಲ್ಲಿ ತಂಗ್ಖುಲ್ ನಾಗಾ ಸಮುದಾಯದ ಸದಸ್ಯರ ಮೇಲೆ ಜನರ ಗುಂಪೊಂದು ದಾಳಿ ನಡೆಸಿದ ನಂತರ ಪ್ರದೇಶದಲ್ಲಿ ಉದ್ವಿಗ್ನತೆ ಉಂಟಾಗಿದ್ದು, ಶಸ್ತ್ರಸಜ್ಜಿತ ಉಗ್ರರು ಹಲವಾರು ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲೆಯ ಲಿಟನ್ ಗ್ರಾಮದಲ್ಲಿ ಎರಡು ಬುಡಕಟ್ಟು ಗುಂಪುಗಳು ತೀವ್ರವಾದ ಕಲ್ಲು ತೂರಾಟದಲ್ಲಿ ತೊಡಗಿದ್ದು, ಆಡಳಿತವು ನಿಷೇಧಾಜ್ಞೆ ಜಾರಿಗೊಳಿಸಲು ಕಾರಣವಾಯಿತು ಎಂದು ಅವರು ಹೇಳಿದರು. ಮಧ್ಯರಾತ್ರಿಯ ಸುಮಾರಿಗೆ, ಲಿಟನ್ ಸರೈಖೋಂಗ್‌ನಲ್ಲಿ ಕುಕಿ ಉಗ್ರರು ತಂಗ್ಖುಲ್ ನಾಗಾ ಸಮುದಾಯದ ಸದಸ್ಯರ ಹಲವಾರು ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ ಎಂದು ಆರೋಪಿಸಲಾಗಿದೆ. ಕುಕಿ ಸಮುದಾಯಕ್ಕೆ ಸೇರಿದ ಕೆಲವು ಮನೆಗಳನ್ನು ಹತ್ತಿರದ ಪ್ರದೇಶದಲ್ಲಿ ಸುಟ್ಟುಹಾಕಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ತಂಗ್ಖುಲ್ ಮಣಿಪುರದ ಅತಿದೊಡ್ಡ ನಾಗಾ ಬುಡಕಟ್ಟು. ಲಿಟನ್ ಸರೈಖೋಂಗ್ ಕುಕಿ ಗ್ರಾಮವಾಗಿದೆ.ಹಾನಿಯನ್ನು ಖಚಿತಪಡಿಸಲಾಗುತ್ತಿದೆ ಮತ್ತು ಪರಿಸ್ಥಿತಿ ಉದ್ವಿಗ್ನವಾಗಿದೆ, ಎಂದು ಜಿಲ್ಲಾ ಅಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದ್ದಾರೆ. ಶಸ್ತ್ರಸಜ್ಜಿತ ವ್ಯಕ್ತಿಗಳು ಗ್ರಾಮದಲ್ಲಿ ಮನೆಗಳು ಮತ್ತು ವಾಹನಗಳಿಗೆ ಬೆಂಕಿ ಹಚ್ಚುತ್ತಿರುವುದನ್ನು ಮತ್ತು ಮರೆಮಾಚುವ ಬಟ್ಟೆ ಧರಿಸಿದ ಉಗ್ರರು ಗಾಳಿಯಲ್ಲಿ ಅತ್ಯಾಧುನಿಕ ಆಯುಧಗಳಿಂದ ಗುಂಡು



ಹಾರಿಸುತ್ತಿರುವ ವಿಡಿಯೋ ತುಣುಕುಗಳು ಹರಿದಾಡುತ್ತಿವೆ. ಮಹಾದೇವ್, ಲಂಬುಯಿ ಮತ್ತು ಶಾಂಗ್ಕೈ ಮತ್ತು ಲಿಟನ್‌ಗೆ ಹೋಗುವ ಇತರ ಪ್ರದೇಶಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಮತ್ತು ಅನುಮಾನಾಸ್ಪದ ವ್ಯಕ್ತಿಗಳ ಚಲನವಲನವನ್ನು ತಡೆಯಲು ಹೆಚ್ಚುವರಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ನಿನ್ನೆ ಸಂಜೆ, ಲಿಟನ್ ಸರೈಖಾಂಗ್ ಗ್ರಾಮದಲ್ಲಿ ಘರ್ಷಣೆ ನಡೆಸಿದ ಎರಡು ಬುಡಕಟ್ಟು ಗುಂಪುಗಳನ್ನು ಚದುರಿಸಲು ಭದ್ರತಾ ಪಡೆಗಳು ಅಶ್ರುವಾಯು ಶೆಲ್‌ಗಳನ್ನು ಹಾರಿಸಿದವು ಎಂದು ಅವರು ಹೇಳಿದರು.ತಂಗ್ಖುಲ್ ನಾಗ ಮತ್ತು ಕುಕಿ ಸಮುದಾಯಗಳ ಸದಸ್ಯರ ನಡುವಿನ ಉದ್ವಿಗ್ನತೆಯಿಂದಾಗಿ ಗ್ರಾಮದಲ್ಲಿ ಶಾಂತಿ ಮತ್ತು ನೆಮ್ಮದಿಗೆ ಭಂಗ ಉಂಟಾಗುವ ಆತಂಕವಿದೆ ಎಂದು ಉಖ್ರುಲ್ ಜಿಲ್ಲಾ ಮ್ಯಾಜಿಸ್ಟ್ರೇಟ್ ಹೊರಡಿಸಿದ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

# 3 ದಶಕಗಳಲ್ಲಿ ಮೊದಲ ಬಾರಿಗೆ ವಾರ್ಷಿಕ ಮಿಲಿಟರಿ ಸಭೆಗೆ ಖಮೇನಿ ಗೈರು

## ತೆಹ್ರಾನ್ ಕರಾವಳಿ ಪ್ರದೇಶದಲ್ಲಿ ಯುಎಸ್ ಯುದ್ದನೌಕೆಗಳು ಬೀಡುಬಿಟ್ಟಿದ್ದು, ಉಭಯದೇಶಗಳ ನಡುವೆ ಭಯಾನಕ ಯುದ್ದದ ಆತಂಕ



### ಈ ವಾರ್ಷಿಕ ಸಭೆಯ ಮಹತ್ವ

**ಇರಾನ್,ಅಮೆರಿಕಾ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯಿಂದಾಗಿ ಮಹಾಯುದ್ದದ ಕಾರ್ಮೋಡ ಎಂಬ ಆತಂಕದ ನಡುವೆ ಸುಪ್ರೀಂ ಲೀಡರ್ ಅಯತುಲ್ಲಾ ಖಮೇನಿಯ ಈ ನಡೆ ಕೂತುಹಲ ಮೂಡಿಸಿದೆ. ಫೆ.8 ಎಂಬುದು ಇರಾನ್ ನಾಯಕರ ಪಾಲಿಗೆ ಮಹತ್ವದ ದಿನವಾಗಿದ್ದು, 1979ರ ಇಸವಿಯ ಫೆ.8ರಂದು ಪಹ್ಲವಿ ವಂಶದ ಆಳ್ವಿಕೆಯನ್ನು ಕೊನೆಗಾಣಿಸಲು ವಾಯುಪಡೆಯ ಅಧಿಕಾರಿಗಳು ರುಹೊಲ್ಲಾ ಖೊಮೇನಿಗೆ ಬೆಂಬಲವನ್ನು ಸೂಚಿಸಿದ ದಿನವಾಗಿ ಆಚರಿಸುತ್ತಾರೆ.**

**ತೆಹ್ರಾನ್:** ಅಮೆರಿಕಾ ಹಾಗೂ ಇರಾನ್ ದಿನದಿಂದ ದಿನಕ್ಕೆ ಉದ್ವಿಗ್ನತೆ ಹೆಚ್ಚಾಗುತ್ತಿದೆ. ಈ ತೆಹ್ರಾನ್ ಕರಾವಳಿ ಪ್ರದೇಶದಲ್ಲಿ ಯುಎಸ್ ಯುದ್ದನೌಕೆಗಳು ಬೀಡುಬಿಟ್ಟಿದ್ದು, ಉಭಯದೇಶಗಳ ನಡುವೆ ಭಯಾನಕ ಯುದ್ದದ ಆತಂಕ ಮೂಡುವಂತೆ ಮಾಡಿದೆ. ಈ ಬೆನ್ನಲ್ಲೆ, ಇರಾನ್ ನ ಸುಪ್ರೀಂ ಲೀಡರ್ ಅಯತುಲ್ಲಾ ಖಮೇನಿ ಅಧಿಕಾರ ವಹಿಸಿಕೊಂಡಾಗಿನಿಂದ ಇದೇ ಮೊದಲ ಬಾರಿಗೆ ವಾರ್ಷಿಕವಾಗಿ ಏರ್ ಚೀಫ್ ಕಮಾಂಡರ್ ಗಳೊಂದಿಗೆ ನಡಯುವ ಮಹತ್ವದ ಮಿಲಿಟರಿ ಸಭೆಗೆ ಗೈರಾಗಿದ್ದಾರೆ.

1989ರಲ್ಲಿ ಇಸ್ಲಾಮಿಕ್ ಗಣರಾಜ್ಯ ಇರಾನ್ ನ ಸರ್ವೋಚ್ಚ ನಾಯಕನಾಗಿ ಅಧಿಕಾರ ವಹಿಸಿಕೊಂಡು ಬರೋಬ್ಬರಿ 37 ವರ್ಷಗಳು ಕಳೆದಿದ್ದು, ಅಂದಿನಿಂದ ಇಲ್ಲಿಯ ತನಕ ಎಂದಿಗೂ ಯಾವ ಒಂದು ಮಿಲಿಟರಿ ಸಭೆಯಿಂದ ದೂರ ಉಳಿದ ಸಂದರ್ಭಗಳೇ ಇಲ್ಲ, ಅದರಲ್ಲೂ ಪ್ರತಿಯೊಂದು ವಾಯುಪಡೆಯ ಕಮಾಂಡರ್‌ಗಳೊಂದಿಗಿನ ವಾರ್ಷಿಕ ಸಭೆಯನ್ನಂತೂ ಮಿಸ್ ಮಾಡಿಕೊಂಡಿದ್ದೇ ಇಲ್ಲ. ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿಯೂ ಸಹ ಸಂಪ್ರದಾಯವನ್ನು ಮುರಿಯದೆ ಸಭೆಯಲ್ಲಿ ಹಾಜರಾಗಿದ್ದರು.ಆದರೆ, ಹೀಗಿರುವಾಗ ಮೊದಲ ಬಾರಿಗೆ ಫೆ.8ರಂದು ನಡೆದ ಈ ವಾರ್ಷಿಕಯಲ್ಲಿ ಅಯತುಲ್ಲಾ ಅಲಿ ಖಮೇನಿ ಭಾಗವಹಿಸದೆ ಇದ್ದಾರೆ ಎಂದು ವರದಿಯಾಗಿದೆ.

- 37ವರ್ಷಗಳಲ್ಲಿ ಮೊದಲ ಬಾರಿಗೆ ಇರಾನ್ ಸುಪ್ರೀಂ ಅಯತುಲ್ಲಾ ಅಲಿ ಖಮೇನಿ ವಾರ್ಷಿಕ ಸಭೆಗೆ ಗೈರು
- ಅಮೆರಿಕಾ-ಇರಾನ್ ನಡುವಿನ ಉದ್ವಿಗ್ನತೆ ಬೆನ್ನಲ್ಲೆ ಕುತೂಹಲ ಮೂಡಿಸಿದ ಖಮೇನಿ ನಡೆ
- ಸಂಪ್ರದಾಯ ಮುರಿದ ಖಮೇನಿ ನಡೆ ಹಿಂದಿನ ಕಾರಣವೇನು?

ಆಗಿನಿಂದಲೂ ಈವರೆಗೂ ಈ ದಿನವನ್ನು ಆ ದಿನ ಸ್ಮರಣಾರ್ಥವಾಗಿ ಸುಪ್ರೀಂ ಲೀಡರ್‌ಗಳು ಭೇಟಿಯಾಗುತ್ತಿದ್ದರು. ಆ ಸಂಪ್ರಾದಯವನ್ನು ಖಮೇನಿ ಈವರೆಗೂ ನಡೆಸಿಕೊಂಡು ಬಂದಿದ್ದು, ಇರಾನ್ ನ ವಾಯುಪಡೆಯ ಪ್ರಾಬಲ್ಯತೆಯನ್ನು ಜಗತ್ತಿಗೆ ಸಾರುವ ನಿಟ್ಟಿನಲ್ಲಿ ಸಭೆಯಲ್ಲಿ ಭೇಟಿಯಾಗುತ್ತಾರೆ. ಆದರೆ, ನಿನ್ನೆಯ ಈ ಸಭೆಯನ್ನು ಸುಪ್ರೀಂ ಲೀಡರ್ ಖಮೇನಿ ಬದಲಿಗೆ ಇರಾನ್‌ನ ಸಶಸ್ತ್ರ ಪಡೆಗಳ ಮುಖ್ಯಸ್ಥ ಅಬ್ದುಲ್ರಹಿಂ ಮೌಸಾವಿ ಹಾಜರಾಗಿದ್ದಾರೆ. ಇನ್ನೂ ಕೆಲವು ವಿಶ್ಲೇಷಕರ ಪ್ರಕಾರ, ಖಮೇನಿ ಬದಲಿಗೆ ಡೆಪ್ಯೂಟಿಯನ್ನು ಕಳುಹಿಸುವ ಆಯ್ಕೆಯು ದೇಶೀಯ ಮತದಾರರು ಮತ್ತು ವಿದೇಶಿ ಶಕ್ತಿಗಳಿಗೆ ಉದ್ದೇಶಪೂರ್ವಕ ಸಂದೇಶವಾಗಿರಬಹುದು.

ಸಂಪ್ರದಾಯ ಮುರಿದ ಖಮೇನಿ

ಅಂದರೆ ಈ ಮೂಲಕ ಇರಾನ್ ನಾಯಕತ್ವವು ಧಾರ್ಮಿಕ ಅಹಗೂ ಸಂಪ್ರದಾಯಿಕ ಶಕ್ತಿ ಪ್ರದರ್ಶನಗಳಿಗಿಂತ ಕಾರ್ಯತಂತ್ರದ ಎಚ್ಚರಿಕೆಗೆ ಆದ್ಯತೆ ನೀಡುತ್ತಿದೆ ಎಂದು ಎಚ್ಚರಿಕೆ ನೀಡುವುದಾಗಿಬಹುದು. ಏನೇ ಆಗಲಿ ಇದು ಅಮೆರಿಕಾವನ್ನು ಕೆರಳಿಸದಂತೆ ಎಚ್ಚರಿಕೆಯೂ ಅಥವಾ ಯುದ್ದಕ್ಕೆ ಪ್ರಚೋದನೆ ನೀಡದೆ ಶಾಂತಿ ಕಾಪಾಡುವ ತಂತ್ರವೋ, ಬೇರೆ ಇನ್ನಾವಾ ಕಾರಣವೂ ಸುಮಾರು 3 ದಶಕಗಳಿಂದ ಆಚರಿಸಿಕೊಂಡು ಬಂದಿರುವ ಸಂಪ್ರದಾಯವನ್ನು ಉದ್ವಿಗ್ನ ಪರಿಸ್ಥಿತಿಯಲ್ಲಿ ಮುರಿದಿರುವುದು ಜಗತ್ತಿನ ಗಮನ ಸೆಳೆಯುವಂತೆ ಮಾಡಿದೆ.

### ಯುಎಸ್ ಪ್ರಚೋದನೆ ಮಾಡದೇ ಇರಲು ಮಾಡಿದ ತಂತ್ರವೇ?

**ಇದು ಸಂಪ್ರದಾಯವನ್ನು ಮುರಿಯುವುದು ಎನ್ನುವುದಕ್ಕಿಂತ ಹೆಚ್ಚಾಗಿ ಈ ನಿರ್ಧಾರದ ಸಮಯದ ಬಗ್ಗೆ ಹೆಚ್ಚು ಗಮನ ಸೆಳೆಯುತ್ತಿದ್ದು, ಖಮೇನಿ ಇರಾನ್ ಮೇಲಿನ ಯಾವುದೇ ಅಮೆರಿಕದ ದಾಳಿಯು ಮಧ್ಯಪ್ರಾಚ್ಯದಾದ್ಯಂತ ವ್ಯಾಪಕ ಸಂಘರ್ಷಕ್ಕೆ ನಾಂದಿ ಹಾಡುತ್ತದೆ. ಇದು ಇಡೀ ಜಗತ್ತಿನಾದ್ಯಂತ ಯುದ್ದವನ್ನು ವ್ಯಾಪಿಸುವಂತೆ ಮಾಡುತ್ತದೆ ಎಂದು ಎಚ್ಚರಿಕೆ ನೀಡುತ್ತಾ ಬಂದಿದ್ದಾರೆ. ಈ ಬೆನ್ನಲ್ಲೇ, ಈ ನಿರ್ಣಯ ಅಮೆರಿಕಾದಿಂದಾಗುವ ಸಂಭಾವ್ಯ ಯುದ್ದಕ್ಕೆ ಪ್ರಚೋದನೆ ನೀಡದಂತೆ ಕಾಪಾಡಿಕೊಳ್ಳಲು ನಡೆಸಿರುವ ತಂತ್ರ ಎಂದು ವಿಶ್ಲೇಷಿಸಲಾಗುತ್ತಿದೆ.**

# ಸಲ್ಮಾನ್ ಖಾನ್ ಸಿನಿಮಾ ಬಿಡುಗಡೆಗೆ ಹೊಸ ಪ್ಲಾನ್

ಚಿತ್ರದ ಕೆಲವು ಕೆಲಸಗಳು ಪೂರ್ಣಗೊಂಡಿಲ್ಲ



ಬಾಲಿವುಡ್‌ನ ಖ್ಯಾತ ನಟ ಸಲ್ಮಾನ್ ಖಾನ್ ಈಗ ತಮ್ಮ ಸಿನಿಮಾಗಳ ಬಿಡುಗಡೆ ಬಗ್ಗೆ ಹೆಚ್ಚು ಜಾಗರೂಕತೆ ತೋರಿಸುತ್ತಿದ್ದಾರೆ. ಹಿಂದಿನಂತೆ ಅವರ ಚಿತ್ರಗಳಿಗೆ ಭಾರೀ ಕ್ರೇಜ್ ಇದ್ದರೂ, ಇತ್ತೀಚಿನ ವರ್ಷಗಳಲ್ಲಿ ಕೆಲವು ಸಿನಿಮಾಗಳು ನಿರೀಕ್ಷಿತ ಯಶಸ್ಸು ಕಾಣದ ಹಿನ್ನೆಲೆ ನಿರ್ಮಾಪಕರು ಎಚ್ಚರಿಕೆಯಿಂದ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ. ಸಲ್ಮಾನ್ ಅಭಿನಯದ ಬ್ಯಾಟಲ್ ಆಫ್ ಗಲ್ವಾನ್’ ಚಿತ್ರವನ್ನು ಮೊದಲಿಗೆ ಏಪ್ರಿಲ್ 17ರಂದು ಬಿಡುಗಡೆ ಮಾಡುವ ಯೋಚನೆ ಇತ್ತು. ಆದರೆ ಅದೇ ಸಮಯದಲ್ಲಿ ಹಲವು ದೊಡ್ಡ ಬಜೆಟ್ ಸಿನಿಮಾಗಳು ಬಿಡುಗಡೆಯಾಗುತ್ತಿರುವುದರಿಂದ ಚಿತ್ರ ಸ್ಯಾಂಡ್‌ವಿಚ್ ಆಗುವ ಭಯ ತಂಡದಲ್ಲಿ ಕಾಣಿಸಿಕೊಂಡಿದೆ. ಜೊತೆಗೆ ಚಿತ್ರದ ಕೆಲವು ಕೆಲಸಗಳು ಇನ್ನೂ ಪೂರ್ಣಗೊಂಡಿಲ್ಲ ಎಂಬ ಕಾರಣವೂ ಇದೆ.

ಮಾರ್ಚ್ ಹಾಗೂ ಏಪ್ರಿಲ್ ತಿಂಗಳಲ್ಲಿ ಹಲವು ಭಾಷೆಗಳ ದೊಡ್ಡ ಚಿತ್ರಗಳು ತೆರೆಗೆ ಬರುತ್ತಿರುವ ಹಿನ್ನೆಲೆ, ಚಿತ್ರಕ್ಕೆ ಸರಿಯಾದ ಸಮಯ ಹುಡುಕಲು ತಂಡ ಮುಂದಾಗಿದೆ. ಮೇ ತಿಂಗಳಲ್ಲಿ ಐಪಿಎಲ್ ಹಂಗಾಮೆ, ನಂತರ ಮಳೆಗಾಲ ಇರುವುದರಿಂದ ಕೊನೆಗೆ ಆಗಸ್ಟ್ 15ನ್ನು ಆಯ್ಕೆ ಮಾಡಲಾಗಿದೆ.

ದೇಶಭಕ್ತಿ ಕಥೆಯನ್ನು ಆಧರಿಸಿದ ಈ ಸಿನಿಮಾ ಗಲ್ವಾನ್ ಗಡಿಯ ಘಟನೆಗಳ ಹಿನ್ನೆಲೆಯಲ್ಲಿದೆ. ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ಬಿಡುಗಡೆ ಮಾಡಿದರೆ ಪ್ರೇಕ್ಷಕರಿಗೆ ಹೆಚ್ಚು ಸಂಪರ್ಕ ಸಾಧಿಸಲಿದೆ ಎಂಬ ನಿರೀಕ್ಷೆಯಿದೆ.




## ಮಂದಾಕಿನಿ ಹೈದರಾಬಾದ್, ಲಾಸ್ ಏಂಜಲಿಸ್!

# ಪಿಗ್ಗಿ ಪಯಣ ಶುರು!

ಭಾರತೀಯ ಚಿತ್ರರಂಗದ ಅತ್ಯಂತ ನಿರೀಕ್ಷಿತ ಪ್ರಾಜೆಕ್ಟ್‌ಗಳಲ್ಲಿ ಒಂದಾಗಿ ಹೆಸರು ಮಾಡುತ್ತಿರುವ ಎಸ್.ಎಸ್. ರಾಜಮೌಳಿ ನಿರ್ದೇಶನದ ಮಹೇಶ್ ಬಾಬು ನಟನೆಯ ವಾರಣಾಸಿ ಸಿನಿಮಾ ಈಗಾಗಲೇ ಜಾಗತಿಕ ಮಟ್ಟದಲ್ಲಿ ಸದ್ದು ಮಾಡುತ್ತಿದೆ. ಈ ಭಾರಿ ಬಜೆಟ್ ಸಿನಿಮಾದಲ್ಲಿ ಪ್ರಿಯಾಂಕಾ ಚೋಪ್ರಾ ನಾಯಕಿಯಾಗಿ ಕಾಣಿಸಿಕೊಂಡಿದ್ದು, ತಮ್ಮ ಭಾಗದ ಚಿತ್ರೀಕರಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ.

ಸುಮಾರು ಒಂದು ತಿಂಗಳ ಕಾಲ ಹೈದರಾಬಾದ್ ಹಾಗೂ ವಾರಣಾಸಿ ಪ್ರದೇಶಗಳಲ್ಲಿ ಶೂಟಿಂಗ್‌ನಲ್ಲಿ ಭಾಗವಹಿಸಿದ್ದ ಪ್ರಿಯಾಂಕಾ, ಇದೀಗ ಲಾಸ್ ಏಂಜಲಿಸ್‌ಗೆ ಮರಳುತ್ತಿರುವುದಾಗಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ‘‘ಒಂದು ತಿಂಗಳಿನಿಂದ ಹೈದರಬಾದ್ ನಲ್ಲಿದ್ದೇ. ವಾರಣಾಸಿ ಶೂಟ್ ನಲ್ಲಿ ಪಾಲ್ಗೊಂಡಿದ್ದೇ.. ಇದೀಗ ಶೂಟಿಂಗ್ ಮುಗಿಸಿ ಹೊರಡ್ತಾ ಇದ್ದೇನೆ ಅಂತ ಬರೆದುಕೊಂಡಿದ್ದಾರೆ.

ಇದರ ಜೊತೆಗೆ, ಪ್ರಿಯಾಂಕಾ 'ಕ್ರಿಶ್ 4' ಚಿತ್ರದ ಮೂಲಕ ಮತ್ತೆ ಬಾಲಿವುಡ್‌ಗೆ ವಾಪಸ್ಸಾಗುತ್ತಿರುವುದು ಅಧಿಕೃತವಾಗಿ ದೃಢಪಟ್ಟಿದೆ. ಹಲವು ವರ್ಷಗಳಿಂದ ಹಾಲಿವುಡ್‌ನಲ್ಲಿ ತೊಡಗಿಸಿಕೊಂಡಿದ್ದ ಅವರು, ಕೊನೆಯಾಗಿ 2019ರಲ್ಲಿ ದಿ ಸೈ ಇಸ್ ಪಿಂಕ್’ ಸಿನಿಮಾದಲ್ಲಿ ಕಾಣಿಸಿಕೊಂಡಿದ್ದರು. ಈಗ ಮತ್ತೆ ಭಾರತೀಯ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ.





ಸನ್ನಿಡಿಯೋಲ್ ಮತ್ತೊಂದು ದೊಡ್ಡ ದಾಖಲೆ

# ಬಾಕ್ಸ್ ಆಫೀಸ್‌ನಲ್ಲಿ ಬಾರ್ಡರ್ 2 ಘರ್ಜನೆ: 300 ಕೋಟಿ ಕ್ಲಬ್‌ಗೆ ಮತ್ತೊಮ್ಮೆ ಎಂಟ್ರಿ ಕೊಟ್ಟ ಸನ್ನಿ ಡಿಯೋಲ್

ಬಿಡುಗಡೆಯಾದ ದಿನದಿಂದಲೇ ಪ್ರೇಕ್ಷಕರ ಗಮನ ಸೆಳೆದ ಬಾರ್ಡರ್ 2ಸಿನಿಮಾ ಇದೀಗ ಬಾಕ್ಸ್ ಆಫೀಸ್‌ನಲ್ಲಿ ಭರ್ಜರಿ ದಾಖಲೆ ಮಾಡುತ್ತಾ ಮುನ್ನಡೆಯುತ್ತಿದೆ. ಮೂರನೇ ವಾರಾಂತ್ಯ ಮುಗಿಯುವಷ್ಟರಲ್ಲಿ ಈ ಚಿತ್ರ 300 ಕೋಟಿ ಕ್ಲಬ್ ಸೇರುವ ಮೂಲಕ ಸನ್ನಿಡಿಯೋಲ್ ಅವರ ಕರಿಯರ್‌ನಲ್ಲಿ ಮತ್ತೊಂದು ದೊಡ್ಡದಾಖಲೆಯನ್ನು ನಿರ್ಮಿಸಿದೆ. ಅನುರಾಗ್ ಸಿಂಗ್ ನಿರ್ದೇಶನದ ಈ ಯುದ್ಧ ಕಥೆಯ ಸಿನಿಮಾ, 6.90 ಕೋಟಿ ರೂ. ಸಂಗ್ರಹಿಸುವ ಮೂಲಕ ಒಟ್ಟು 17 ದಿನಗಳಲ್ಲಿ 309.4 ಕೋಟಿ ರೂ. ಗಳಿಕೆ ತಲುಪಿದೆ. ಮೊದಲ ವಾರದಲ್ಲೇ 224 ಕೋಟಿ ರೂ. ಗಳಿಸಿದ್ದ ಚಿತ್ರ ಎರಡನೇ ವಾರದಲ್ಲಿ ಸ್ವಲ್ಪ ಕುಸಿತ ಕಂಡರೂ ಉತ್ತಮ ಪ್ರದರ್ಶನ ಮುಂದುವರಿಸಿದೆ.

ಮೂರನೇ ವಾರಾಂತ್ಯದಲ್ಲಿ ಕೂಡ ಸುಮಾರು 15 ಕೋಟಿ ರೂ. ಸೇರ್ಪಡೆಗೊಂಡಿದೆ. ಈ ಸಿನಿಮಾದ ಮೂಲಕ ವರುಣ್ ಧವನ್ ಮೊದಲ ಬಾರಿಗೆ 300 ಕೋಟಿ ಕ್ಲಬ್ ತಲುಪಿದ ಚಿತ್ರವನ್ನು ಪಡೆದಿದ್ದಾರೆ. ದಿಲ್ಜಿತ್ ದೋಸಾಂಜ್ ಮತ್ತು ಅಹಾನ್ ಶೆಟ್ಟಿ ಪ್ರಮುಖ ಪಾತ್ರಗಳಲ್ಲಿ ನಟಿಸಿರುವುದು ಚಿತ್ರದ ಮತ್ತೊಂದು ವಿಶೇಷ.

# ಆ ಒಂದು ಘಟನೆ ಶ್ರುತಿ ಹಾಸನ್ ಧೃತಿಗೆಡಿಸಿತು




ಬಾಲಿವುಡ್ ನಟಿ ಮತ್ತು ಕಮಲ್ ಹಾಸನ್ ಅವರ ಪುತ್ರಿ, ನಟಿ ಶ್ರುತಿ ಹಾಸನ್ ಸದಾ ಸುದ್ದಿಯಲ್ಲಿರುವ ಹೆಸರು. ಶ್ರುತಿ ಹಾಸನ್ ತಮಿಳು ಚಿತ್ರಗಳಲ್ಲಿ ಮಾತ್ರವಲ್ಲದೆ ಬಾಲಿವುಡ್ ಚಿತ್ರಗಳಲ್ಲಿಯೂ ದೊಡ್ಡ ಸದ್ದು ಮಾಡಿದ್ದಾರೆ. ಅವರು ಚಿತ್ರರಂಗದಲ್ಲಿ ವಿಶಿಷ್ಟ ಗುರುತನ್ನು ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅವರು ತಮ್ಮ ತಂದೆಯನ್ನು ಅವಲಂಬಿಸದೆ ಹಗಲಿರುಳು ಶ್ರಮಿಸಿದ್ದಾರೆ. ಈಗ ಅವರು ತಂದೆ-ತಾಯಿ ಬೇರ್ಪಟ್ಟ ಬಗ್ಗೆ ಮಾತನಾಡಿದ್ದಾರೆ.

ಶ್ರುತಿ ಹಾಸನ್ ಅವರ ಚಿತ್ರಗಳು ಅಭಿಮಾನಿಗಳಿಂದ ಅಪಾರ ಪ್ರೀತಿಯನ್ನು ಪಡೆದಿವೆ. ಇತ್ತೀಚೆಗೆ, ಒಂದು ಸಂದರ್ಶನದಲ್ಲಿ, ಶ್ರುತಿ ಹಾಸನ್ ತಮ್ಮ ವೈಯಕ್ತಿಕ ಜೀವನದ ಬಗ್ಗೆ ಮಾತನಾಡಿದ್ದಾರೆ. ಅವರು ತಮ್ಮ ಬಾಲ್ಯ ಹೇಗಿತ್ತು ಮತ್ತು ಅವರ ಪೋಷಕರು ಬೇರ್ಪಟ್ಟ ನಂತರ ಅದರ ಪರಿಣಾಮ ಏನಾಯಿತು ಎಂಬುದನ್ನು ಬಹಿರಂಗಪಡಿಸಿದ್ದಾರೆ. ಅವರ ಮನೆಯಲ್ಲಿ ದೇವರ ಫೋಟೋ ಇಲ್ಲ ಎಂಬ ಅಂಶದ ಬಗ್ಗೆಯೂ ಅವರು ಪ್ರತಿಕ್ರಿಯಿಸಿದ್ದಾರೆ. ಶ್ರುತಿ ಹಾಸನ್ ಅವರ ಈ ಸಂದರ್ಶನವು ಬಹಳಷ್ಟು ಚರ್ಚೆಯಾಗುತ್ತಿದೆ.

ರಣವೀರ್ ಅಲಹಾಬಾದಿಯಾ ಜೊತೆ ಮಾತನಾಡಿದ ಶ್ರುತಿ ಹಾಸನ್, ‘ಮಕ್ಕಳ ಮೇಲೆ ತಾಯಿಯ ಪ್ರಭಾವ ಹೆಚ್ಚು. ನಾವು ಹೆಚ್ಚಾಗಿ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದೆವು. ನಾನು ಹಿಂದಿ ಕಲಿಯುವುದಿಲ್ಲ, ತಮಿಳು ಮಾತ್ರ ಕಲಿಯುತ್ತೇನೆ ಎಂದು ನನ್ನ ತಾಯಿ ಹೆದರುತ್ತಿದ್ದರು. ನಾನು ಇಂಗ್ಲಿಷ್ ಮಾಧ್ಯಮಕ್ಕೆ ಹೋಗಿದ್ದರಿಂದ ನನ್ನ ತಮಿಳು ಎಲ್ಲೋ ದುರ್ಬಲವಾಯಿತು’ ಎಂದಿದ್ದಾರೆ ಅವರು. ನನ್ನ ಹೆತ್ತವರು ಬೇರ್ಪಟ್ಟಾಗ, ನಾನು ಮುಂಬೈಗೆ ಬಂದೆ.

# ತಮ್ಮದೇ ಸಿನಿಮಾ ಪ್ರಚಾರಕ್ಕೆ ಗಿಲ್ಲಿ ನಟ ಯಾಕೆ ಹೋಗಿಲ್ಲ..? ಕೊನೆಗೂ ಸಿಕ್ತು ಉತ್ತರ



ಬಿಗ್ ಬಾಸ್ ಕನ್ನಡ ಸೀಸನ್ 12 ಶೋನಿಂದ ಗಿಲ್ಲಿ ನಟ ಪಡೆದ ಜನಪ್ರಿಯತೆ ಅಪಾರ. ಆ ರಿಯಾಲಿಟಿ ಶೋಗೆ ಹೋಗುವುದಕ್ಕೂ ಮುನ್ನವೇ ಗಿಲ್ಲಿ ಅವರು ಕೆಲವು ಸಿನಿಮಾಗಳಲ್ಲಿ ಅಭಿನಯಿಸಿದ್ದರು. ಈಗ ಆ ಸಿನಿಮಾಗಳ ಬಗ್ಗೆ ಟಾಕ್ ಶುರು ಆಗಿದೆ. ಗಿಲ್ಲಿ ನಟ ಅಭಿನಯದ ‘ಸರ್ಕಾರಿ ಶಾಲೆ ಹೆಚ್8’ ಸಿನಿಮಾ ಇತ್ತೀಚೆಗೆ ರಿಲೀಸ್ ಆಯಿತು. ಆ ಚಿತ್ರದಲ್ಲಿ ಗಿಲ್ಲಿ ಅವರಿಗೆ ಒಂದು ಪಾತ್ರವಿದೆ. ಆದರೆ ಸಿನಿಮಾದ ಪ್ರಚಾರಕ್ಕೆ ಗಿಲ್ಲಿ ನಟ ಬಂದಿಲ್ಲ ಎಂದು ಚಿತ್ರತಂಡ ಗರಂ ಆಗಿದೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ದೂರು ಕೂಡ ನೀಡಲಾಗಿದೆ. ಆ ಬಗ್ಗೆ ಗಿಲ್ಲಿ ನಟ ಮೊದಲ ಪ್ರತಿಕ್ರಿಯೆ ನೀಡಿದ್ದಾರೆ.ಗಿಲ್ಲಿ ನಟ ಪ್ರಮುಖ ಪಾತ್ರ ಮಾಡಿರುವ ‘ಸೂಪರ್ ಹಿಟ್’ ಸಿನಿಮಾ ಈಗ ಬಿಡುಗಡೆಗೆ ಸಜ್ಜಾಗಿದೆ. ಆ ಸಿನಿಮಾದ ಸುದ್ದಿಗೋಷ್ಠಿಯಲ್ಲಿ ಗಿಲ್ಲಿ ಅವರಿಗೆ ಹಲವು ಪ್ರಶ್ನೆ ಎದುರಾಯಿತು. ‘ಸರ್ಕಾರಿ ಶಾಲೆ ಹೆಚ್8’ ಚಿತ್ರದ ಪ್ರಚಾರಕ್ಕೆ ಯಾಕೆ ಹೋಗಿಲ್ಲ ಎಂಬ ಪ್ರಶ್ನೆಗೆ ಅವರು ಉತ್ತರ ನೀಡಿದರು.‘ಸರ್ಕಾರಿ ಶಾಲೆ ಹೆಚ್8 ಸಿನಿಮಾ ಮಾಡಿ ನನ್ನ ಪ್ರಕಾರ 2ರಿಂದ ಎರಡೂವರೆ ವರ್ಷ ಆಗಿರಬಹುದು. ಅದರಲ್ಲಿ ನಟನೆ ಮಾಡಿದ್ದೇನೆ. ನಾನು ನನ್ನ ಬೈಟ್ಸ್ ಕಳಿಸಿದ್ದೇನೆ. ಹಾಗಿದ್ದರೂ ಕೂಡ ಅವರು ಯಾಕೆ ದೂರು ನೀಡಿದರೋ ಗೊತ್ತಿಲ್ಲ. ನನಗೂ ಒಂದಷ್ಟು ಕೆಲಸಗಳ ಒತ್ತಡ ಇತ್ತು. ನಾನು ಫೋನ್ ಎತ್ತಿಲ್ಲ ಎಂಬ ಕಾರಣಕ್ಕೆ ಪಾಪ ಅವರಿಗೆ ಆ ರೀತಿ ಆಗಿರಬಹುದು. ಅವರದ್ದು ತಪ್ಪಿಲ್ಲ ಎಂದು ಗಿಲ್ಲಿ ನಟ ಹೇಳಿದ್ದಾರೆ.

# ಶಸ್ತ್ರಚಿಕಿತ್ಸೆಗೊಳಗಾದ ಟೀಂ ಇಂಡಿಯಾ ವೇಗಿ



ದಕ್ಷಿಣ ಆಫ್ರಿಕಾ ವಿರುದ್ಧದ ಅಭ್ಯಾಸ ಪಂದ್ಯದಲ್ಲಿ ಗಾಯಗೊಂಡ ಟೀಂ ಇಂಡಿಯಾದ ವೇಗಿ ಹರ್ಷಿತ್ ರಾಣಾ ಟಿ20 ವಿಶ್ವಕಪ್‌ನಿಂದ ಹೊರಬಿದ್ದಿದ್ದರು. ಇದೀಗ ಅವರು ಮೊಣಕಾಲು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. ಇನ್‌ಸ್ಟಾಗ್ರಾಮ್‌ನಲ್ಲಿ ಚೇತರಿಕೆ ಭರವಸೆ ನೀಡಿದ್ದಾರೆ. ಸಿರಾಜ್, ರಾಣಾ ಬದಲಿಗೆ ತಂಡಕ್ಕೆ ಸೇರಿದ್ದರು. ವಾಷಿಂಗ್ಟನ್ ಸುಂದರ್ ಮತ್ತು ಜಸ್ಪ್ರೀತ್ ಬುಮ್ರಾ ಗುಣಮುಖರಾಗಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧದ ಅಭ್ಯಾಸ ಪಂದ್ಯದ ವೇಳೆ ಗಾಯಕ್ಕೆ ತುತ್ತಾಗಿ ಮೈದಾನ ತೊರೆದಿದ್ದ ಟೀಂ ಇಂಡಿಯಾ ಯುವ ವೇಗಿ ಹರ್ಷಿತ್ ರಾಣಾ, ಟಿ20 ವಿಶ್ವಕಪ್ ಆರಂಭಕ್ಕೂ ಮುನ್ನವೇ ಪಂದ್ಯಾವಳಿಯಿಂದ ಹೊರಬಿದ್ದಿದ್ದರು. ತಂಡಕ್ಕೆ ಆಘಾತ ನೀಡಿತ್ತು. ರಾಣಾ ಬದಲಿಗೆ ಬಿಸಿಸಿಐ ಮೊಹಮ್ಮದ್ ಸಿರಾಜ್‌ರನ್ನು ತಂಡಕ್ಕೆ ಸೇರಿಸಿಕೊಂಡಿತ್ತು. ತಂಡದಿಂದ ಹೊರಬಿದ್ದಿರುವ ಹರ್ಷಿತ್ ರಾಣಾ ಇದೀಗ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ.

ತಾನು ಮೊಣಕಾಲಿನ ಶಸ್ತ್ರಚಿಕಿತ್ಸೆಗೆ ಒಳಗಾಗಿರುವುದನ್ನು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ರಾಣಾ ಹಂಚಿಕೊಂಡಿದ್ದಾರೆ. ಆಸ್ಪತ್ರೆಯ ಹಾಸಿಗೆಯ ಮೇಲೆ ಮಲಗಿರುವ ಫೋಟೋವನ್ನು ಇನ್ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿರುವ ರಾಣಾ, ಬೇಗನೇ ಚೇತರಿಸಿಕೊಂಡು ಮತ್ತೆ ತಂಡಕ್ಕೆ ಮರಳುವುದಾಗಿ ತಿಳಿಸಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧದ ಅಭ್ಯಾಸ ಪಂದ್ಯದ ಸಮಯದಲ್ಲಿ ಮೊಣಕಾಲಿನ ಗಾಯಕ್ಕೆ ತುತ್ತಾಗಿದ್ದ ರಾಣಾ, ರನ್-ಅಪ್ ಮಾಡುವುದಕ್ಕೆ ಕಷ್ಟಪಡಬೇಕಾಯಿತು.

ಇದರಿಂದಾಗಿ ಅವರು ಕೇವಲ ಒಂದು ಓವರ್ ಬೌಲಿಂಗ್ ಮಾಡಿ ಅಭ್ಯಾಸ ಪಂದ್ಯದಿಂದ ಹೊರ ನಡೆದಿದ್ದರು. ರಾಣಾ ಅವರ ಗಾಯದ ಗಂಭೀರತೆಯನ್ನು ಅರಿತು ಅವರನ್ನು ಟಿ20 ವಿಶ್ವಕಪ್‌ನಿಂದ ಹೊರಗಿಡಲಾಗಿತ್ತು. 2026 ರ ಟಿ20 ವಿಶ್ವಕಪ್‌ನಿಂದ ಹೊರಬೀಳುವ ಮೊದಲು, ಹರ್ಷಿತ್ ರಾಣಾ ಉತ್ತಮ ಫಾರ್ಮ್‌ನಲ್ಲಿದ್ದರು. ಬೌಲಿಂಗ್‌ನಲ್ಲಿ ಮಾತ್ರವಲ್ಲದೆ ಬ್ಯಾಟಿಂಗ್‌ನಲ್ಲೂ ರಾಣಾ ಅವರ ಪ್ರದರ್ಶನ ಪಂದ್ಯಾವಳಿ ಆರಂಭಕ್ಕೂ ಮುನ್ನವೇ ಅವರು ಗಾಯಗೊಂಡಿದ್ದು ತಂಡದ ಚಿಂತೆ ಹೆಚ್ಚಿಸಿತ್ತು. ಏಕೆಂದರೆ ಹರ್ಷಿತ್ ಅವರಂತೆಯೇ, ವಾಷಿಂಗ್ಟನ್ ಸುಂದರ್ ಕೂಡ ಗಾಯಗೊಂಡಿದ್ದರು. ಪ್ರಸ್ತುತ ಚೇತರಿಸಿಕೊಂಡಿರುವ ಸುಂದರ್ ತಂಡವನ್ನು ಕೂಡಿಕೊಂಡಿದ್ದಾರೆ. ಟೀಂ ಇಂಡಿಯಾ ಟಿ20 ವಿಶ್ವಕಪ್‌ನಲ್ಲಿ ತನ್ನ ಎರಡನೇ ಪಂದ್ಯವನ್ನು ಫೆಬ್ರವರಿ 12 ರಂದು ನಮೀಬಿಯಾ ವಿರುದ್ಧ ಆಡಲಿದ್ದು, ಆ ಪಂದ್ಯದಲ್ಲಿ ವಾಷಿಂಗ್ಟನ್ ಸುಂದರ್‌ಗೆ ಆಡುವ ಅವಕಾಶ ಸಿಗಬಹುದು.

ಸುಂದರ್ ಮಾತ್ರವಲ್ಲದೆ ಜ್ವರದಿಂದ ಬಳಲುತ್ತಿದ್ದ ಜಸ್ಪ್ರೀತ್ ಬುಮ್ರಾ ಕೂಡ ಇದೀಗ ಚೇತರಿಸಿಕೊಂಡಿದ್ದು ತಂಡವನ್ನು ಕೂಡಿಕೊಂಡಿದ್ದಾರೆ. ಹೀಗಾಗಿ ಆ ಪಂದ್ಯದಲ್ಲಿ ಇವರಿಬ್ಬರು ಆಡಬಹುದು.

# ಕೆಎಲ್ ರಾಹುಲ್ 25ನೇ ಶತಕದ ಝಲಕ್



ರಣಜಿ ಟ್ರೋಫಿಯ ನಾಲ್ಕನೇ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕರ್ನಾಟಕ ಹಾಗೂ ಮುಂಬೈ ತಂಡಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಕರ್ನಾಟಕ ತಂಡದ ಪರ ಕೆಎಲ್ ರಾಹುಲ್ ಎರಡನೇ ಇನ್ನಿಂಗ್ಸ್ ನಲ್ಲಿ ಶತಕ ಬಾರಿಸುವ ಮೂಲಕ ಸಂಕಷ್ಟದಿಂದ ತಂಡಕ್ಕೆ ನೆರವಾದರು. ಎರಡನೇ ಇನ್ನಿಂಗ್ಸ್‌ನಲ್ಲಿ 130 ರನ್ ಬಾರಿಸಿದ ರಾಹುಲ್, ಈ ಶತಕದೊಂದಿಗೆ ಕರ್ನಾಟಕ ತಂಡದ ಗೆಲುವನ್ನು ಖಚಿತಪಡಿಸಿದರು. ಮುಂಬೈ 325 ರನ್‌ಗಳ ಗುರಿಯನ್ನು ಬೆನ್ನಟ್ಟಿ ಕರ್ನಾಟಕ 4 ವಿಕೆಟ್‌ಗಳಿಂದ ಪಂದ್ಯವನ್ನು ಗೆದ್ದುಕೊಂಡಿತು. ಇದು ಕೆಎಲ್ ರಾಹುಲ್ ಪ್ರಥಮ ದರ್ಜೆ ವೃತ್ತಿಜೀವನದ 25ನೇ ಶತಕ ಎಂಬುದು ಮತ್ತಷ್ಟು ವಿಶೇಷವಾಗಿತ್ತು.ಈ ಗೆಲುವಿನೊಂದಿಗೆ ಕರ್ನಾಟಕ ಸೆಮಿಫೈನಲ್‌ಗೆ ತಲುಪಿದೆ. ಕೆಎಲ್ ರಾಹುಲ್ ಪಂದ್ಯದ ನಾಲ್ಕನೇ ಇನ್ನಿಂಗ್ಸ್‌ನಲ್ಲಿ ಈ ಶತಕ ಬಾರಿಸಿದ್ದು ಅವರ ಬ್ಯಾಟಿಂಗ್ ಕೌಶಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿತ್ತು. ಏಕೆಂದರೆ ಟೆಸ್ಟ್ ಪಂದ್ಯದ ನಾಲ್ಕನೇ ಇನ್ನಿಂಗ್ಸ್‌ನಲ್ಲಿ ಶತಕ ಬಾರಿಸುವುದು ಅಷ್ಟು ಸುಲಭದ ಮಾತಲ್ಲ. ಆದರೆ ರಾಹುಲ್ ಈ ಕೆಲಸ ಮಾಡಿ ತಂಡವನ್ನು ಸೋಲಿನಿಂದ ಪಾರು ಮಾಡಿದರು. ಕೆಎಲ್ ರಾಹುಲ್ ತಮ್ಮ ಇನ್ನಿಂಗ್ಸ್‌ನಲ್ಲಿ 14 ಬೌಂಡರಿಗಳು ಮತ್ತು ಒಂದು ಸಿಕ್ಸ್ ಬಾರಿಸಿದರು.

**120 ರನ್‌ಗಳಿಗೆ ಮುಂಬೈ ಆಲೌಟ್**: ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ತಂಡ ಕರ್ನಾಟಕದ ಕರಾರುವಕ್ಕಾದ ದಾಳಿಗೆ ತತ್ತರಿಸಿ ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ 120 ರನ್‌ಗಳಿಗೆ ಆಲೌಟ್ ಆಯಿತು. ತಂಡದ ಪರ ಅಖಿಲ್ ಹೆರ್ವಾಡ್ಕರ್ 60 ರನ್‌ಗಳ ಇನ್ನಿಂಗ್ಸ್ ಬಿಟ್ಟರೆ ಉಳಿದ ಬ್ಯಾಟ್ಸ್‌ಮನ್‌ಗಳು ಹೇಳಿಕೊಳ್ಳುವಂತಹ ಇನ್ನಿಂಗ್ಸ್ ಆಡಲಿಲ್ಲ. ಇತ್ತ ಕರ್ನಾಟಕ ಪರ ವಿದ್ವತ್ ಕಾವೇರಪ್ಪ, ಪ್ರಸಿದ್ಧ್ ಕೃಷ್ಣ ಹಾಗೂ ಶ್ರೇಯಸ್ ಗೋಪಾಲ್ ತಲಾ 3 ವಿಕೆಟ್ ಪಡೆದರು. ಮುಂಬೈ ತಂಡವನ್ನು 120 ರನ್‌ಗಳಿಗೆ ಆಲೌಟ್ ಮಾಡಿ ಮೊದಲ ಇನ್ನಿಂಗ್ಸ್ ಆರಂಭಿಸಿದ ಕರ್ನಾಟಕಕ್ಕೂ ದೊಡ್ಡ ಮೊತ್ತವನ್ನು ಪೇರಿಸಲು ಸಾಧ್ಯವಾಗಲಿಲ್ಲ. ತಂಡದ ಅಗ್ರ ಮೂವರು ಬ್ಯಾಟ್ಸ್‌ಮನ್‌ಗಳು ಎರಡಂಕಿ ಮೊತ್ತ ದಾಟಿದನ್ನು ಬಿಟ್ಟರೆ ಉಳಿದವರೆಲ್ಲ ಒಂದಂಕಿಗೆ ಸುಸ್ತಾದರು. ಆದಾಗ್ಯೂ, ತಂಡದ ಪರ ಸ್ಮರಣೀಯ ಇನ್ನಿಂಗ್ಸ್ ಆಡಿದ ಮಯಾಂಕ್ ಅಗರ್ವಾಲ್ 92 ರನಗಳ ಇನ್ನಿಂಗ್ಸ್ ಆಡುವ ಮೂಲಕ ಮೊದಲ ಇನ್ನಿಂಗ್ಸ್‌ನಲ್ಲಿ ತಂಡಕ್ಕೆ 53 ರನ್‌ಗಳ ಮುನ್ನಡೆ ತಂದುಕೊಟ್ಟರು. ಅಂತಿಮವಾಗಿ ಕರ್ನಾಟಕ 173 ರನ್‌ಗಳಿಗೆ ಆಲೌಟ್ ಆಯಿತು.

ಕೇವಲ 120 ರನ್‌ಗಳಿಗೆ ಆಲೌಟ್ ಆದ್ದ ಮುಂಬೈ ತಂಡ ಎರಡನೇ ಇನ್ನಿಂಗ್ಸ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿ 377 ರನ್ ಕಲೆಹಾಕಿತು.

# ಒಂದೊಂದೇ ಇನಿಂಗ್ಸ್ ಬಳಿಕ ಸೊನ್ನೆ ಸುತ್ತುವ ಅಭಿಷೇಕ್



ಅಭಿಷೇಕ್ ಶರ್ಮಾ ಕಳೆದ 6 ಇನಿಂಗ್ಸ್‌ಗಳಲ್ಲಿ ಎರಡು ಸ್ಫೋಟಕ ಅರ್ಧಶತಕ ಸಿಡಿಸಿದ್ದಾರೆ. ನ್ಯೂಝಿಲೆಂಡ್ ವಿರುದ್ಧದ ಮೊದಲ ಟಿ20 ಪಂದ್ಯದಲ್ಲಿ ಕೇವಲ 35 ಎಸೆತಗಳಲ್ಲಿ 84 ರನ್ ಬಾರಿಸಿದ್ದರು. ಇದಾದ ಬಳಿಕ ನ್ಯೂಝಿಲೆಂಡ್ ವಿರುದ್ಧವೇ ಮೂರನೇ ಟಿ20 ಪಂದ್ಯದಲ್ಲಿ ಕೇವಲ 20 ಎಸೆತಗಳಲ್ಲಿ ಅಜೇಯ 68 ರನ್ ಚಚ್ಚಿದ್ದರು. ಈ ವಿಸ್ಫೋಟಕ ಅರ್ಧಶತಕಗಳ ಹೊರತಾಗಿಯೂ ಅಭಿಷೇಕ್ ಶರ್ಮಾ ಅವರ ಬ್ಯಾಟಿಂಗ್ ಟೀಮ್ ಇಂಡಿಯಾ ಚಿಂತೆಗೆ ಕಾರಣವಾಗಿದೆ. ಟಿ20 ಕ್ರಿಕೆಟ್‌ನಲ್ಲಿನ ಡೇಂಜರಸ್ ಬ್ಯಾಟ್ಸ್‌ಮನ್‌ಗಳಲ್ಲಿ ಅಭಿಷೇಕ್ ಶರ್ಮಾ ಕೂಡ ಒಬ್ಬರು. ಈಗಾಗಲೇ ತನ್ನ ಸ್ಫೋಟಕ ಬ್ಯಾಟಿಂಗ್ ಮೂಲಕ ಯುವ ದಾಂಡಿಗ ಸಂಚಲನ ಸೃಷ್ಟಿಸಿದ್ದಾರೆ. ಈ ಸಂಚಲನದ ಹೊರತಾಗಿಯೂ ಅಭಿ ಬ್ಯಾಟಿಂಗ್ ಮಾಡುತ್ತಿರುವುದು ಆಲ್ ಅಥವಾ ನಥಿಂಗ್ ಸ್ಟೈಲ್‌ನಲ್ಲಿ ಅಂದರೆ ಅಭಿಷೇಕ್ ಶರ್ಮಾ ಸ್ಥಿರ ಪ್ರದರ್ಶನ ನೀಡುವಲ್ಲಿ ಎಡವುತ್ತಿದ್ದಾರೆ. ಇದಕ್ಕೆ ಸಾಕ್ಷಿ ಅವರು ಕಳೆದ 6 ಇನಿಂಗ್ಸ್‌ಗಳಲ್ಲಿ ಕಲೆಹಾಕಿರುವ ಸ್ಕೋರ್. ಈ ಆರು ಇನಿಂಗ್ಸ್‌ಗಳಲ್ಲಿ ಅವರು ಮೂರು ಬಾರಿ ಸೊನ್ನೆ ಸುತ್ತಿದ್ದಾರೆ ಎಂಬುದೇ ಅಚ್ಚರಿ. ಇದಾಗ್ಯೂ ಅವರು ಔಟ್ ಆಫ್ ಫಾರ್ಮ್‌ನಲ್ಲಿಲ್ಲ ಎಂಬುದು ಸಹ ಉಲ್ಲೇಖಾರ್ಹ. ಏಕೆಂದರೆ ನಾಗ್‌ಪುರದಲ್ಲಿ ನಡೆದ ನ್ಯೂಝಿಲೆಂಡ್ ವಿರುದ್ಧದ ಮೊದಲ ಟಿ20 ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಕೇವಲ 35 ಎಸೆತಗಳಲ್ಲಿ 84 ರನ್ ಚಚ್ಚಿದ್ದರು. ಆದರೆ ರಾಯ್‌ಪುರದಲ್ಲಿ ನಡೆದ 2ನೇ ಪಂದ್ಯದಲ್ಲಿ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದ್ದರು. ಇನ್ನು ಗುವಾಹಟಿಯಲ್ಲಿ ನಡೆದ ನ್ಯೂಝಿಲೆಂಡ್ ವಿರುದ್ಧದ ಮೂರನೇ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಕೇವಲ 20 ಎಸೆತಗಳಲ್ಲಿ 68 ರನ್ ಚಚ್ಚಿದ್ದರು. ಆದರೆ ವಿಶಾಖಪಟ್ಟಣದಲ್ಲಿ ನಡೆದ ನಾಲ್ಕನೇ ಪಂದ್ಯದಲ್ಲಿ ಮತ್ತೆ ಶೂನ್ಯಕ್ಕೆ ಔಟಾಗುವ ಮೂಲಕ ನಿರಾಸೆ ಮೂಡಿಸಿದರು. ಇದಾದ ಬಳಿಕ ತಿರುವನಂತಪುರದಲ್ಲಿ ನಡೆದ ನ್ಯೂಝಿಲೆಂಡ್ ವಿರುದ್ಧದ ಕೊನೆಯ ಟಿ20 ಪಂದ್ಯದಲ್ಲಿ 16 ಎಸೆತಗಳಲ್ಲಿ 30 ರನ್ ಚಚ್ಚಿದ್ದರು. ಇದೀಗ ಟಿ20 ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ಯುಎಸ್ ಎ ವಿರುದ್ಧ ಶೂನ್ಯಕ್ಕೆ ಔಟಾಗಿದ್ದಾರೆ. ಅಂದರೆ ಅಭಿಷೇಕ್ ಶರ್ಮಾ ಪ್ರತಿ ಇನಿಂಗ್ಸ್ ಬಳಿಕ ಸೊನ್ನೆ ಸುತ್ತಿದ್ದಾರೆ. ಅಂದರೆ ಒಂದು ಇನಿಂಗ್ಸ್‌ನಲ್ಲಿ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸುತ್ತಿರುವ ಅಭಿಷೇಕ್ ಶರ್ಮಾ, ಮತ್ತೊಂದು ಇನಿಂಗ್ಸ್‌ನಲ್ಲಿ ಶೂನ್ಯಕ್ಕೆ ವಿಕೆಟ್ ಒಪ್ಪಿಸುತ್ತಿದ್ದಾರೆ. ಇದಕ್ಕೆ ಸಾಕ್ಷಿ ಕಳೆದ 6 ಪಂದ್ಯಗಳಲ್ಲಿ ಅವರು ಮೂರು ಬಾರಿ ಡಕ್ ಔಟ್ ಆಗಿರುವುದು.

# 25 ಪಂದ್ಯಗಳ ಸೋತ ಅಫ್ಘಾನ್

ಟಿ20 ಕ್ರಿಕೆಟ್‌ನಲ್ಲಿ ಅಫ್ಘಾನಿಸ್ತಾನ್ ತಂಡವು ಈವರೆಗೆ 160 ಪಂದ್ಯಗಳನ್ನಾಡಿದೆ. ಈ 160 ಮ್ಯಾಚ್‌ಗಳಲ್ಲಿ ಸೋತಿರುವುದು ಕೇವಲ 61 ಪಂದ್ಯಗಳಲ್ಲಿ ಮಾತ್ರ. ಇನ್ನು 96 ಪಂದ್ಯಗಳಲ್ಲಿ ಗೆಲುವು ದಾಖಲಿಸಿದೆ. ಇದರಲ್ಲಿ 25 ಗೆಲುವುಗಳನ್ನು ಅಮೋಘ ಜಯ ಎನ್ನಬಹುದು.ಏಕೆಂದರೆ ಅಫ್ಘಾನಿಸ್ತಾನ್ ತಂಡವು 180+ ರನ್‌ಗಳಿಸಿದಾಗ ಹೊಸ ಚರಿತ್ರೆಯೇ ಇರಲಿಲ್ಲ. ಬೃಹತ್ ಮೊತ್ತ ಪೇರಿಸಿದರೆ ಪಂದ್ಯ ಅಫ್ಘಾನ್ ಬೌಲರ್‌ಗಳು ಗೆಲ್ಲಿಸಿಕೊಡುತ್ತಿದ್ದರು. ಆದರೆ ಇದೇ ಮೊದಲ ಬಾರಿಗೆ ಅಫ್ಘಾನಿಸ್ತಾನ್ 180+ ರನ್‌ಗಳಿಸಿ ಸೋಲನುಭವಿಸಿದೆ.ಚೆನ್ನೈನ ಎಂಎ ಚಿದಂಬರಂ ಸ್ಟೇಡಿಯಂನಲ್ಲಿ ನಡೆದ ಟಿ20 ವಿಶ್ವಕಪ್‌ನ 4ನೇ ಪಂದ್ಯದಲ್ಲಿ ಅಫ್ಘಾನಿಸ್ತಾನ್ ಹಾಗೂ ನ್ಯೂಝಿಲೆಂಡ್ ತಂಡಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಅಫ್ಘಾನಿಸ್ತಾನ್ 20 ಓವರ್‌ಗಳಲ್ಲಿ ಬರೋಬ್ಬರಿ 182 ಕಲೆಹಾಕಿದ್ದರು. ಈ ಗುರಿಯನ್ನು ನ್ಯೂಝಿಲೆಂಡ್ ತಂಡ 17.5 ಓವರ್‌ಗಳಲ್ಲಿ ಚೇಸ್ ಮಾಡಿ 5 ವಿಕೆಟ್‌ಗಳ ಜಯ ಸಾಧಿಸಿದೆ. ಇದರೊಂದಿಗೆ ಅಫ್ಘಾನಿಸ್ತಾನ್ ತಂಡದ 180+ ರನ್‌ಗಳ ಗೆಲುವಿನ ನಾಗಾಲೋಟಕ್ಕೆ ತೆರೆ ಬಿದ್ದಿದೆ. ಅಂದರೆ ಅಫ್ಘಾನಿಸ್ತಾನ್ ತಂಡವು ಟಿ20 ಕ್ರಿಕೆಟ್‌ನಲ್ಲಿ 26 ಮ್ಯಾಚ್‌ಗಳಲ್ಲಿ 180 ಕ್ಕಿಂತ ಸ್ಕೋರ್‌ಗಳಿಸಿದ್ದಾರೆ. ಈ ವೇಳೆ 25 ಬಾರಿ ಗೆಲುವು ದಾಖಲಿಸಿದ್ದರು.

# ಭಾರತದ ವಿರುದ್ಧ ಪಂದ್ಯವಾಡಲು 3 ಬೇಡಿಕೆ ಮುಂದಿಟ್ಟ ಪಾಕಿಸ್ತಾನ್!




ಟಿ20 ವಿಶ್ವಕಪ್ 2026 ರಲ್ಲಿ ಭಾರತ ಮತ್ತು ಪಾಕಿಸ್ತಾನ್ ತಂಡಗಳು ಮುಖಾಮುಖಿಯಾಗಲಿದೆಯಾ ಈ ಪ್ರಶ್ನೆಗೆ ಇನ್ನೂ ಸಹ ಸ್ಪಷ್ಟ ಉತ್ತರ ಸಿಕ್ಕಿಲ್ಲ. ಏಕೆಂದರೆ ಭಾರತದ ವಿರುದ್ಧದ ಪಂದ್ಯವನ್ನು ಬಹಿಷ್ಕರಿಸುವುದಾಗಿ ಪಾಕಿಸ್ತಾನ್ ಕ್ರಿಕೆಟ್ ಮಂಡಳಿ ಘೋಷಿಸಿದೆ. ಇದರ ಬೆನ್ನಲ್ಲೇ ಐಸಿಸಿ, ಪಾಕ್ ಕ್ರಿಕೆಟ್ ಬೋರ್ಡ್‌ನ ಮನವೊಲಿಸುವ ಪ್ರಯತ್ನಕ್ಕೆ ಕೈ ಹಾಕಿದೆ. ಅತ್ತ ಐಸಿಸಿ ಅಧಿಕಾರಿಗಳು ಪಾಕಿಸ್ತಾನದಲ್ಲಿದ್ದು, ಈ ಮೂಲಕ ಪಿಸಿಬಿ ಜೊತೆ ಚರ್ಚೆ ಮುಂದುವರೆಸಿದ್ದಾರೆ. ಈ ಚರ್ಚೆಯ ನಡುವೆ ಪಾಕಿಸ್ತಾನ್ ಕ್ರಿಕೆಟ್ ಮಂಡಳಿಯು ಕೆಲ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ ಎಂಬ ಮಾಹಿತಿ ಹೊರಬಿದ್ದಿದೆ. ಆ ಬೇಡಿಕೆಗಳಾವುವು ಎಂದು ನೋಡುವುದಾದರೆ.

**ಆದಾಯ ಹೆಚ್ಚಳ:** ಐಸಿಸಿಯಿಂದ ಪಾಕಿಸ್ತಾನ್ ಕ್ರಿಕೆಟ್ ಮಂಡಳಿಯ ಆದಾಯವನ್ನು ಹೆಚ್ಚಿಸಬೇಕೆಂದು ಪಿಸಿಬಿ ಬೇಡಿಕೆಯಿಟ್ಟಿದೆ. ಈ ಬೇಡಿಕೆಗೆ ಸಮ್ಮತಿಸುವುದಾದರೆ ಮಾತ್ರ ಭಾರತದ ವಿರುದ್ಧ ಕಣಕ್ಕಿಳಿಯುವುದಾಗಿ ಪಾಕಿಸ್ತಾನ್ ಕ್ರಿಕೆಟ್ ಮಂಡಳಿ ತಿಳಿಸಿದೆ.**ದ್ವಿಪಕ್ಷೀಯ ಸರಣಿ:** ಭಾರತ ಮತ್ತು ಪಾಕಿಸ್ತಾನ್ ನಡುವಣ ದ್ವಿಪಕ್ಷೀಯ ಸರಣಿಯನ್ನು ಮತ್ತೆ ಆರಂಭಿಸಬೇಕೆಂದು ಪಿಸಿಬಿ ಆಗ್ರಹಿಸಿದೆ. ಇದಕ್ಕಾಗಿ ಐಸಿಸಿ ಮುಖ್ಯ ಪಾತ್ರವಹಿಸಬೇಕು. ಈ ಮೂಲಕ ಭಾರತ ಮತ್ತು ಪಾಕಿಸ್ತಾನ್ ನಡುವಣ ಸರಣಿಯನ್ನು ಪುನಃಸ್ಥಾಪಿಸುವ ಭರವಸೆ ನೀಡಬೇಕೆಂದು ಪಿಸಿಬಿ ಆಗ್ರಹಿಸಿದೆ.**ಹ್ಯಾಂಡ್‌ಶೇಕ್:** ಕ್ರೀಡಾ ಕ್ಷೇತ್ರದಲ್ಲಿ ರಾಜಕೀಯ ಮಾಡಬಾರದು. ಪಂದ್ಯಗಳ ವೇಳೆ ಹ್ಯಾಂಡ್‌ಶೇಕ್ ಪ್ರೋಟೋಕಾಲ್ ಜಾರಿ ಮಾಡಬೇಕು. ಈ ಪ್ರೊಟೋಕಾಲ್ ಪ್ರಕಾರ ಭಾರತ ಮತ್ತು ಪಾಕಿಸ್ತಾನ್ ಆಟಗಾರರು ಹ್ಯಾಂಡ್‌ಶೇಕ್ ಮಾಡುವುದನ್ನು ಕಡ್ಡಾಯ ಮಾಡಬೇಕೆಂದು ಪಿಸಿಬಿ ಬೇಡಿಕೆಯಿಟ್ಟಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966